www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೋವಿಡ್ ಜಾಗೃತಿ

ಕೋವಿಡ್ ನಾಲ್ಕನೇ ಅಲೆ ಸಾಧ್ಯತೆ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಮಾಸ್ಕ್ ಧರಿಸುವಂತೆ ಬಿಬಿಎಂಪಿ ಮಾರ್ಷಲ್‌ಗಳು ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ಸ್ಪೀಕರ್ ಮೂಲಕ ಜಾಗೃತಿ ಮೂಡಿಸಿದರು



ಪ್ರತಿ ಲೀಟರ್ ಹಾಲಿನ ದರ ₹3 ಹೆಚ್ಚಳಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿನ ಸಂಸ್ಕರಣೆ, ಕಚ್ಚಾ ಸಾಮಗ್ರಿಗಳು, ವಿದ್ಯುತ್ ಶುಲ್ಕ, ಸಾಗಾಣಿಕೆ ವೆಚ್ಚದಲ್ಲಿನ ದರ ಏರಿಕೆಯನ್ನು ಆಧರಿಸಿ ನಂದಿನಿ ಹಾಲಿನ ದರವನ್ನು ಪ್ರತಿ ಲೀಟರ್‌ಗೆ ₹ 3ರಷ್ಟು ಹೆಚ್ಚಳ ಮಾಡುವಂತೆ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳದ (ಕೆಎಂಎಫ್) ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಬೇಡಿಕೆ ಇಟ್ಟಿದ್ದಾರೆ.

ಈ ಕುರಿತು ಮಂಗಳವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಅಮೂಲ್ ಸೇರಿದಂತೆ ವಿವಿಧ ಸಹಕಾರ ಮತ್ತು ಖಾಸಗಿ ಹಾಲು ಉತ್ಪಾದನಾ ಸಂಸ್ಥೆಗಳು ಪ್ರತಿ ಲೀ.ಗೆ ₹ 8ರಿಂದ ₹ 10ರವರೆಗೆ ಹೆಚ್ಚಳ ಮಾಡಿವೆ. ರಾಜ್ಯದಲ್ಲಿ ಹಾಲಿನ ದರವನ್ನು ₹ 3ರಷ್ಟು ಹೆಚ್ಚಿಸಲು ಅನುಮತಿ ನೀಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಲಾಗಿದೆ' ಎಂದು ಹೇಳಿದ್ದಾರೆ.

ಪ್ರತಿ ಲೀ. ಹಾಲಿನ ದರವನ್ನು ₹ 3ರಷ್ಟು ಹೆಚ್ಚಳ ಮಾಡಲು ಅವಕಾಶ ನೀಡಿದರೆ ₹ 2 ಅನ್ನು ಹಾಲು ಉತ್ಪಾದಕ ರೈತರಿಗೆ ವರ್ಗಾಯಿಸಲಾಗುವುದು. ₹ 1 ಅನ್ನು ಹಾಲು ಉತ್ಪಾದಕರ ಸಹಕಾರ ಸಂಘ, ಹಾಲು ಒಕ್ಕೂಟಗಳು ಮತ್ತು ಮಾರಾಟಗಾರರಿಗೆ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಎರಡು ವರ್ಷಗಳ ಅವಧಿಯಲ್ಲಿ ಕೆಎಂಎಫ್ ಮತ್ತು ರಾಜ್ಯದ 14 ಹಾಲು ಒಕ್ಕೂಟಗಳ ವಹಿವಾಟಿನಲ್ಲಿ ಶೇಕಡ 20ರಷ್ಟು ಹೆಚ್ಚಳವಾಗಿದೆ. 2021–22ರಲ್ಲಿ ₹ 19,732 ಕೋಟಿ ವಹಿವಾಟು ನಡೆದಿದೆ. 2022–23ರಲ್ಲಿ ₹ 25,000 ಕೋಟಿ ವಹಿವಾಟು ನಡೆಸುವ ಗುರಿ ಹೊಂದಲಾಗಿದೆ ಎಂದು ಅವರು ಹೇಳಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ₹ 15.15 ಕೋಟಿಯನ್ನು ಹಾಲು ಉತ್ಪಾದಕರ ಸಹಕಾರ ಸಂಘಗಳ ಕಟ್ಟಡ ನಿರ್ಮಾಣಕ್ಕೆ ನೀಡಲಾಗುವುದು. ಪಶು ಸಂಗೋಪನೆಗೆ ಪ್ರೋತ್ಸಾಹ ನೀಡಲು ₹ 50 ಕೋಟಿ ಒದಗಿಸಲಾಗುವುದು. 2022–23ರಲ್ಲಿ ₹ 300 ಕೋಟಿ ಮೌಲ್ಯದ ಹಾಲು ಮತ್ತು ಹಾಲಿನ ಉತ್ಪನ್ನಗಳ ರಫ್ತು ಮಾಡುವ ಗುರಿಯನ್ನು ಕೆಎಂಎಫ್ ಹೊಂದಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣ


ದಾಖಲೆ ಪ್ರಮಾಣದ ಸರಕು ಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವು ಕೋವಿಡ್ ನಡುವೆಯೂ 2021–22ರ ಆರ್ಥಿಕ ವರ್ಷದಲ್ಲಿ ಅತ್ಯಂತ ಹೆಚ್ಚು ಸರಕು ಸಾಗಣೆ ಮಾಡಿದೆ. ಆರ್ಥಿಕ ವರ್ಷದ ಆರಂಭಿಕ ದಿನದಿಂದ 4,11,513 ಟನ್ ಸರಕು ಸಾಗಣೆ ಮಾಡಿದ್ದು ಈ ನಿಲ್ದಾಣದ ಮಟ್ಟಿಗೆ ಸಾರ್ವಕಾಲಿಕ ದಾಖಲೆ.

2020–21 ನೇ ಸಾಲಿಗೆ ಹೋಲಿಸಿದರೆ ಸರಕು ಸಾಗಣೆಯಲ್ಲಿ ಶೇ 26ರಷ್ಟು ಹೆಚ್ಚಳವಾಗಿದೆ. ವಿಮಾನ ನಿಲ್ದಾಣವು 2020–21ರಲ್ಲಿ 3,26,643 ಟನ್ ಸರಕು ಸಾಗಿಸಿತ್ತು. ಅಂತರರಾಷ್ಟ್ರೀಯ ಸರಕು ಸಾಗಣೆ ಶೇ 31.1ರಷ್ಟು ಹಾಗೂ ಸ್ಥಳೀಯ ಸರಕು ಸಾಗಣೆಯು ಶೇ.17ರಷ್ಟು ವೃದ್ಧಿಸಿದೆ. ಕೋವಿಡ್ ಪೂರ್ವದ ಮಟ್ಟದ ಪ್ರಗತಿ ಸಾಧಿಸಿದ ದೇಶದ ಏಕೈಕ ಪ್ರಮುಖ ವಿಮಾನನಿಲ್ದಾಣ ಎಂಬ ಹೆಗ್ಗಳಿಕೆಗೆ ವಿಮಾನನಿಲ್ದಾಣವು ಪಾತ್ರವಾಗಿದೆ.

ಹಣ್ಣು, ತರಕಾರಿಗಳ ಸಾಗಣೆಯಲ್ಲಿ ವಿಮಾನ ನಿಲ್ದಾಣವು ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ದೇಶದ ಒಟ್ಟು ಹಣ್ಣು ತರಕಾರಿಗಳ ಸಾಗಣೆಯಲ್ಲಿ ಶೇ 31ರಷ್ಟು ಪಾಲನ್ನು ಈ ವಿಮಾನನಿಲ್ದಾಣವೇ ನಿರ್ವಹಿಸುತ್ತಿದೆ.



ಅಂತರರಾಷ್ಟ್ರೀಯ ಸರಕು ಸಾಗಣೆ (ಆಮದು ಮತ್ತು ರಫ್ತು) ಅಕ್ಟೋಬರ್ 2021ರಲ್ಲಿ ಅತ್ಯಂತ ಹೆಚ್ಚು (25,695 ಟನ್) ದಾಖಲಾಗಿತ್ತು. ಈ ವಿಮಾನ ನಿಲ್ದಾಣವು ದೇಶದ ಸರಕು ಸಾಗಣೆಯಲ್ಲಿ ಶೇ 13ರಷ್ಟು ಪಾಲನ್ನು ಮತ್ತು ದಕ್ಷಿಣ ಭಾರತದದಲ್ಲಿ ನಡೆಯುವ ಸರಕು ಸಾಗಣೆಯಲ್ಲಿ ಶೇ 45ರಷ್ಟು ಪಾಲನ್ನು ನಿರ್ವಹಿಸುತ್ತದೆ.

ಪ್ರಯಾಣಿಕರ ಪ್ರಮಾಣ ಹೆಚ್ಚಳ: ಈ ವಿಮಾನನಿಲ್ದಾಣವನ್ನು ಬಳಸುವ ಪ್ರಯಾಣಿಕರ ಪ್ರಮಾಣವು ಮತ್ತೆ ಚೇತರಿಕೆಯ ಹಾದಿ ಹಿಡಿದಿದೆ. 2020–21ಕ್ಕೆ ಹೋಲಿಸಿದರೆ 2021–22ರಲ್ಲಿ ದೇಶದೊಳಗಿನ ನಗರಗಳ ಪ್ರಯಾಣದಲ್ಲಿ ಶೇ 45ರಷ್ಟು ಹಾಗೂ ಅಂತರರಾಷ್ಟ್ರೀಯ ಪ್ರಯಾಣದಲ್ಲಿ ಶೇ 136ರಷ್ಟು ಪ್ರಗತಿ ದಾಖಲಾಗಿದೆ. ವಿಮಾನ ನಿಲ್ದಾಣವು 2021–22ರಲ್ಲಿ 1.63 ಕೋಟಿ ಪ್ರಯಾಣಿಕರನ್ನು ಬರಮಾಡಿಕೊಂಡಿದೆ. 2020–21ರಲ್ಲಿ 1.09 ಕೋಟಿ ಪ್ರಯಾಣಿಕರನ್ನು ಬರಮಾಡಿಕೊಂಡಿತ್ತು. 2019–20ರಲ್ಲಿನ ಪ್ರಯಾಣಿಕರ ನಿರ್ವಹಣೆಗೆ ಹೋಲಿಸಿದರೆ, ವಿಮಾನ ನಿಲ್ದಾಣವು ಶೇ 54ರಷ್ಟು ಪುನಃಶ್ಚೇತನ ಕಂಡಿದೆ. ದೇಶದೊಳಗಿನ ವಿಮಾನನಿಲ್ದಾಣಗಳ ಪ್ರಯಾಣಿಕರ ನಿರ್ವಹಣೆಯಲ್ಲಿ ಶೇ 55ರಷ್ಟು ಹಾಗೂ ಅಂತರರಾಷ್ಟ್ರೀಯ ಪ್ರಯಾಣಿಕರ ನಿರ್ವಹಣೆಯಲ್ಲಿ ಶೇ 24ರಷ್ಟು ಪುನಃಶ್ಚೇತನ ಕಂಡಿದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಸ್ಥೆ (ಬಿಐಎಎಲ್) ಆಡಳಿತ ನಿರ್ದೇಶಕ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹರಿಮರಾರ್, 'ಸುಸ್ಥಿರ ಆವಿಷ್ಕಾರಗಳು ಮತ್ತು ತಾಂತ್ರಿಕ ಸುಧಾರಣೆಗಳ ಮೂಲಕ ಉತ್ಕೃಷ್ಟ ಸೇವೆ ಒದಗಿಸುವ ನಮ್ಮ ಬದ್ಧತೆಯನ್ನು ಈ ಸಾಧನೆಯು ಪ್ರತಿಫಲಿಸುತ್ತದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ವಿಮಾನ ನಿಲ್ದಾಣದಿಂದ ದೇಶದೊಳಗಿನ ನಗರಗಳಿಗೆ ನೇರ ಸೇವೆಯು ಹಿಂದಿನ ವರ್ಷಕ್ಕೆ (ಶೇ 54) ಹೋಲಿಸಿದರೆ ಈ ಬಾರಿ ವೃದ್ಧಿಸಿದೆ (ಶೇ 76ಕ್ಕೆ). ಎರಡನೇ ಮತ್ತು ಮೂರನೇ ಹಂತದ ನಗರಗಳಿಗೆ ಸಂಪರ್ಕ ಹೆಚ್ಚಿದ್ದರಿಂದ ಈ ಪ್ರಗತಿ ಸಾಧ್ಯವಾಗಿದೆ.

ಒಟ್ಟು ವಾಯುಯಾನದಲ್ಲಿ ಪ್ರಗತಿ: 2020–21ಕ್ಕೆ ಹೋಲಿಸಿದರೆ, 2021–22ರಲ್ಲಿ ವಿಮಾನ ನಿಲ್ದಾಣದಲ್ಲಿ ವಾಯುಯಾನ ಶೇ 64ರಷ್ಟು ಪುನಶ್ಚೇತನ ಕಂಡಿದೆ. ದೇಶದೊಳಗಿನ ನಗರಗಳ ಸಂಪರ್ಕವು ಶೇ 66ರಷ್ಟು ಹಾಗೂ ಅಂತರರಾಷ್ಟ್ರೀಯ ಸಂಪರ್ಕವು ಶೇ.51ರಷ್ಟು ಪುನಃಶ್ಚೇತನ ಕಂಡಿದೆ.

ಅಂತರರಾಷ್ಟ್ರೀಯ ವಿಮಾನಯಾನ ಕಾರ್ಯಾಚರಣೆಗಳು 2022ರ ಮಾರ್ಚ್ 27ರಂದು ಪುನರಾರಂಭವಾಗಿವೆ. 2022ರ ಎರಡನೆಯ ತ್ರೈಮಾಸಿಕದ ವೇಳೆಗೆ ವಿಮಾನ ನಿಲ್ದಾಣವು ಬಹುತೇಕ ಎಲ್ಲ ಅಂತರರಾಷ್ಟ್ರೀಯ ನಗರಗಳಿಗೆ ಕೋವಿಡ್ ಪೂರ್ವದಲ್ಲಿದ್ದ ಪ್ರಮಾಣದಲ್ಲೇ ಸೇವೆ ಒದಗಿಸಲಿದೆ.

ಸುದ್ದಿ 2 ನಿಮಿಷ

ಡ್ರಗ್ಸ್ ಖರೀದಿಗೆ ಬಿಟ್ ಕಾಯಿನ್ ಬಳಕೆ: ಆರೋಪಿ ಬಂಧನ

ಬೆಂಗಳೂರು: ಬಿಟ್ ಕಾಯಿನ್ ಮೂಲಕ ಹಣ ಪಾವತಿಸಿ ಡಾರ್ಕ್‌ನೆಟ್‌ನಲ್ಲಿ ಮಾದಕ ವಸ್ತು ಕಾಯ್ದಿರಿಸುತ್ತಿದ್ದ, ಬಳಿಕ ಅದನ್ನು ನಗರಕ್ಕೆ ತಂದು ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

'ಕೇರಳದ ಮೊಹಮ್ಮದ್ ರನ್ನಾರ್ (27) ಬಂಧಿತ. ಈತನಿಂದ 49.30 ಗ್ರಾಂ ತೂಕದ 90 ಎಕ್ಸ್‌ಟಸಿ ಮಾತ್ರೆ, 40 ಗ್ರಾಂ ಚರಸ್, 5 ಗ್ರಾಂ ಎಂ.ಡಿ.ಎಂ.ಎ. ಕ್ರಿಸ್ಟಲ್, ಕೃತ್ಯಕ್ಕೆ ಬಳಸಿದ್ದ ತಲಾ ಒಂದು ಲ್ಯಾಪ್‌ಟಾಪ್, ಮೊಬೈಲ್ ಹಾಗೂ ಎಲೆಕ್ಟ್ರಾನಿಕ್ ತೂಕದ ಯಂತ್ರ ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹6.5 ಲಕ್ಷ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಆರೋಪಿಯು ನಗರದ ಕಾಲೇಜು ವಿದ್ಯಾರ್ಥಿಗಳು, ಪರಿಚಯಸ್ಥರು ಹಾಗೂ ಐಟಿ ಕಂಪನಿ ಉದ್ಯೋಗಿಗಳಿಗೆ ಮಾದಕ ವಸ್ತು ಮಾರುತ್ತಿದ್ದ. 1 ಗ್ರಾಂ ಎಂ.ಡಿ.ಎಂ.ಎ. ಕ್ರಿಸ್ಟಲ್‌ಗೆ ₹8 ಸಾವಿರದಿಂದ ₹10 ಸಾವಿರ ದರ ನಿಗದಿ ಮಾಡುತ್ತಿದ್ದ. 1 ಗ್ರಾಂ ಚರಸ್ ಅನ್ನು ₹1 ಸಾವಿರಕ್ಕೆ ಮಾರಾಟ ಮಾಡುತ್ತಿದ್ದ. 1 ಎಕ್ಸ್‌ಟಸಿ ಮಾತ್ರೆಗೆ ₹7 ಸಾವಿರ ಪಡೆಯುತ್ತಿದ್ದ. ಈತನ ವಿರುದ್ಧ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದೇವೆ' ಎಂದು ಹೇಳಿದ್ದಾರೆ.



'ಕರ್ನಾಟಕ ಪಾನೀಯ ನಿಗಮವು (ಕೆಎಸ್‌ಬಿಸಿಎಲ್) ವೆಬ್–ಇಂಡೆಂಟ್ ಮೂಲಕ ಮಾತ್ರ ಮದ್ಯ ಖರೀದಿ ಮಾಡಬೇಕು ಎಂಬ ನಿಯಮವನ್ನು ಜಾರಿಗೆ ತಂದಿದ್ದು, ಇದರಿಂದ ಸಾಕಷ್ಟು ತೊಂದರೆಯಾಗುತ್ತಿದೆ. ಸರ್ಕಾರ ಕೂಡಲೇ ಈ ವ್ಯವಸ್ಥೆ ರದ್ದುಪಡಿಸಬೇಕು. ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು' ಎಂದು ಆಗ್ರಹಿಸಿ ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್–ಕರ್ನಾಟಕದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಪ್ರತಿಭಟನೆ

ಆತ್ಮಾಹುತಿ ಬಾಂಬ್ ದಾಳಿ– ನಾಲ್ವರ ಸಾವು

ಕರಾಚಿ (ಪಿಟಿಐ): ಕರಾಚಿ ವಿಶ್ವವಿದ್ಯಾಲಯದ ಆವರಣದಲ್ಲಿ ಮಂಗಳವಾರ ನಡೆದ ಆತ್ಮಾಹುತಿ ಬಾಂಬ್ ದಾಳಿ ಕೃತ್ಯದಲ್ಲಿ ಮೂವರು ಚೀನಾ ಪ್ರಜೆಗಳು ಸೇರಿ ನಾಲ್ವರು ಮೃತಪಟ್ಟಿದ್ದು, ಇತರೆ ಇಬ್ಬರು ಗಾಯಗೊಂಡಿದ್ದಾರೆ.

ವಿಶ್ವವಿದ್ಯಾಲಯ ಆವರಣದ ಕನ್‌ಫ್ಯೂಷಿಯಸ್ ಇನ್‌ಸ್ಟಿಟ್ಯೂಟ್ ಬಳಿ ಈ ಕೃತ್ಯ ನಡೆದಿದೆ. ಚೀನಾ ಪ್ರಜೆಗಳಿದ್ದ ವಾಹನವು ವಿ.ವಿ.ಯ ಆವರಣವನ್ನು ಪ್ರವೇಶಿಸುತ್ತಿದ್ದ ಸಂದರ್ಭದಲ್ಲಿ, ಬುರ್ಖಾ ಧರಿಸಿದ್ದ ಮಹಿಳೆಯೊಬ್ಬರು ಸ್ಫೋಟಿಸಿಕೊಂಡು ಕೃತ್ಯ ಎಸಗಿದ್ದಾರೆ.

ಮೃತರಲ್ಲಿ ಇಬ್ಬರು ಮಹಿಳೆಯರಿದ್ದಾರೆ. ಮೃತರನ್ನು ಕನ್‌ಫ್ಯೂಷಿಯಸ್ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕ ಹುಹಾಂಗ್ ಗ್ಯುಪಿಂಗ್, ಡಿಂಗ್ ಮುಪೆಂಗ್, ಚೆನ್ ಸಾ ಮತ್ತು ವಾಹನ ಚಾಲಕ ಖಾಲಿದ್ ಎಂದು ಗುರುತಿಸಲಾಗಿದೆ.

ಆತ್ಮಾಹುತಿ ಬಾಂಬ್ ದಾಳಿ ಕೃತ್ಯದ ಹೊಣೆಯನ್ನು ನಿಷೇಧಿತ ಬಲೂಚ್ ಲಿಬರೇಷನ್ ಆರ್ಮಿಗೆ (ಬಿಎಲ್‌ಎ) ಸೇರಿದ ಮಜೀದ್ ಬ್ರಿಗೇಡ್ ಎಂಬ ಸಂಘಟನೆ ಹೊತ್ತುಕೊಂಡಿದೆ. 'ಸಂಘಟನೆಯ ಮಹಿಳಾ ಸದಸ್ಯೆಯು ಕಾರ್ಯಗತಗೊಳಿಸಿದ ಮೊದಲ ಆತ್ಮಾಹುತಿ ಬಾಂಬ್ ದಾಳಿ ಇದಾಗಿದೆ. ಸಂಘಟನೆಯ ಸದಸ್ಯೆ 'ಶಾರಿ ಬಲೂಚ್ ಅಲಿಯಾಸ್ ಬ್ರಂಶ್' ಈ ಕೃತ್ಯ ಎಸಗಿಸಿದ್ದಾರೆ' ಎಂದು ಸಂಘಟನೆಯು ಹೇಳಿಕೊಂಡಿದೆ.



ಕರಾಚಿ ವಿಶ್ವವಿದ್ಯಾಲಯದ ಕನ್‌ಫ್ಯೂಷಿಯಸ್ ಇನ್‌ಸ್ಟಿಟ್ಯೂಟ್ ಬಳಿ ಮಂಗಳವಾರ ಸ್ಫೋಟ ಸಂಭವಿಸಿದ ಸ್ಥಳ –ಎಎಫ್‌ಪಿ ಚಿತ್ರ

ಚೀನಿ ಭಾಷೆ ಬೋಧಕರಿದ್ದ ಈ ವಾಹನಕ್ಕೆ ಭದ್ರತೆ ಒದಗಿಸಲಾಗಿತ್ತು. ವಾಹನದ ಹಿಂದೆ ಬೈಕ್‌ನಲ್ಲಿ ಬರುತ್ತಿದ್ದ ನಾಲ್ವರು ರೇಂಜರ್‌ಗಳೂ ಗಾಯಗೊಂಡಿದ್ದಾರೆ ಎಂದು ಭಯೋತ್ಪಾದನೆ ನಿಗ್ರಹ ದಳದ ಅಧಿಕಾರಿ ರಾಜಾ ಉಮರ್ ಖತಾಬ್ ಹೇಳಿದರು.

ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ ಯೋಜನೆಯಡಿ ಪಾಕಿಸ್ತಾನದಲ್ಲಿ ಚೀನಾದ ಪ್ರಜೆಗಳು ದೊಡ್ಡ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಿಂದೆಯೂ ಚೀನಿ ಪ್ರಜೆಗಳನ್ನು ಗುರಿಯಾಗಿಸಿ ಸ್ಫೋಟ ಕೃತ್ಯಗಳು ನಡೆದಿವೆ.

'ಕೈಗಾರಿಕಾ ಬೇಡಿಕೆಗೆ ತಕ್ಕಂತೆ ಕೌಶಲ ತರಬೇತಿಗೆ ಒತ್ತು ಅಗತ್ಯ'



ಕೆಂಗೇರಿ: ಸ್ಥಳೀಯ ಕೈಗಾರಿಕಾ ಬೇಡಿಕೆಗಳಿಗೆ ಅನುಗುಣವಾಗಿ ಕೌಶಲ ಅಭಿವೃದ್ಧಿ ಶಿಕ್ಷಣವನ್ನು ರೂಪಿಸಿದರೆ ತಯಾರಿಕಾ ವಲಯಕ್ಕೆ ಗುಣಮಟ್ಟದ ಮಾನವ ಸಂಪನ್ಮೂಲ ಪೂರೈಸಲು ಸಾಧ್ಯವಾಗುತ್ತದೆ ಎಂದು ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ. ಬಿ. ತಿಮ್ಮೇಗೌಡ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಭೂಗೋಳಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ್ದ 'ಪಠ್ಯಕ್ರಮ ವಿನ್ಯಾಸ ಮತ್ತು ವಿಷಯ ಅಭಿವೃದ್ಧಿ' ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಐಚ್ಛಿಕ ವಿಷಯಗಳ ಜೊತೆಗೆ ಕೌಶಲ ವೃದ್ಧಿ ಸಂಬಂಧಿತ ವಿಷಯಗಳ ಅಧ್ಯಯನಕ್ಕೆ ಅವಕಾಶ ನೀಡಿದೆ. ಉದ್ಯೋಗಕ್ಕೆ ಅವಕಾಶ ನೀಡುವ ಕೌಶಲ್ಯಗಳ ತರಬೇತಿಗೆ ವಿಶ್ವವಿದ್ಯಾಲಯಗಳು ಒತ್ತು ನೀಡಬೇಕು. ಈ ಸಂಬಂಧ ಸ್ಥಳೀಯ ಕೈಗಾರಿಕೆಗಳೊಂದಿಗೆ ಸಂಪರ್ಕ ಸಾಧಿಸಬೇಕು' ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಮಾತನಾಡಿ, 'ವಿಶ್ವ ವಿದ್ಯಾಲಯದ ವತಿಯಿಂದ ರಾಜ್ಯದಲ್ಲೇ ಪ್ರಪ್ರಥಮವಾಗಿ ನಾಲ್ಕು ವರ್ಷದ ಬಿ.ಎ, ಬಿಎಸ್‌ಸಿ ಆನರ್ಸ್ ಕೋರ್ಸ್ ಆರಂಭ ಮಾಡಲಾಗಿದೆ. ಇದರಿಂದ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡಲು ಸಾಧ್ಯವಾಗಲಿದೆ' ಎಂದರು.

ಬೆಂಗಳೂರು ವಿಶ್ವವಿದ್ಯಾಲಯ ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಅಶೋಕ್ ಡಿ.ಹಂಜಗಿ, ಪರಮೇಶ್ವರ್ ವಿ.ಪಂಡಿತ್ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯುತ್ ಕೇಬಲ್ ತಂತಿ ಸ್ಪರ್ಶಿಸಿ ಯುವಕ ಕಿಶೋರ್ ಸಾವು: ಪ್ರಕರಣ ದಾಖಲು

ಬೆಸ್ಕಾಂ ಕಚೇರಿ ಎದುರು ಶವ ಇಟ್ಟು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದಚಾರಿ ಮಾರ್ಗದಲ್ಲಿದ್ದ ಮರದಲ್ಲಿ ನೇತಾಡುತ್ತಿದ್ದ ವಿದ್ಯುತ್ ಕೇಬಲ್‌ನ ತಂತಿ ಸ್ಪರ್ಶಿಸಿ ಕಿಶೋರ್ (22) ಎಂಬುವರು ಮೃತಪಟ್ಟಿದ್ದಾರೆ. ನ್ಯಾಯಕ್ಕಾಗಿ ಆಗ್ರಹಿಸಿ ಕುಟುಂಬಸ್ಥರು ಸಂಜಯನಗರದ ಬೆಸ್ಕಾಂ ಕಚೇರಿ ಎದುರು ಶವ ಇಟ್ಟು ಮಂಗಳವಾರ ಪ್ರತಿಭಟನೆ ನಡೆಸಿದ್ದಾರೆ.

ಖಾಸಗಿ ಕಂಪನಿಯೊಂದರ ದಿನಗೂಲಿ ನೌಕರ ಕಿಶೋರ್, ಕೆಲಸ ಮುಗಿಸಿ ಸಹೋದರನ ಜೊತೆ ಸೋಮವಾರ ಸಂಜೆ ಮಕ್ಕಳ ಉದ್ಯಾನದ ಬಳಿಯ ಪಾದಚಾರಿ ಮಾರ್ಗದಲ್ಲಿ ಹೋಗುತ್ತಿದ್ದರು. ಈ ವೇಳೆ ವಿದ್ಯುತ್ ಕೇಬಲ್‌ನ ತಂತಿಗೆ ಆಕಸ್ಮಿಕವಾಗಿ ಕೈ ತಾಗಿ ಮೃತಪಟ್ಟಿದ್ದರು. ಕಿಶೋರ್ ಅವರು ಭಾವ ಹಾಗೂ ತಂಗಿ ಜೊತೆ ಗೆದ್ದಲಹಳ್ಳಿಯಲ್ಲಿ ವಾಸವಿದ್ದರು.

ಬೆಸ್ಕಾಂ ನಿರ್ಲಕ್ಷ್ಯದಿಂದಾಗಿಯೇ ಈ ಘಟನೆ ನಡೆದಿದೆ ಎಂದು ಆರೋಪಿಸಿ ಸಂಬಂಧಿಕರು ಅರ್ಧಗಂಟೆಗೂ ಹೆಚ್ಚು ಕಾಲ ಧರಣಿ ನಡೆಸಿದರು. ಬೆಸ್ಕಾಂ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನೆ ಕೈಬಿಡುವಂತೆ ಮನವೊಲಿಸಲು ಬಂದ ಪೊಲೀಸರ ಜೊತೆಯೂ ವಾಗ್ವಾದ ನಡೆಸಿದರು.

'ಕಿಶೋರ್ ಸಾವಿಗೆ ನ್ಯಾಯ ಸಿಗುವವರೆಗೂ ಸ್ಥಳ ಬಿಟ್ಟು ಕದಲುವುದಿಲ್ಲ' ಎಂದು ಸಂಬಂಧಿಕರು ಪಟ್ಟು ಹಿಡಿದರು. 'ಸೋಮವಾರ ಸಂಜೆ ಆತ ಮೃತಪಟ್ಟಿದ್ದಾನೆ. ಬೆಸ್ಕಾಂ ಅಧಿಕಾರಿಗಳು ಸೌಜನ್ಯಕ್ಕಾದರೂ ತಾಯಿ ಹಾಗೂ ತಂಗಿಯನ್ನು ಮಾತನಾಡಿಸಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ ಸಂಜಯನಗರ ಪೊಲೀಸರು, ಪರಿಹಾರ ಕೊಡಿಸುವ ಸಂಬಂಧ ಅಧಿಕಾರಿಗಳ ಜೊತೆ ಮಾತನಾಡುವ ಭರವಸೆ ನೀಡಿದರು. ಬಳಿಕ ಸಂಬಂಧಿಕರು ಪ್ರತಿಭಟನೆ ಕೈಬಿಟ್ಟರು.

'ಕಿಶೋರ್ ಸಾವಿಗೂ ಬೆಸ್ಕಾಂಗೂ ಸಂಬಂಧವಿಲ್ಲ. ಓಎಫ್‌ಸಿ ಕೇಬಲ್‌ನ ತಂತಿ ಸ್ಪರ್ಶಿಸಿ ಯುವಕ ಮೃತಪಟ್ಟಿದ್ದಾನೆ' ಎಂದು ಬೆಸ್ಕಾಂ ಸಹಾಯಕ ಎಂಜಿನಿಯರ್ ಮಂಜುನಾಥ್ ತಿಳಿಸಿದ್ದಾರೆ.

'ನಾವು ಘಟನಾ ಸ್ಥಳಕ್ಕೆ ಹೋಗಿ ಪರಿಶೀಲಿಸಿದ್ದೇವೆ. ಪೊಲೀಸರೂ ಸ್ಥಳ ಮಹಜರು ಮಾಡಿದ್ದಾರೆ. ಬೆಸ್ಕಾಂನ ವಿದ್ಯುತ್ ತಂತಿ ಎಲ್ಲೂ ತುಂಡಾಗಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಸಂಜಯನಗರ ಠಾಣೆ ಪೊಲೀಸರು, ಏರ್‌ಟೆಲ್ ಕಂಪನಿಯ ಸಂಜಯನಗರದ ಉಸ್ತುವಾರಿಯಾಗಿರುವ ನವೀನ್ ಎಂಬುವರನ್ನು ಮಂಗಳವಾರ ವಿಚಾರಣೆ ನಡೆಸಿದ್ದಾರೆ.



ಕಿಶೋರ್ ಮೃತಪಟ್ಟ ಸ್ಥಳಕ್ಕೆ ಮಂಗಳವಾರ ಭೇಟಿ ನೀಡಿದ್ದ ಪೊಲೀಸರು ಹಾಗೂ ಬೆಸ್ಕಾಂ ಸಿಬ್ಬಂದಿ ಪರಿಶೀಲನೆ ನಡೆಸಿದರು–ಪ್ರಜಾವಾಣಿ ಚಿತ್ರ

'ತಂಗಿ ಮದುವೆ ಸಾಲ ತೀರಿಸಲು ಬೆಂಗಳೂರಿಗೆ ಬಂದಿದ್ದ'

'ಕೆಲ ತಿಂಗಳ ಹಿಂದೆ ತಂಗಿಯ ವಿವಾಹ ಮಾಡಿದ್ದ ಕಿಶೋರ್, ಅದಕ್ಕಾಗಿ ಸಾಕಷ್ಟು ಸಾಲ ಮಾಡಿಕೊಂಡಿದ್ದ. ಅದನ್ನು ತೀರಿಸುವ ಸಲುವಾಗಿ ಮೂರು ತಿಂಗಳ ಹಿಂದೆ ನಗರಕ್ಕೆ ಬಂದು ಖಾಸಗಿ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ' ಎಂದು ಸಂಬಂಧಿ ಹರೀಶ್ ತಿಳಿಸಿದ್ದಾರೆ.

'ಕಿಶೋರ್ ತಾಯಿಗೆ ವಯಸ್ಸಾಗಿದೆ. ಈತನ ದುಡಿಮೆಯಿಂದ ಬಂದ ಹಣದಿಂದಲೇ ಅವರ ಜೀವನ ಸಾಗುತ್ತಿತ್ತು' ಎಂದು ಹೇಳಿದ್ದಾರೆ.

ತಿಂಗಳ ಅವಧಿಯಲ್ಲಿ ನಾಲ್ಕನೇ ಸಾವು

ವಿದ್ಯುತ್ ಅವಘಡದಿಂದಾಗಿ ನಗರದಲ್ಲಿ ತಿಂಗಳ ಅವಧಿಯಲ್ಲೇ ನಾಲ್ಕು ಮಂದಿ ಮೃತಪಟ್ಟಿದ್ದಾರೆ.

ಜ್ಞಾನಭಾರತಿ ಠಾಣೆ ವ್ಯಾಪ್ತಿಯ ಮಂಗನಹಳ್ಳಿ ಮೇಲ್ಸೇತುವೆ ಬಳಿ ಮಾರ್ಚ್ 23ರಂದು ಟ್ರಾನ್ಸ್‌ಫಾರ್ಮರ್‌ವೊಂದು ಸ್ಫೋಟಗೊಂಡಿತ್ತು. ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಮಂಗನಹಳ್ಳಿ ನಿವಾಸಿ ಶಿವರಾಜ್ (55) ಹಾಗೂ ಅವರ ಮಗಳು ಚೈತನ್ಯಾ (19) ಬೆಂಕಿ ತಗುಲಿ ಮೃತಪಟ್ಟಿದ್ದರು.

ಏಪ್ರಿಲ್ 13 ರಂದು ವಿದ್ಯುತ್ ಪ್ರವಹಿಸಿ ಮಂಗನಪಾಳ್ಯ ನಿವಾಸಿ ವಸಂತ್ (21) ಎಂಬುವರು ಅಸುನೀಗಿದ್ದರು. ಚಂದ್ರಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿತ್ತು.

'ಏಳಪ್ಪ ಕಿಶೋರ..ನಮ್ಮನ್ನೆಲ್ಲಾ ಬಿಟ್ಟು ಹೋಗಿ ಬಿಟ್ಯಲ್ಲೊ..'

'ಏಳಪ್ಪ ಕಿಶೋರ.. ನಮ್ಮನ್ನೆಲ್ಲಾ ಬಿಟ್ಟು ಇಷ್ಟು ಬೇಗ ಹೋಗಿ ಬಿಟ್ಯಲ್ಲೊ...' ಎಂದು ಹೇಳುತ್ತಾ ಕಿಶೋರ್ ಸಂಬಂಧಿಕರು ಬೆಸ್ಕಾಂ ಕಚೇರಿ ಎದುರು ಕಣ್ಣೀರಿಡುತ್ತಿದ್ದ ದೃಶ್ಯ ನೋಡುಗರ ಮನ ಕಲಕುವಂತಿತ್ತು.

'ಆಳೆತ್ತರ ಬೆಳೆದಿದ್ದ ಮಗ ಕೊನೆಗಾಲದಲ್ಲಿ ನನ್ನನ್ನು ಸುಖವಾಗಿ ಸಾಕುತ್ತಾನೆ ಎಂಬ ಆಸೆ ಇಟ್ಟುಕೊಂಡಿದ್ದೆ. ಆತ ನನ್ನ ಚಿತೆಗೆ ಕೊಳ್ಳಿ ಇಡಬೇಕಿತ್ತು. ಈಗ ಆತನ ಚಿತೆಗೆ ಕೊಳ್ಳಿ ಇಡುವುದನ್ನು ನೋಡಬೇಕಾಗಿದೆ. ಆತನ ಅಂತ್ಯಸಂಸ್ಕಾರ ಮಾಡುವಂತಾಗಿದೆ. ಇಂತಹ ಸ್ಥಿತಿ ಯಾವ ತಾಯಿಗೂ ಬಾರದಿರಲಿ' ಎಂದು ಕಿಶೋರ್ ತಾಯಿ ಕಣ್ಣೀರಿಟ್ಟರು.

ಮೇ 9ರಿಂದ ದೆಹಲಿಯಲ್ಲಿ ಅಧಿಕಾರಿಗಳಿಗೆ ತರಬೇತಿ

ಚುನಾವಣೆ ಸಿದ್ಧತೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆಗೆ ಇನ್ನೂ ಒಂದು ವರ್ಷ ಬಾಕಿ ಇರುವಾಗಲೇ ಕೇಂದ್ರ ಚುನಾವಣಾ ಆಯೋಗ ಸಿದ್ಧತೆ ಆರಂಭಿಸಿದೆ. ಚುನಾವಣಾ ಪ್ರಕ್ರಿಯೆ ಕುರಿತು 'ಮಾಸ್ಟರ್ ತರಬೇತುದಾರ'ರಾಗಿ ಕೆಳಹಂತದ ಅಧಿಕಾರಿಗಳಿಗೆ ತರಬೇತಿ ನೀಡುವುದಕ್ಕಾಗಿ 54 ಹಿರಿಯ ಅಧಿಕಾರಿಗಳಿಗೆ ಮೇ 9ರಿಂದ 14ರವರೆಗೆ ದೆಹಲಿಯಲ್ಲಿ ತರಬೇತಿ ನೀಡಲಾಗುತ್ತಿದೆ.

ಐದು ತಂಡಗಳಲ್ಲಿ ಅಧಿಕಾರಿಗಳಿಗೆ ತರಬೇತಿ ನಡೆಯಲಿದೆ. ಈ ಪಟ್ಟಿ ಹೊರಬೀಳುತ್ತಿದ್ದಂತೆಯೇ ರಾಜ್ಯದಲ್ಲಿ ಅವಧಿಪೂರ್ವ ಚುನಾವಣೆ ನಡೆಯಬಹುದೇ ಎಂಬ ಚರ್ಚೆ ಅಧಿಕಾರಿಗಳ ವಲಯದಲ್ಲಿ ಆರಂಭವಾಗಿದೆ. ಆದರೆ, ವರ್ಷಕ್ಕೂ ಮೊದಲು ಅಧಿಕಾರಿಗಳನ್ನು ಚುನಾವಣೆಗೆ ಸಜ್ಜುಗೊಳಿಸುವುದು ಸಾಮಾನ್ಯ ಪ್ರಕ್ರಿಯೆ ಎಂದು ಆಯೋಗದ ಮೂಲಗಳು ಹೇಳಿವೆ.

ಚುನಾವಣೆಗೆ ಸ್ಪರ್ಧಿಸುವವರ ಅರ್ಹತೆಗಳು, ನಾಮಪತ್ರ ಸಲ್ಲಿಕೆ, ಪರಿಶೀಲನೆ, ನಾಮಪತ್ರ ಹಿಂಪಡೆಯುವುದು, ಚಿಹ್ನೆಗಳ ಹಂಚಿಕೆ, ಮತದಾನದ ಸಿದ್ಧತೆ, ಸಮಸ್ಯೆಗಳನ್ನು ಗುರುತಿಸುವುದು, ಮಾದರಿ ನೀತಿಸಂಹಿತೆ ಅನುಷ್ಠಾನ, ಚುನಾವಣಾ ವೆಚ್ಚದ ಮೇಲೆ ನಿಗಾ ಇರಿಸುವುದು, ಅಂಚೆ ಮತಪತ್ರ, ಮಾಹಿತಿ ತಂತ್ರಜ್ಞಾನದ ಬಳಕೆ, ವಿದ್ಯುನ್ಮಾನ ಮತಯಂತ್ರ ಮತ್ತು ವಿವಿಪ್ಯಾಟ್ ಯಂತ್ರಗಳ ಬಳಕೆ, ಮತ ಎಣಿಕೆ, ಫಲಿತಾಂಶ ಘೋಷಣೆ ಕುರಿತು ತರಬೇತಿ ನಡೆಯಲಿದೆ ಎಂದು ಆಯೋಗ ತಿಳಿಸಿದೆ.

ಕರ್ನಾಟಕ, ನಾಗಾಲ್ಯಾಂಡ್ ಮತ್ತು ತ್ರಿಪುರಾ ರಾಜ್ಯಗಳ ಅಧಿಕಾರಿಗಳಿಗೆ ಒಂದೇ ಬಾರಿಗೆ ತರಬೇತಿ ಆಯೋಜಿಸಲಾಗಿದೆ. ರಾಜ್ಯದ ಅಧಿಕಾರಿಗಳನ್ನು ತರಬೇತಿಗೆ ನಿಯೋಜಿಸುವಂತೆ ಆಯೋಗ ಏಪ್ರಿಲ್ 11ರಂದು ಪತ್ರ ಬರೆದಿತ್ತು. 54 ಅಧಿಕಾರಿಗಳ ಪಟ್ಟಿ ಸಿದ್ಧಪಡಿಸಿರುವ ರಾಜ್ಯದ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ತರಬೇತಿಯಲ್ಲಿ ಪಾಲ್ಗೊಳ್ಳುವಂತೆ ನಿರ್ದೇಶನ ನೀಡಿದೆ.

ಹೆಚ್ಚುವರಿ ಜಿಲ್ಲಾಧಿಕಾರಿಗಳು, ವಿಶೇಷ ಭೂಸ್ವಾಧೀನಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರ್ ಸೇರಿದಂತೆ ಹಿರಿಯ ಮತ್ತು ಕಿರಿಯ ಶ್ರೇಣಿಯ ಕೆಎಎಸ್ ಅಧಿಕಾರಿಗಳು, ನಗರಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿಗಳು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಉಪನ್ಯಾಸಕರು, ಪಿಯು ಕಾಲೇಜುಗಳ ಉಪನ್ಯಾಸಕರು ಈ ಪಟ್ಟಿಯಲ್ಲಿದ್ದಾರೆ.


'ಚುನಾವಣಾ ಪ್ರಕ್ರಿಯೆ ಕುರಿತು ವರ್ಷಕ್ಕೂ ಮೊದಲೇ ತರಬೇತಿ ಆರಂಭಿಸುವ ಪದ್ಧತಿಯನ್ನು ಆಯೋಗ ಕೆಲವು ವರ್ಷಗಳಿಂದ ಅನುಸರಿಸುತ್ತಿದೆ. ಅದೇ ರೀತಿ ಕರ್ನಾಟಕದ ಅಧಿಕಾರಿಗಳಿಗೂ ಮೇ ತಿಂಗಳಲ್ಲಿ ತರಬೇತಿ ಆರಂಭವಾಗುತ್ತಿದೆ. ಮುಂದೆ ಇನ್ನೂ ಕೆಲವು ತಂಡಗಳಲ್ಲಿ ತರಬೇತಿಗೆ ಕಳುಹಿಸಲಾಗುತ್ತದೆ. ಮೊದಲು ತರಬೇತಿ ಪಡೆದವರು 'ಮಾಸ್ಟರ್ ತರಬೇತುದಾರ'ರಾಗಿ ಕೆಳಹಂತದ ಅಧಿಕಾರಿಗಳು, ಸಿಬ್ಬಂದಿಗೆ ತರಬೇತಿ ನೀಡುತ್ತಾರೆ' ಎಂದು ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಕಮಲಾ ಹ್ಯಾರಿಸ್‌ಗೆ ಕೋವಿಡ್ ದೃಢ

ವಾಷಿಂಗ್ಟನ್ (ರಾಯಿಟರ್ಸ್): ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರಿಗೆ ಕೋವಿಡ್–19 ದೃಢಪಟ್ಟಿದೆ ಎಂದು ಶ್ವೇತಭವನ ಮಂಗಳವಾರ ಹೇಳಿದೆ.

'ಕಮಲಾ ಹ್ಯಾರಿಸ್ ಅವರಿಗೆ ಯಾವುದೇ ಲಕ್ಷಣಗಳು ಇಲ್ಲ. ಪೂರ್ವ ನಿಗದಿತ ಪ್ರವಾಸದ ಹಿನ್ನೆಲೆಯಲ್ಲಿ ಅವರು ಅಧ್ಯಕ್ಷ ಜೋ ಬೈಡನ್ ಅಥವಾ ಪ್ರಥಮ ಮಹಿಳೆ ಜಿಲ್ ಬೈಡನ್ ಅವರ ಸಂಪರ್ಕಕ್ಕೆ ಬಂದಿಲ್ಲ' ಎಂದು ಅವರ ಪತ್ರಿಕಾ ಕಾರ್ಯದರ್ಶಿ ಕಿರ್ಸ್ಟನ್ ಅಲೆನ್ ಹೇಳಿದ್ದಾರೆ.



'ಪರಿಹಾರದ ಭರವಸೆ'

ಮಾಸ್ಕೊ (ಎಪಿ): 'ಉಕ್ರೇನ್ ಜೊತೆ ಮಾತುಕತೆ ನಡೆಸಿ, ಈಗಿನ ಬಿಕ್ಕಟ್ಟಿಗೆ ಶಾಂತಿಯುತ ಪರಿಹಾರ ಕಂಡುಕೊಳ್ಳುವ ಬಗ್ಗೆ ರಷ್ಯಾ ಈಗಲೂ ವಿಶ್ವಾಸ ಹೊಂದಿದೆ' ಎಂದು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ. ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಗುಟೆರೆಸ್ ಅವರೊಂದಿಗೆ ಸಭೆ ನಡೆಸಿದ ನಂತರ ಅವರು ಮಾತನಾಡಿದರು.

ಕ್ರೀಡಾ ವಿ.ವಿಗೆ 65 ಎಕರೆ ಸ್ವಾಧೀನ: ನಾರಾಯಣ ಗೌಡ

ಬೆಂಗಳೂರು: ರಾಜ್ಯದ ಪ್ರಥಮ ಕ್ರೀಡಾ ವಿಶ್ವವಿದ್ಯಾಲಯ ನಿರ್ಮಾಣಕ್ಕಾಗಿ ಯಲಹಂಕದಲ್ಲಿ 100 ಎಕರೆ ಜಮೀನು ಗುರುತಿಸಿದ್ದು, ಈಗಾಗಲೇ 65 ಎಕರೆ ಜಮೀನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಕ್ರೀಡಾ ಮತ್ತು ಯುವ ಸಬಲೀಕರಣ ಸಚಿವ ಕೆ.ಸಿ.ನಾರಾಯಣ ಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಇನ್ನೂ 35 ಎಕರೆ ಭೂ ಸ್ವಾಧೀನಕ್ಕೆ ಜಿಲ್ಲಾಧಿಕಾರಿಯವರಿಗೆ ಸೂಚಿಸಲಾಗಿದೆ ಎಂದರು.

ರಾಜ್ಯದ ಹಳ್ಳಿ ಹಳ್ಳಿಗಳಲ್ಲೂ ಕ್ರೀಡಾಂಗಣ ನಿರ್ಮಾಣಕ್ಕೆ ₹504 ಕೋಟಿ ಅನುದಾನ ನೀಡಲಾಗಿದೆ. ಪಾಠದ ಜೊತೆಗೆ ಆಟವೂ ನಡೆಯಬೇಕು. ಪ್ರತಿಯೊಂದು ಶಾಲೆಯಲ್ಲಿ ಒಂದರಿಂದ ಒಂದೂವರೆ ಗಂಟೆ ಆಟವನ್ನು ಆಡಿಸಬೇಕು. 8 ಸಾವಿರ ದೈಹಿಕ ಶಿಕ್ಷಣ ಶಿಕ್ಷಕರ ಕೊರತೆ ಇದ್ದು, ಅದನ್ನು ಭರ್ತಿ ಮಾಡಲು ಚರ್ಚೆ ನಡೆದಿದೆ ಎಂದರು. 'ಕ್ರೀಡೆಯಲ್ಲಿ ಹೆಚ್ಚು ಆಸಕ್ತಿ ಹೊಂದಿರುವ 75 ಮಕ್ಕಳನ್ನು ಆಯ್ಕೆ ಮಾಡಿ 'ಅಮೃತ ದತ್ತು' ಯೋಜನೆಯಡಿ ಅಂತರರಾಷ್ಟ್ರೀಯ ಮಟ್ಟಕ್ಕೆ ಕಳುಹಿಸಲು ಯೋಜನೆ ರೂಪಿಸುತ್ತಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇದಕ್ಕೆ ನೆರವು ನೀಡುತ್ತಿವೆ. 25 ಗ್ರಾಮೀಣ ಮಕ್ಕಳಿಗೆ ಚೆನ್ನೈ ಮತ್ತು ಆಂಧ್ರದಲ್ಲಿ ಕೇವಲ ಒಂದು ತಿಂಗಳ ತರಬೇತಿ ನೀಡಿದ್ದರಿಂದ ಅವರು ಸ್ವರ್ಣ ಪದಕ ಪಡೆದಿರುವುದನ್ನು ಗುರುತಿಸಿದ್ದೇವೆ' ಎಂದು ಹೇಳಿದರು.

ತುಮಕೂರಿನಲ್ಲಿ ₹ 4.5 ಕೋಟಿ ವೆಚ್ಚದಲ್ಲಿ ದೊಡ್ಡ ಕ್ರೀಡಾ ಸಂಕೀರ್ಣವನ್ನು ನಿರ್ಮಿಸಲಾಗುತ್ತಿದೆ. ಕೇಂದ್ರ ಸರ್ಕಾರವೂ ಇದಕ್ಕೆ ಅನುದಾನ ನೀಡಿದೆ. ಬೆಂಗಳೂರು ಮತ್ತು ಮಂಡ್ಯದಲ್ಲಿ ಮಕ್ಕಳ ಕ್ರೀಡಾ ಸಾಮರ್ಥ್ಯ ಪರೀಕ್ಷಾ ಕೇಂದ್ರಗಳನ್ನು ಆರಂಭಿಸಲಾಗುವುದು ಎಂದು ಹೇಳಿದರು.

ರಾಜ್ಯ ಸರ್ಕಾರಗಳನ್ನು ಪ್ರಶ್ನಿಸಿದ ಸುಪ್ರೀಂ ಕೋರ್ಟ್

'ದ್ವೇಷ ಭಾಷಣ ತಡೆಯಲು ಕ್ರಮ ಏಕೆ ಇಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ದ್ವೇಷ ಭಾಷಣಗಳನ್ನು ತಡೆಯಲು ಅಗತ್ಯ ಕ್ರಮಗಳನ್ನು ಯಾಕೆ ಕೈಗೊಂಡಿಲ್ಲ' ಎಂದು ರಾಜ್ಯ ಸರ್ಕಾರಗಳನ್ನು ಸುಪ್ರೀಂಕೋರ್ಟ್ ಮಂಗಳವಾರ ಪ್ರಶ್ನಿಸಿದೆ.

'ದ್ವೇಷ ಭಾಷಣಗಳನ್ನು ತಡೆಯುವ ಸಂಬಂಧ ನ್ಯಾಯಾಲಯ ಮಾರ್ಗಸೂಚಿಗಳನ್ನು ನೀಡಿದ್ದರೂ, ಇಂಥ ಘಟನೆಗಳು ಸಂಭವಿಸುತ್ತಲೇ ಇವೆ' ಎಂದೂ ಅಸಮಾಧಾನ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ಅಭಯ್ ಎಸ್.ಓಕಾ ಹಾಗೂ ಸಿ.ಟಿ.ರವಿಕುಮಾರ್ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ರೂರ್ಕಿಯಲ್ಲಿ ಬುಧವಾರ ಧರ್ಮ ಸಂಸದ್ ಆಯೋಜಿಸಿರುವ ಹಿನ್ನೆಲೆಯಲ್ಲಿ ಪತ್ರಕರ್ತ ಕುರ್ಬಾನ್ ಅಲಿ ಹಾಗೂ ನಿವೃತ್ತ ನ್ಯಾಯಾಧೀಶೆ ಅಂಜನಾ ಪ್ರಕಾಶ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಪೀಠ ಈ ಅಸಮಾಧಾನ ಹೊರಹಾಕಿತು.

ಉತ್ತರಾಖಂಡ ಸರ್ಕಾರದ ಪರ ವಕೀಲ, 'ಸರ್ಕಾರ ಕ್ರಮ ಕೈಗೊಳ್ಳಲಿದ್ದು, ವಿಶ್ವಾಸ ಇಡಿ' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಪ್ರತಿಯೊಬ್ಬರ ಮೇಲೂ ವಿಶ್ವಾಸ ಇದೆ. ಆದರೆ, ವಾಸ್ತವ ಬೇರೆಯೇ ಇದೆ' ಎಂದು ಹೇಳಿತು.

'ಅರ್ಜಿದಾರರು ಒಂದು ಸಮುದಾಯಕ್ಕೆ ಕಳಂಕ ಹಚ್ಚಲು ಯತ್ನಿಸುತ್ತಿದ್ದಾರೆ' ಎಂದು ಉತ್ತರಾಖಂಡ ಸರ್ಕಾರ ಪರ ವಕೀಲರು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಇದು ಯಾವ ರೀತಿಯ ವಾದ' ಎಂದು ಪ್ರಶ್ನಿಸಿತಲ್ಲದೇ, 'ಇಂಥ ಘಟನೆಗಳು ಮರುಕಳಿಸಿದಲ್ಲಿ ಮುಖ್ಯಕಾರ್ಯದರ್ಶಿ ಖುದ್ದು ಹಾಜರಾಗುವಂತೆ ಸೂಚಿಸಬೇಕಾಗುತ್ತದೆ' ಎಂದು ಎಚ್ಚರಿಸಿತು.

'ರಾಜ್ಯದಲ್ಲಿ ನಡೆಯಲಿರುವ ಧಾರ್ಮಿಕ ಸಭೆಗಳಿಗೆ ಸಂಬಂಧಿಸಿ ಕೈಗೊಂಡಿರುವ ಕ್ರಮಗಳ ಬಗ್ಗೆ ಅಧಿಕೃತ ಮಾಹಿತಿಯನ್ನು ಸಲ್ಲಿಸುವಂತೆ' ಉತ್ತರಾಖಂಡ ಸರ್ಕಾರದ ಮುಖ್ಯಕಾರ್ಯದರ್ಶಿಗೆ ನಿರ್ದೇಶನ ನೀಡಿತು.

ಅರ್ಜಿದಾರರ ಪರ ವಕೀಲ ಕಪಿಲ್ ಸಿಬಲ್ ಅವರು ಬುಧವಾರ ಆಯೋಜಿಸಿರುವ ಕಾರ್ಯಕ್ರಮದ ಬಗ್ಗೆ ನ್ಯಾಯಪೀಠದ ಗಮನ ಸೆಳೆದರು.

ಹಿಜಾಬ್ ಮೇಲ್ಮನವಿ: ವಿಚಾರಣೆಗೆ ಸಮ್ಮತಿ

ನವದೆಹಲಿ: ಹಿಜಾಬ್ ನಿಷೇಧಿಸಿ ಕರ್ನಾಟಕ ಸರ್ಕಾರ ಹೊರಡಿಸಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ರಾಜ್ಯ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿರುವ ಮೇಲ್ಮನವಿಗಳನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಮಂಗಳವಾರ ಸಮ್ಮತಿ ನೀಡಿದೆ.

'ಹಿಜಾಬ್ ನಿಷೇಧ ವಿರೋಧಿಸಿರುವ ಅರ್ಜಿಯ ತುರ್ತು ವಿಚಾರಣೆ ಅಗತ್ಯವಿದೆ' ಎಂದು ಅರ್ಜಿದಾರರ ಪರ ಹಿರಿಯ ವಕೀಲರಾದ ಮೀನಾಕ್ಷಿ ಅರೋರಾ ಅವರು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಹಾಗೂ ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ , ಹಿಮಾ ಕೊಹ್ಲಿ ಅವರನ್ನೊಳಗೊಂಡ ಪೀಠದೆದುರು ಮೌಖಿಕವಾಗಿ ಪ್ರಸ್ತಾಪಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ, 'ನಾವು ಈ ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡುತ್ತೇವೆ. ಒಂದೆರಡು ದಿನ ಕಾಯಿರಿ' ಎಂದು ತಿಳಿಸಿದರು.



ಪ್ರಶಸ್ತಿ ವಿಜೇತ ಫೈರ್ ಏಂಜೆಲ್ಸ್ ತಂಡ: ಎಡದಿಂದ (ನಿಂತವರು) ವಿವೇಕ್ (ಮಾರ್ಗದರ್ಶಕ), ವಸುಂಧರಾ, ಸ್ವಾತಿ, ಅನುಷಾ, ಸೌಮ್ಯಾ ಪಟ್ನಾಯಕ್, ಮನೋಜ್ (ಪ್ರಶಸ್ತಿ ಪ್ರಾಯೋಜಕ). (ಕುಳಿತವರು) ಸೌಮ್ಯಾ ಜಿ.ಎಸ್, ಶಿಲ್ಪಾ ರಾಣಿ, ಅಶ್ವಿನಿ ಮತ್ತು ಕೋಮಲ್

ಕ್ರಿಕೆಟ್: ಫೈರ್ ಏಂಜೆಲ್ಸ್‌ಗೆ ಪ್ರಶಸ್ತಿ

ಬೆಂಗಳೂರು: ಫೈರ್ ಏಂಜೆಲ್ಸ್ ತಂಡವು ರಾಜರಾಜೇಶ್ವರಿ ನಗರದ ಪ್ರೆಸ್ಟಿಜೀಯಸ್ ಬಾಗಮನೆ ಟೆಂಪಲ್ ಬಾಲ್ (ಪಿಬಿಟಿಬಿ) 9 ಟಿಎಲ್ ಮಹಿಳಾ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದೆ.

ಇತ್ತೀಚೆಗೆ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಫೈರ್ ಏಂಜೆಲ್ಸ್ ನಾಲ್ಕು ವಿಕೆಟ್‌ಗಳಿಂದ ರೇಗಲ್ ಹಾಕ್ಸ್ ತಂಡವನ್ನು ಸೋಲಿಸಿತು. ಮೊದಲು ಬ್ಯಾಟ್ ಮಾಡಿದ ರೇಗಲ್ ಹಾಕ್ಸ್ ಆರು ಓವರ್‌ಗಳಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು 33 ರನ್ ಗಳಿಸಿತು. ಫೈರ್ ಏಂಜೆಲ್ಸ್ ಆರು ಓವರ್‌ಗಳಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು 34 ರನ್ ಗಳಿಸಿತು. ಪ್ರತಿ ತಂಡದಲ್ಲಿ ಎಂಟು ಆಟಗಾರ್ತಿಯರು ಇದ್ದರು.

ಬುಧವಾರ, ಏಪ್ರಿಲ್ 27, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 116 | ಪುಟ 14
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ವಯಸ್ಸಾದಂತೆ ಮನಸ್ಸು ಮುದುಡುವಂತೆಯೇ, ಮಿದುಳು ಕೂಡ ಗಾತ್ರದಲ್ಲಿ ಕಿರಿದಾಗುತ್ತದೆಯಂತೆ



ಆಳ-ಅಗಲ
'ಅನಿರ್ಬಂಧಿತ ಅಭಿವ್ಯಕ್ತಿ' ಕಾರ್ಯಸಾಧುವೇ?

5 ವರ್ಷ ಮೇಲ್ಪಟ್ಟ ಮಕ್ಕಳಿಗೆ ಲಸಿಕೆ 11

3ನೇ ವಿಶ್ವಸಮರ ಸಾಧ್ಯತೆ: ರಷ್ಯಾ ಎಚ್ಚರಿಕೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,356 ▲	17,200 ▲	₹53,560 (ಬೆಂಗಳೂರು)	₹67,200 (ಬೆಂಗಳೂರು)	76.56 ▲

ಜಾತಿಪತ್ರ ನಕಲಿ: ಪ್ರಹಾರ

1,097 ಮಂದಿ ವಿರುದ್ಧ ಪ್ರಕರಣ • ವಿಚಾರಣೆ ಇಲ್ಲದೇ ವಜಾಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ನೌಕರಿ ಗಿಟ್ಟಿಸುವವರ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿದ್ದು, ಇದರ ವಿರುದ್ಧ ಗದಾ ಪ್ರಹಾರಕ್ಕೆ ರಾಜ್ಯ ಸರ್ಕಾರ ತಯಾರಿ ನಡೆಸಿದೆ.

ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ಇಂತಹ ಪ್ರಕರಣಗಳಲ್ಲಿ ವಿಚಾರಣೆ ಇಲ್ಲದೇ ನೌಕರರನ್ನು ಸೇವೆಯಿಂದ ವಜಾ ಮಾಡಲು ಅವಕಾಶವಿದ್ದು, ಈ 'ಅಸ್ತ್ರ'ವನ್ನು ಪ್ರಯೋಗಿಸಲು ಸರ್ಕಾರ ಸಿದ್ಧತೆ ನಡೆಸಿದೆ.

'ನಕಲಿ ಜಾತಿ ಪ್ರಮಾಣಪತ್ರ ಪಡೆದವರು ಸೇವೆಯಿಂದ ನಿವೃತ್ತಿ ಹೊಂದಿದ್ದರೂ ಅವರನ್ನು ಬಿಡುವ ಪ್ರಶ್ನೆ ಇಲ್ಲ. ಅಂತಹ ಅಧಿಕಾರಿ ಅಥವಾ ನೌಕರರ ವಿರುದ್ಧ ವಿಚಾರಣೆ ಮುಂದುವರೆಯುತ್ತದೆ. ಆರೋಪ ಸಾಬೀತಾದರೆ ಅವರ ಸೇವಾವಧಿಯ ಸಂಬಳ ಮತ್ತು ನಿವೃತ್ತಿ ಬಳಿಕದ ಪಿಂಚಣಿಯನ್ನೂ ವಸೂಲು ಮಾಡಲಾಗುತ್ತದೆ. ನಕಲಿ ಪ್ರಮಾಣ ಪತ್ರವನ್ನು ಮಾಡಿಕೊಟ್ಟವರಿಗೂ ಶಿಕ್ಷೆ ಕಟ್ಟಿಟ್ಟ ಬುತ್ತಿ ಎನ್ನುತ್ತಾರೆ' ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಡಿಜಿಪಿ ಡಾ.ರವೀಂದ್ರನಾಥ್.

7ನೇ ಪುಟ ನೋಡಿ

ನಕಲಿ ಜಾತಿ ಪ್ರಮಾಣ ಪತ್ರ ಪ್ರಕರಣಗಳ ಸ್ಥಿತಿಗತಿ

ಪ್ರಕರಣ ದಾಖಲು	ತನಿಖೆ ಪ್ರಗತಿ	ವಿಚಾರಣಾ ಹಂತ	ಶಿಕ್ಷೆ	ದೋಷ ಮುಕ್ತ	ತಡೆ ಯಾಜ್ಞೆ	ಎಫ್‌ಐಆರ್ ರದ್ದು	ಬಿ ರಿಪೋರ್ಟ್	ಇತರೆ ವಿಲೇ
1097	148	222	12	141	65	153	139	217

ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯಲ್ಲಿ ಬಾಕಿ ಪ್ರಕರಣಗಳು

ಜಿಲ್ಲೆ	ಒಟ್ಟು ಸಂಖ್ಯೆ
ಬೆಂಗಳೂರು ನಗರ	25
ಬೆಂಗಳೂರು(ಗ್ರಾ)	10
ಕೋಲಾರ	49
ತುಮಕೂರು	1
ಮೈಸೂರು	53
ಮಂಡ್ಯ	11
ಹಾಸನ	2
ಕೊಡಗು	1
ದಾವಣಗೆರೆ	9
ಶಿವಮೊಗ್ಗ	16
ಹಾವೇರಿ	1
ಚಿತ್ರದುರ್ಗ	14
ಬಳ್ಳಾರಿ	61
ಚಾಮರಾಜನಗರ	5
ಉತ್ತರ ಕನ್ನಡ	79
ಚಿಕ್ಕಮಗಳೂರು	9
ದಕ್ಷಿಣ ಕನ್ನಡ	1
ಬೆಳಗಾವಿ	27
ಧಾರವಾಡ	2
ವಿಜಯಪುರ	6
ಬಾಗಲಕೋಟೆ	5
ಗದಗ	5
ಕಲಬುರಗಿ	68
ಬೀದರ್	101
ಯಾದಗಿರಿ	6
ರಾಯಚೂರು	17
ಕೊಪ್ಪಳ	7
ಒಟ್ಟು	591

111 ತಹಶೀಲ್ದಾರ್‌ಗಳು

108 ಕಂದಾಯ ನಿರೀಕ್ಷಕರು | **107** ಗ್ರಾಮ ಲೆಕ್ಕಿಗರು

(ಈ ಸಾಲಿನಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ವಿತರಿಸಿದ 326 ಮಂದಿ ವಿರುದ್ಧ ಎಫ್‌ಐಆರ್)

ನೌಕರರ ವಜಾ ಪ್ರಕರಣಗಳು

ಪ್ರಾದೇಶಿಕ	ವರ್ಷ	ಒಟ್ಟು ಪ್ರಕರಣ
ಬೆಂಗಳೂರು (ಕೇಂದ್ರ)	2002-2019	14
ಬೆಂಗಳೂರು	2007-2019	9
ಮೈಸೂರು	2013-2019	10
ಬೆಳಗಾವಿ	1986-2020	29
ದಾವಣಗೆರೆ	2014-2021	11
ಮಂಗಳೂರು	2008-2021	04
ಕಲಬುರಗಿ	1988-2019	12
ಒಟ್ಟು		89

ಕೆಂಪಯ್ಯ ಮನೆಗೆ ನೋಟಿಸ್

ನಕಲಿ ಜಾತಿ ಪ್ರಮಾಣಪತ್ರದ ಆರೋಪದ ಕಾರಣ ವಿಚಾರಣೆಗೆ ಹಾಜರಾಗುವಂತೆ ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ ಮನೆ ಬಾಗಿಲಿಗೆ ನೋಟಿಸ್ ಅಂಟಿಸಲಾಗಿದೆ ಎಂದು ರವೀಂದ್ರನಾಥ್ ಹೇಳಿದರು. ಕೆಂಪಯ್ಯ ಅವರಿಗೆ ವೈಯಕ್ತಿಕವಾಗಿ ನೋಟಿಸ್ ನೀಡಿ ವಿಚಾರಣೆಗೆ ಹಾಜರಾಗುವಂತೆ ತಿಳಿಸಿದ್ದೆವು. ನೋಟಿಸ್ ಪಡೆದ ಅವರು ಸೋಮವಾರ ಹಾಜರಾಗುತ್ತೇನೆ ಎಂದು ಹೇಳಿಯೂ ಬರಲಿಲ್ಲ ಎಂದರು. ಕೆಂಪಯ್ಯ ಪರಿಶಿಷ್ಟ ಪಂಗಡಕ್ಕೆ ಸೇರಿದ ಕಾಡು ಕುರುಬ ಜಾತಿಗೆ ಸೇರಿದವರು ಎಂಬ ನಕಲಿ ಪ್ರಮಾಣ ಪತ್ರ ಸಲ್ಲಿಸಿರುವ ಆರೋಪ ಎದುರಿಸುತ್ತಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ಕಡತ ಕಣ್ಮರೆಯಾಗಿದ್ದರಿಂದ ತನಿಖೆ ತಡವಾಗಿದೆ.

ತಿರುಪತಿ: ಆಂಬುಲೆನ್ಸ್ ಚಾಲಕರಿಂದ ₹10,000 ಬೇಡಿಕೆ, ದೌರ್ಜನ್ಯ

ಬೈಕ್‌ನಲ್ಲೇ ಮಗನ ಶವ 90 ಕಿ.ಮೀ. ಸಾಗಣೆ

ತಿರುಪತಿ (ಪಿಟಿಐ): ಮಗನ ಶವವನ್ನು ಹೊತ್ತೊಯ್ಯಲು ಆಂಬುಲೆನ್ಸ್‌ನ ಚಾಲಕರ ಬೇಡಿಕೆಯಂತೆ ₹10,000 ಕೊಡಲು ಸಾಧ್ಯವಾಗದೇ ತಂದೆಯೊಬ್ಬರು ಬೈಕ್‌ನ ಹಿಂಬದಿ ಕುಳಿತು, ತೊಡೆಯ ಮೇಲೆ ಮಗನ ಮೃತದೇಹವನ್ನಿರಿಸಿಕೊಂಡು ತಿರುಪತಿಯಿಂದ 90 ಕಿ.ಮೀ. ದೂರದ ಗ್ರಾಮಕ್ಕೆ ತೆರಳಿದ ಹೃದಯವಿದ್ರಾವಕ ಘಟನೆ ಸೋಮವಾರ ತಡರಾತ್ರಿ ನಡೆದಿದೆ.

ನೆರೆಯ ಅನ್ನಮಯ್ಯ ಜಿಲ್ಲೆಯ ಚಿತ್ವೇಲಿ ಗ್ರಾಮದ ಕೃಷಿಕೂಲಿಕಾರ, ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿದ್ದ 10 ವರ್ಷದ ಮಗನನ್ನು ತಿರುಪತಿಯ ರುಯಾ ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಬಾಲಕ ಸೋಮವಾರ ತಡರಾತ್ರಿ ಮೃತಪಟ್ಟಿದ್ದಾನೆ.

ಆಸ್ಪತ್ರೆಯ ಆಂಬುಲೆನ್ಸ್ ಚಾಲಕರ ಬೇಡಿಕೆ ಇಟ್ಟಷ್ಟು ಹಣ ಕೊಡಲು ಸಾಧ್ಯವಾಗದ ಕಾರಣ, ಮೃತ ಬಾಲಕನ ತಂದೆ ತನ್ನ ಸಂಬಂಧಿಕರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಸಂಬಂಧಿಕರು ಗ್ರಾಮದಿಂದ ಬೇರೆ ಆಂಬುಲೆನ್ಸ್ ಕಳುಹಿಸಿದ್ದರು. ಆ ಆಂಬುಲೆನ್ಸ್ ಚಾಲಕನನ್ನು ಥಳಿಸಿದ ರುಯಾ ಆಸ್ಪತ್ರೆ ಆಂಬುಲೆನ್ಸ್ ಚಾಲಕರು, ಗ್ರಾಮದಿಂದ ಬಂದಿದ್ದ ಆಂಬುಲೆನ್ಸ್ ಜಾಗ ಖಾಲಿ ಮಾಡುವಂತೆಯೂ ಮಾಡಿದ್ದಾರೆ.



ಮಗನ ಮೃತದೇಹವನ್ನು ತೊಡೆಯ ಮೇಲೆ ಇರಿಸಿಕೊಂಡು ಬೈಕ್‌ನಲ್ಲೇ ಸಾಗಿದ ತಂದೆ

ಆಗ ಬೇರೆ ದಾರಿ ಕಾಣದೇ, ಸಂಬಂಧಿಯೊಬ್ಬರ ಬೈಕ್‌ನಲ್ಲಿ ಮಗನ ಶವವನ್ನು ತೊಡೆಯ ಮೇಲಿರಿಸಿಕೊಂಡು ಬೈಕ್‌ನ ಹಿಂಬದಿ ಕುಳಿತು ಆ ಕೃಷಿ ಕೂಲಿಕಾರ ಗ್ರಾಮಕ್ಕೆ ತೆರಳಿದ್ದಾರೆ.

ಈ ಘಟನೆ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ರುಯಾ ಆಸ್ಪತ್ರೆಯ ಹಿರಿಯ ಸ್ಥಾನಿಕ ವೈದ್ಯಕೀಯ ಅಧಿಕಾರಿಯನ್ನು ಅಮಾನತುಗೊಳಿಸಿರುವ ರಾಜ್ಯ ಸರ್ಕಾರ, ಆಸ್ಪತ್ರೆಯ ಸೂಪರಿಂಟೆಂಡೆಂಟ್‌ಗೆ ಶೋಕಾಸ್ ನೋಟಿಸ್ ಜಾರಿ ಮಾಡಿದೆ.

ಆಸ್ಪತ್ರೆಯ ಆಂಬುಲೆನ್ಸ್ ಚಾಲಕರನ್ನು ಪತ್ತೆಹಚ್ಚಿ, ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆಯೂ ಸೂಚಿಸಿದೆ.


'ಈ ಘಟನೆಯಲ್ಲಿ ಆಸ್ಪತ್ರೆ ಸಿಬ್ಬಂದಿ ಅಥವಾ ಖಾಸಗಿ ವ್ಯಕ್ತಿಗಳ ಪಾತ್ರ ಇದೆಯೇ ಎಂಬ ಬಗ್ಗೆ ತನಿಖೆ ಕೈಗೊಳ್ಳಲಾಗಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ಯಾರನ್ನೂ ರಕ್ಷಿಸುವ ಮಾತೇ ಇಲ್ಲ' ಎಂದು ಆರೋಗ್ಯ ಸಚಿವೆ ವಿ.ರಜಿನಿ ಪ್ರತಿಕ್ರಿಯಿಸಿದ್ದಾರೆ.

ಘಟನೆ ಕುರಿತು ವಿಚಾರಣೆ ನಡೆಸುವ ಸಂಬಂಧ ತಿರುಪತಿ ಜಿಲ್ಲಾಧಿಕಾರಿ ವೆಂಕಟರಮಣ ರೆಡ್ಡಿ ಅವರು ಮೂವರು ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಿದ್ದಾರೆ. 'ರುಯಾ ಆಸ್ಪತ್ರೆಯ ಆಂಬುಲೆನ್ಸ್ ಚಾಲಕರು ದೌರ್ಜನ್ಯ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಘಟನೆಗೆ ಕಾರಣರು ಎನ್ನಲಾದ ನಾಲ್ವರು ಚಾಲಕರನ್ನು ಗುರುತಿಸಲಾಗಿದೆ' ಎಂದು ಈ ತ್ರಿಸದಸ್ಯ ಸಮಿತಿ ಹೇಳಿದೆ.

ಟೀಕೆ-ಪ್ರತಿಭಟನೆ: 'ಈ ಘಟನೆ ರಾಜ್ಯದ ಆರೋಗ್ಯ ಕ್ಷೇತ್ರದ ದುಃಸ್ಥಿತಿಗೆ ಹಿಡಿದ ಕನ್ನಡಿ' ಎಂದು ಟಿಡಿಪಿ ಮುಖ್ಯಸ್ಥ ಹಾಗೂ ವಿರೋಧ ಪಕ್ಷದ ನಾಯಕ ಎನ್. ಚಂದ್ರಬಾಬು ನಾಯ್ಡು ಟೀಕಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ವರ್ಗಾವಣೆಗೆ ಇನ್ನು ಕಡಿವಾಣ: ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯಲ್ಲಿ ಈ ವರ್ಷ ಮಾರ್ಗಸೂಚಿಯ ಪ್ರಕಾರವೇ ಅಧಿಕಾರಿಗಳು, ಸಿಬ್ಬಂದಿಯ ವರ್ಗಾವಣೆ ಮಾಡಲಾಗುವುದು. ಹಿಂದಿನಂತೆ ಬೇಕಾಬಿಟ್ಟಿಯಾಗಿ ವರ್ಗಾವಣೆ ಮಾಡುವುದಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಮಂಗಳವಾರ ನಡೆದ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳ (ಡಿಎಚ್‌ಒ) ಸಭೆಯಲ್ಲಿ ಮಾತನಾಡಿದ ಅವರು, 'ಮಾರ್ಗಸೂಚಿಯ ಪ್ರಕಾರ, ಶೇಕಡ 15ರಷ್ಟು ಮಂದಿಯ ವರ್ಗಾವಣೆಗೆ ಮಾತ್ರ ಅವಕಾಶ ನೀಡಲಾಗುವುದು. ಹತ್ತು ವರ್ಷಗಳಿಂದ ಒಂದೇ ಸ್ಥಳದಲ್ಲಿರುವ ಅಧಿಕಾರಿಗಳನ್ನು ಬದಲಾವಣೆ ಮಾಡಲಾಗುವುದು' ಎಂದರು.

ಕೆಲವು ಅಧಿಕಾರಿಗಳು, ಸಿಬ್ಬಂದಿ ಬೆಂಗಳೂರು ನಗರ ಬಿಟ್ಟು ಹೊರ ಹೋಗುತ್ತಿಲ್ಲ. ಅದನ್ನು ತಡೆಯಲು ಪರಸ್ಪರ ಕೋರಿಕೆ ವರ್ಗಾವಣೆಗಳನ್ನು ಪರಿಗಣಿಸುವುದಿಲ್ಲ ಎಂದು ಹೇಳಿದರು.

ಪ್ರತಿ ಬುಧವಾರ ಎಲ್ಲ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಆಸ್ಪತ್ರೆಗಳು ಮತ್ತು ಕಚೇರಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವುದು ಕಡ್ಡಾಯ. ಆರೋಗ್ಯ ಇಲಾಖೆಯ ಅಧಿಕಾರಿಗಳು ತಮ್ಮ ದೈನಂದಿನ ಕಾರ್ಯನಿರ್ವಹಣೆ ಕುರಿತು ದಿನಚರಿ ದಾಖಲಿಸುವುದನ್ನೂ ಕಡ್ಡಾಯ ಮಾಡಲಾಗುವುದು ಎಂದರು.

ಬಿಬಿಎಂಪಿ: ಅಕ್ರಮ ಬೆಳಕಿಗೆ ಬಂದರೂ ಅಧಿಕಾರಿಗಳ ವಿರುದ್ಧ ಕ್ರಮವಿಲ್ಲ

'ಅನಧಿಕೃತ ಎ–ಖಾತಾ': ಕ್ರಮಕ್ಕೆ ಮೀನಮೇಷ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಅನಧಿಕೃತ ನಿವೇಶನಗಳಿಗೆ ಈಗಾಗಲೇ ಅಕ್ರಮವಾಗಿ ಎ ಖಾತಾ ಮಾಡಿಕೊಂಡಿರುವ ಸಾವಿರಾರು ಪ್ರಕರಣಗಳು ಬಿಬಿಎಂಪಿ ವ್ಯಾಪ್ತಿಯಲ್ಲಿವೆ. ಈ ಅಕ್ರಮಕ್ಕೆ ಕೈಜೋಡಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಆಗಿಲ್ಲ. 'ಅಕ್ರಮ ಎ ಖಾತಾ'ಗಳನ್ನು ರದ್ದುಪಡಿಸುವ ಪ್ರಯತ್ನವೂ ಆಗಿಲ್ಲ.

ಬಿ–ಖಾತಾ ಹೊಂದಿರುವವರಿಂದ ದಂಡ ಕಟ್ಟಿಸಿಕೊಂಡು ಅವರಿಗೆ ಖಾತಾ/ಸ್ವತ್ತಿನ ಗುರುತು ಸಂಖ್ಯೆ ನೀಡುವ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿತ್ತು. ಆದರೆ, ಈ ಸಭೆಯಲ್ಲಿ 'ಅಕ್ರಮ ಎ ಖಾತಾ' ಕುರಿತು ಯಾವ ನಿಲುವು ತಳೆಯಬೇಕು ಎಂಬ ಬಗ್ಗೆ ಚರ್ಚೆಯೇ ಆಗಿಲ್ಲ.

2009ರ ಬಿಬಿಎಂಪಿ ಆಸ್ತಿ ತೆರಿಗೆ ನಿಯಮಗಳ ಪ್ರಕಾರ ಸ್ವತ್ತಿನ ಮೌಲ್ಯಮಾಪನ ನಡೆಸಿ, ಅದರ ಮಾಲೀಕ/ನಿವಾಸಿಯಿಂದ ಸಂಗ್ರಹಿಸುವ ತೆರಿಗೆ ವಿವರಗಳನ್ನು ನಮೂನೆ 'ಎ'ನಲ್ಲಿ ಹಾಗೂ ಮೌಲ್ಯಮಾಪನ ನಡೆಸದ ಸ್ವತ್ತಿನ ತೆರಿಗೆ ವಿವರಗಳನ್ನು ನಮೂನೆ 'ಬಿ'ನಲ್ಲಿ ನಮೂದಿಸಬೇಕು. ಆದರೆ, ವ್ಯವಸ್ಥೆಯ ಲೋಪಗಳನ್ನೇ ದುರ್ಬಳಕೆ ಮಾಡಿಕೊಂಡು ಪಾಲಿಕೆಯ ಕಂದಾಯ ವಿಭಾಗದ ಅಧಿಕಾರಿಗಳು ಎ ಖಾತಾ ಮಾಡಿಸಿಕೊಟ್ಟಿದ್ದಾರೆ. ಕೆಲವು ಕಡೆ ಸಂಬಂಧಪಟ್ಟ ಪ್ರಾಧಿಕಾರದಿಂದ ಮಂಜೂರಾತಿ ಪಡೆಯದೇ ನಿರ್ಮಿಸಿದ ಬಡಾವಣೆಗಳಲ್ಲಿ ಕೆಲವು ನಿವೇಶನಗಳಿಗೆ ಬಿಬಿಎಂಪಿ ಅಧಿಕಾರಿಗಳು ಬಿ ಖಾತಾ ನೀಡಿದ್ದಾರೆ. ಅದೇ ಬಡಾವಣೆಯಲ್ಲಿ ಕೆಲವು ನಿವೇಶನಗಳಿಗೆ ಎ ಖಾತಾ ನೀಡಿರುವ ಉದಾಹರಣೆಗಳಿವೆ.

ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ ಹಾಗೂ ಮಹದೇವಪುರ ವಲಯಗಳಲ್ಲಿ ಬಿ ಖಾತಾ ಹೊಂದಿರುವವರಿಗೆ ಅಕ್ರಮವಾಗಿ ಎ ಖಾತಾ ಮಾಡಿಕೊಟ್ಟಿರುವ ವಿಚಾರ ಬಿಬಿಎಂಪಿ ಕೌನ್ಸಿಲ್‌ನಲ್ಲಿ ಅನೇಕ ಸಲ ಚರ್ಚೆಗೆ ಗ್ರಾಸವಾಗಿತ್ತು. ಆದರೂ ಈ ಕುರಿತು ಅಧಿಕಾರಿಗಳ ವಿರುದ್ಧ ಬಿಬಿಎಂಪಿ ಕ್ರಮಕೈಗೊಂಡಿಲ್ಲ.

'ಅನಧಿಕೃತ ನಿವೇಶನಗಳಿಗೆ ಅಕ್ರಮವಾಗಿ ಎ ಖಾತಾ ನೀಡಿರುವ ವಿಚಾರದಲ್ಲೂ ಸರ್ಕಾರ ಸ್ಪಷ್ಟ ನಿರ್ಧಾರ ತಳೆಯಬೇಕು. ಇಲ್ಲದಿದ್ದರೆ ಈ ಹಿಂದೆ ನಡೆದ ಅಕ್ರಮಗಳೆಲ್ಲವೂ ಮುಚ್ಚಿಹೋಗಲಿವೆ. ಅಷ್ಟೇ ಅಲ್ಲ; ಬಿ ಖಾತಾಗಳಿಗೆ ವಿಧಿಸುವ ದಂಡದ ರೂಪದಲ್ಲಿ ಬಿಬಿಎಂಪಿಗೆ ಬರಬೇಕಾದ ಭಾರಿ ಪ್ರಮಾಣದ ವರಮಾನವೂ ಕೈತಪ್ಪಲಿದೆ. ಇದು ಭ್ರಷ್ಟಾಚಾರಕ್ಕೂ ಕಾರಣವಾಗಲಿದೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ವಿವರಿಸಿದರು.

ನಗರದಲ್ಲಿ 170 ಅನಧಿಕೃತ ಬಡಾವಣೆಗಳಿರುವುದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಗುರುತಿಸಿದೆ. ಬಡಾವಣೆಯ ಸ್ವರೂಪದಲ್ಲೇ ಇಲ್ಲದ ಪ್ರದೇಶಗಳಲ್ಲಿ ಭೂಪರಿವರ್ತನೆ ಆಗದ ನಿವೇಶನಗಳ ಬಗ್ಗೆ ಖಚಿತ ಮಾಹಿತಿ ಬಿಡಿಎ ಬಳಿಯಾಗಲೀ, ಬಿಬಿಎಂಪಿ ಬಳಿಯಾಗಲೀ ಇಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿ 8 ಲಕ್ಷಕ್ಕೂ ಅಧಿಕ ಬಿ ಖಾತಾಗಳಿವೆ ಎಂದು ಅಂದಾಜಿಸಲಾಗಿತ್ತು.

'ಬಿಬಿಎಂಪಿ ಅಂದಾಜು ಮಾಡಿದಷ್ಟು ಪ್ರಮಾಣದಲ್ಲಿ ಈಗ ಬಿ ಖಾತಾಗಳು ಉಳಿದಿಲ್ಲ. ಅನೇಕ ಕಡೆ ಕಂದಾಯ ವಿಭಾಗದ ಅಧಿಕಾರಿಗಳು ಲಂಚ ಪಡೆದು, ಬಿ ಖಾತಾ ಹೊಂದಿದ್ದ ಜಾಗಕ್ಕೆ ಸಮೀಪದ ಎ ಖಾತೆಯ ಉಪಸಂಖ್ಯೆ ನೀಡಿ ಸಕ್ರಮ ಮಾಡಿಕೊಟ್ಟಿದ್ದಾರೆ. ಹಾಗಾಗಿ ಬಿ ಖಾತಾ ಹೊಂದಿರುವ ನಿವೇಶನಗಳಿಗೆ ದಂಡ ವಿಧಿಸಿ ಭಾರಿ ವರಮಾನ ಗಳಿಸುವ ಪ್ರಯತ್ನ ಫಲನೀಡುವುದಿಲ್ಲ' ಎಂದು ಬಿಬಿಎಂಪಿಯ ಮಾಜಿ ಸದಸ್ಯರೊಬ್ಬರು ತಿಳಿಸಿದರು.

ಪ್ರಜಾವಾಣಿ ವಿಶೇಷ

ಸುಪ್ರೀಂ ಕೋರ್ಟ್ ಆದೇಶದ ತೂಗುಗತ್ತಿ?

ಸ್ಥಳೀಯ ಯೋಜನಾ ಪ್ರದೇಶದಲ್ಲಿ ಕೆಲ ಬಗೆಯ ಅನಧಿಕೃತ ನಿರ್ಮಾಣಗಳನ್ನು ಮತ್ತು ಭೂಬಳಕೆಯ ವಿಧಾನವನ್ನು ಬದಲಾಯಿಸಲು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಸೆಕ್ಷನ್ 76 ಎಫ್ಎಫ್ ಅವಕಾಶ ಕಲ್ಪಿಸುತ್ತದೆ. ಈ ಅವಕಾಶವನ್ನು ಪ್ರಶ್ನಿಸಿ ಸರ್ಕಾರೇತರ ಸಂಸ್ಥೆಯೊಂದು ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿತ್ತು. ಈ ಕುರಿತು 2017ರ ಜುಲೈ 13ರಂದು ಮಧ್ಯಂತರ ಆದೇಶ ನೀಡಿರುವ ಸುಪ್ರೀಂ ಕೋರ್ಟ್ ಕಾಯ್ದೆಯ ಈ ಅಂಶವನ್ನು ಜಾರಿಗೊಳಿಸುವುದಕ್ಕೆ ತಡೆಯಾಜ್ಞೆ ನೀಡಿದೆ. ಸುಪ್ರೀಂ ಕೋರ್ಟ್‌ನಿಂದ ಈ ಕುರಿತು ಅಂತಿಮ ಆದೇಶ ಪ್ರಕಟವಾಗುವವರೆಗೂ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದು ಸಾಧ್ಯವಿಲ್ಲ. ಹಾಗಾಗಿ ಸರ್ಕಾರ ಬಿ ಖಾತೆಗಳಿಗೆ ಎ ಖಾತಾ ನೀಡುವ ನಿರ್ಣಯವು ಸುಪ್ರೀಂ ಕೋರ್ಟ್‌ನ ಈ ಆದೇಶದ ತೂಗುಗತ್ತಿಯನ್ನು ಎದುರಿಸಬೇಕಿದೆ.

ಜಾತ್ರಾ ಮಹೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಟ್ಟಹಲಸೂರು ಗ್ರಾಮದಲ್ಲಿ ಮುತ್ಯಾಲಮ್ಮ ದೇವಿ ಹಾಗೂ ಗ್ರಾಮದೇವರುಗಳ ಜಾತ್ರಾ ಮಹೋತ್ಸವ ಬುಧವಾರ ನಡೆಯಲಿದೆ.

ಬೆಳಿಗ್ಗೆ 9 ಗಂಟೆಯಿಂದ ಮುತ್ಯಾಲಮ್ಮ ದೇವಿಗೆ ಆರತಿಗಳು, ಅಗ್ನಿಕುಂಡ, ತೇರು ಎಳೆಯುವ ಮೂಲಕ ವಿಶೇಷ ಪೂಜೆ ನೆರವೇರಿಸಲಾಗುವುದು. ತಮಟೆವಾದ್ಯ, ಡೊಳ್ಳುಕುಣಿತ, ವೀರಗಾಸೆ ಮತ್ತಿತರ ಜಾನಪದ ಕಲಾತಂಡಗಳ ಪ್ರದರ್ಶನ, ಸಂಜೆ 7 ಗಂಟೆಗೆ ಉದ್ಭವ ಕಲಾವಿದ ನಾಗೇಂದ್ರ-ಪ್ರಸಾದ್ ಅವರಿಂದ 'ಮಕ್ಮಲ್ ಟೋಪಿ' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.

ಗುರುವಾರ ಮಧ್ಯಾಹ್ನ 12 ಗಂಟೆಗೆ ಮುತ್ಯಾಲಮ್ಮನವರ ಸಾಮೂಹಿಕ ಉತ್ಸವ ಹಾಗೂ ಎಡೆಹಾಕುವ ಕಾರ್ಯಕ್ರಮ ನೆರವೇರಿಸಲಾಗುವುದು. ರಾತ್ರಿ 8.30 ಗಂಟೆಗೆ ಆಂಜನೇಯಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ ಆಶ್ರಯದಲ್ಲಿ ಬೆಟ್ಟಹಲಸೂರು ಗ್ರಾಮದ ಯುವಕರಿಂದ 'ಕುರುಕ್ಷೇತ್ರ' ಪೌರಾಣಿಕ ನಾಟಕ ಪ್ರದರ್ಶನ ಹಾಗೂ ಶುಕ್ರವಾರ ಸಂಜೆ 7 ಗಂಟೆಗೆ ಎಲ್ಲ ದೇವರುಗಳಿಗೆ ಮುತ್ತಿನ ಪಲ್ಲಕ್ಕಿ ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ನಕಲಿ ಕೀ ಬಳಸಿ ಬೈಕ್ ಕದಿಯುತ್ತಿದ್ದವನ ಬಂಧನ

ಬೆಂಗಳೂರು: ಮನೆಗಳ ಎದುರು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲುಗಡೆ ಮಾಡಲಾಗಿರುತ್ತಿದ್ದ ಬೈಕ್‌ಗಳನ್ನು ನಕಲಿ ಕೀ ಬಳಸಿ ಅಥವಾ ಹ್ಯಾಂಡ್ ಲಾಕ್ ಮುರಿದು ಕಳವು ಮಾಡುತ್ತಿದ್ದ ಆರೋಪಿಯನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮದ್ದೂರಿನ ಅಭಿಷೇಕ್ ಯಾನೆ ಅಭಿ (24) ಬಂಧಿತ. ಈತನಿಂದ ₹2.5 ಲಕ್ಷ ಮೌಲ್ಯದ ನಾಲ್ಕು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಮಾಲೆಕ್ಯುಲರ್ ಬಯಾಲಜಿ ಪ್ರಯೋಗಾಲಯಕ್ಕೆ ಸಚಿವ ಸುಧಾಕರ್ ಚಾಲನೆ

ಲೇಸರ್ ಸಂಶೋಧನಾ ಕೇಂದ್ರ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಲೇಸರ್ ಸಂಶೋಧನಾ ಕೇಂದ್ರ ಹಾಗೂ ಅತ್ಯಾಧುನಿಕ ಮಾಲೆಕ್ಯುಲರ್ ಬಯಾಲಜಿ ಪ್ರಯೋ-ಗಾಲಯವನ್ನು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸೋಮವಾರ ಉದ್ಘಾಟಿಸಿದರು.

ಸೌಂದರ್ಯ ದಂತ ವಿಜ್ಞಾನ ಉತ್ಕೃಷ್ಟತಾ ಕೇಂದ್ರದ ಸ್ಥಾಪನೆಗೂ ಸಚಿವರು ಶಂಕುಸ್ಥಾಪನೆ ನೆರವೇರಿಸಿದರು.

'ಲೇಸರ್ ಸಂಶೋಧನಾ ಕೇಂದ್ರದಲ್ಲಿ ಹಾರ್ಡ್ ಟಿಷ್ಯು ಲೇಸರ್ ಉಪಕರಣ (₹ 34 ಲಕ್ಷ ವೆಚ್ಚ) ಹಾಗೂ ಸಾಫ್ಟ್ ಟಿಷ್ಯು ಲೇಸರ್ ಉಪಕರಣವನ್ನು (₹ 15 ಲಕ್ಷ ವೆಚ್ಚ) ಅಳವಡಿಸಲಾಗಿದೆ. ಬಾಯಿ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲು, ಹಲ್ಲಿನ ಹುಳುಕುಗಳನ್ನು ಸರಿಪಡಿಸಲು, ಶಸ್ತ್ರಚಿಕಿತ್ಸೆ ಮತ್ತು ಹಲ್ಲಿನ ನರಗಳ ಚಿಕಿತ್ಸೆಗೆ ಈ ಯಂತ್ರಗಳು ಪ್ರಯೋಜನಕಾರಿ. ಬಾಯಿಯ ಸೌಂದರ್ಯವರ್ಧನೆ ಚಿಕಿತ್ಸೆಯೂ ಇಲ್ಲಿ ಲಭ್ಯ. ನಮ್ಮಲ್ಲಿ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ಪಡೆಯಬಹುದು' ಎಂದು ಕನ್ಸರ್ವೇಟಿವ್ ಡೆಂಟಿಸ್ಟ್ರಿ ಮತ್ತು ಎಂಡೋಡಾಂಟಿಕ್ಸ್ ವಿಭಾಗದ ಮುಖ್ಯಸ್ಥ ಡಾ. ಎನ್.ಕಿರಣ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ರಾಜೀವ್ ಗಾಂಧಿ ಆರೋಗ್ಯ ವಿಶ್ವ ವಿದ್ಯಾಲಯವು ಈ ಲೇಸರ್ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದೆ. ಇಂತಹ ಸೌಕರ್ಯ ಹೊಂದಿರುವ ದಕ್ಷಿಣ ಭಾರತದ ಮೊದಲ ಸರ್ಕಾರಿ ಆಸ್ಪತ್ರೆ ನಮ್ಮದು' ಎಂದರು.

ಸಂಸ್ಥೆಯ ಸಂಸ್ಥಾಪನಾ ಸದಸ್ಯ ಡಾ.ಎಸ್.ರಾಮಚಂದ್ರ ಪ್ರತಿಮೆಯನ್ನು ಅನಾವರಣಗೊಳಿಸಿದರು.

ಅತ್ಯಾಧುನಿಕ ಮಾಲೆಕ್ಯುಲರ್ ಬಯಾಲಜಿ ಪ್ರಯೋಗಾಲಯದ-ಲ್ಲಿ ಆರ್‌ಟಿಪಿಸಿಆರ್, ಮಲ್ಟಿಪ್ಲೆಕ್ಸ್ ಪಿಸಿಆರ್, ಡಿಎನ್‌ಎ ಸರಣಿ, ಇನ್‌ಸಿಟು ಹೈಬ್ರಿಡೈಜೇಷನ್ ಮುಂತಾದ ತಂತ್ರಜ್ಞಾನ ಬಳಕೆಯ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳಂತಹ ರೂಪಾಂತರಿ ತಳಿಗಳ ಹಾಗೂ ಹೊಸ ಬಗೆಯ ಸೂಕ್ಷ್ಮಾಣುಜೀವಿಗಳ ಪತ್ತೆಗೆ ಇದು ಸಹಕಾರಿ.



ಲೇಸರ್ ಚಿಕಿತ್ಸೆಗೆ ಬಳಸುವ ಉಪಕರಣಗಳ ಕುರಿತು ಸಚಿವ ಡಾ.ಕೆ.ಸುಧಾಕರ್ ಅವರಿಗೆ ಡಾ. ಎನ್‌.ಕಿರಣ್ ಕುಮಾರ್ ವಿವರಿಸಿದರು. ಡಾ.ಸಹನಾ ಶ್ರೀನಾಥ್, ಸಂಸದ ಪಿ.ಸಿ.ಮೋಹನ್ ಹಾಗೂ ಇತರರು ಇದ್ದಾರೆ ಪ್ರಜಾವಾಣಿ ಚಿತ್ರ

ದಂತ ಚಿಕಿತ್ಸೆ ಸಂಚಾರ ಘಟಕ ಲೋಕಾರ್ಪಣೆ

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಗ್ರಾಮೀಣ ಪ್ರದೇಶಗಳಿಗೆ ತೆರಳಿ ಬಾಯಿ ಆರೋಗ್ಯದ ಬಗ್ಗೆ ಕಾಳಜಿ ಮೂಡಿಸಲು ಹಾಗೂ ಹಲ್ಲಿನ ಚಿಕಿತ್ಸೆ ಒದಗಿಸಲು ಸುಸಜ್ಜಿತ ದಂತ ಚಿಕಿತ್ಸೆ ಸಂಚಾರ ಘಟಕವನ್ನು ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ಸಜ್ಜುಗೊಳಿಸಿದೆ. ಈ ವಾಹನವನ್ನು ಡಾ.ಸುಧಾಕರ್ ಲೋಕಾರ್ಪಣೆಗೊಳಿಸಿದರು.

'ಗ್ರಾಮೀಣ ಪ್ರದೇಶಗಳಿಗೆ ತೆರಳಿ ಹಲ್ಲಿನ ಹುಳುಕು, ವಸಡಿನ ತೊಂದರೆಗಳ ತಪಾಸಣೆ ನಡೆಸಲು ಮತ್ತು ಚಿಕಿತ್ಸೆ ನೀಡಲು, ಬಾಯಿ ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಲು ಹಾಗೂ ಈ ರೋಗ ಲಕ್ಷಣ ಹೊಂದಿದವರಿಗೆ ಕೌನ್ಸೆಲಿಂಗ್ ನೀಡಲು ಈ ವಾಹನ ಬಳಸುತ್ತೇವೆ' ಎಂದು ಸಾರ್ವಜನಿಕ ದಂತ ಆರೋಗ್ಯ ವಿಭಾಗದ ಮುಖ್ಯಸ್ಥ ಡಾ.ಮಂಜುನಾಥ ಪುರಾಣಿಕ್ ಮಾಹಿತಿ ನೀಡಿದರು.

'ಈ ವಾಹನದಲ್ಲಿ ಸುಸಜ್ಜಿತ ದಂತ ಚಿಕಿತ್ಸೆ ಕುರ್ಚಿಗಳು, ಹೆಚ್ಚುವರಿಯಾಗಿ ಅಳವಡಿಸಬಹುದಾದ ಮತ್ತೆರಡು ದಂತ ಚಿಕಿತ್ಸೆ ಕುರ್ಚಿಗಳು, ರೆಫ್ರಿಜರೇಟರ್, ಎಕ್ಸ್–ರೇ ಯಂತ್ರ, ತುರ್ತು ಚಿಕಿತ್ಸೆಗೆ ಆಮ್ಲಜನಕ ಸಿಲಿಂಡರ್, ಹವಾನಿಯಂತ್ರಣ ವ್ಯವಸ್ಥೆ ಇದೆ' ಎಂದು ವಿಭಾಗದ ಸಹಪ್ರಾಧ್ಯಾಪಕಿ ಡಾ.ಯಶೋದಾ ತಿಳಿಸಿದರು.



ರಾಜ್ಯಪಾಲ ತಾವರಚಂದ್ ಗೆಹಲೋತ್ ಅವರಿಗೆ ಎಎಪಿ ಮುಖಂಡರು ಮನವಿ ಸಲ್ಲಿಸಿದರು. ಪೃಥ್ವಿ ರೆಡ್ಡಿ, ಭಾಸ್ಕರ ರಾವ್, ಮುಖಂಡರಾದ ನಾಗಣ್ಣ ಗೌಡ, ಚನ್ನಪ್ಪಗೌಡ ನೆಲ್ಲೂರು ಹಾಗೂ ಜಗದೀಶ್ ಚಂದ್ರ ನಿಯೋಗದಲ್ಲಿ ಇದ್ದರು.

ಬೈಕ್ ಕಳ್ಳನ ಸೆರೆ: ದ್ವಿಚಕ್ರ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆಗಳ ಎದುರು ನಿಲುಗಡೆ ಮಾಡಿರುತ್ತಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡಿ ಪರಾರಿಯಾಗುತ್ತಿ-ದ್ದ ಆರೋಪಿಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರಾಜಾಜಿನಗರದ ವಿಜಯ್ (27) ಬಂಧಿತ. ಈತನಿಂದ ತಲಾ ಎರಡು ಬೈಕ್ ಹಾಗೂ ಸ್ಕೂಟರ್ ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹1.2 ಲಕ್ಷ' ಎಂದು ಪೊಲೀಸರು ತಿಳಿಸಿದ್ದಾರೆ.

'ಇದೇ 21ರ ಸಂಜೆ 4 ಗಂಟೆ ಸುಮಾರಿಗೆ ವ್ಯಕ್ತಿಯೊಬ್ಬರು ಮೆಟ್ರೊ ನಿಲ್ದಾಣದ ವಾಹನ ನಿಲುಗಡೆ ಸ್ಥಳದಲ್ಲಿ ಬೈಕ್ ನಿಲ್ಲಿಸಿ ಹೋಗಿದ್ದರು. ಅದು ಕಳವಾಗಿತ್ತು. ಸಂಬಂಧ ದಾಖಲಾಗಿದ್ದ ದೂರಿನ ಆಧಾರದಲ್ಲಿ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿದ್ದೇವೆ' ಎಂದು ಹೇಳಿದ್ದಾರೆ.

'ಆರೋಪಿಯು ಠಾಣೆ ವ್ಯಾಪ್ತಿಯಲ್ಲಿ ಮೂರು ಹಾಗೂ ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಒಂದು ದ್ವಿಚಕ್ರ ವಾಹನ ಕಳವು ಮಾಡಿದ್ದಾನೆ' ಎಂದಿದ್ದಾರೆ.

2 ಕೆ.ಜಿ.ಗಾಂಜಾ ಜಪ್ತಿ: ಆರೋಪಿ ಬಂಧನ

ಹೊರರಾಜ್ಯಗಳಿಂದ ಗಾಂಜಾ ತಂದು ನಗರದ ಕಾಲೇಜು ವಿದ್ಯಾರ್ಥಿಗಳು ಹಾಗೂ ಐಟಿ ಕಂಪನಿ ಉದ್ಯೋಗಿಗಳಿಗೆ ಮಾರಾಟ ಮಾಡಲು ಯತ್ನಿಸಿದ್ದ ಆರೋಪಿಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕುಮಾರಸ್ವಾಮಿ ಲೇಔಟ್‌ನ ಮಂಜು (29) ಬಂಧಿತ. ಈತನಿಂದ 2 ಕೆ.ಜಿ.207 ಗ್ರಾಂ ಗಾಂಜಾ ಹಾಗೂ ₹800 ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರ ಮೇಲೆ ಕಾರು ನುಗ್ಗಿಸಲು ಯತ್ನ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ತವ್ಯದಲ್ಲಿದ್ದ ಸಂಚಾರ ಪೊಲೀಸ್ ಸಿಬ್ಬಂದಿ ಮೇಲೆ ಕಾರು ನುಗ್ಗಿಸಲು ಯತ್ನಿಸಿದ್ದ ಮೂವರನ್ನು ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ದಯಾನಂದ್, ಮಂಜುನಾಥ್ ಹಾಗೂ ವೀರೇಂದ್ರ ಬಂಧಿತರು. ಪಾನ-ಮತ್ತರಾಗಿದ್ದ ಆರೋಪಿಗಳು ಇದೇ 22ರಂದು ಬ್ರಿಗೇಡ್ ರಸ್ತೆ ಬಳಿ ಕಾರು ನಿಲುಗಡೆ ಮಾಡಿ ನಿದ್ರೆಗೆ ಜಾರಿದ್ದರು. ರಾತ್ರಿ ವಾಹನಗಳ ತಪಾಸಣೆ ನಡೆಸುತ್ತಿದ್ದ ಕಬ್ಬನ್ ಪಾರ್ಕ್ ಸಂಚಾರ ಠಾಣೆ ಪೊಲೀಸರು ಕಾರು ನಿಲ್ಲಿಸಿರು-ವುದನ್ನು ಕಂಡು ಸ್ಥಳಕ್ಕೆ ಬಂದಿದ್ದರು. ಆರೋಪಿಗಳನ್ನು ಎಚ್ಚರಿಸಲು ಪ್ರ-ಯತ್ನಿಸಿದ್ದರು. ಎಷ್ಟೇ ಕೂಗಿದರೂ ಅವರು ಕಾರಿನ ಬಾಗಿಲು ತೆರೆದಿರಲಿಲ್ಲ. ಹೀಗಾಗಿ ಕಾರಿನ ಸುತ್ತಲೂ ಬ್ಯಾರಿಕೇಡ್ ಹಾಕಿ ಹೋಗಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಮಧ್ಯರಾತ್ರಿ ಎಚ್ಚರಗೊಂಡಿ-ದ್ದ ಆರೋಪಿಗಳು ಕಾರಿನ ಸುತ್ತ ಬ್ಯಾರಿಕೇಡ್ ಹಾಕಿರುವುದನ್ನು ಕಂಡು ಕೋಪಗೊಂಡಿದ್ದರು. ಕಾರನ್ನು ಚಲಾಯಿಸಿಕೊಂಡು ಪರಾರಿಯಾಗಲು ಯತ್ನಿಸಿದ್ದರು. ಈ ವೇಳೆ ಕರ್ತವ್ಯದಲ್ಲಿದ್ದ ಸಿಬ್ಬಂದಿಯೊಬ್ಬರು ಕಾರು ತಡೆಯಲು ಪ್ರಯತ್ನಿಸಿದ್ದರು. ಆಗ ಅವರ ಮೇಲೆ ಕಾರು ಹತ್ತಿಸಲು ಮುಂದಾಗಿದ್ದರು' ಎಂದು ಮಾಹಿತಿ ನೀಡಿದ್ದಾರೆ.

ಸಚಿವ ಆರಗ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ಪರೀಕ್ಷೆಯಲ್ಲಿನ ಅಕ್ರಮಕ್ಕೆ ಸಂಬಂಧಿಸಿ ರಾಜ್ಯಪಾಲರು ಮಧ್ಯಪ್ರವೇಶ ಮಾಡಬೇಕು ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂದು ಎಎಪಿ ರಾಜ್ಯ ಘಟಕ ಆಗ್ರಹಿಸಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ, ಮುಖಂಡ ಭಾಸ್ಕರ ರಾವ್ ನೇತೃತ್ವದ ನಿಯೋಗವು ರಾಜ್ಯಪಾಲ ತಾವರಚಂದ್ ಗೆಹಲೋತ್ ಅವರನ್ನು ಮಂಗಳವಾರ ಭೇಟಿ ಮಾಡಿ ಈ ಸಂಬಂಧ ಮನವಿ ಸಲ್ಲಿಸಿತು.

'ರಾಜ್ಯದ 52 ಸಾವಿರ ಅಭ್ಯರ್ಥಿಗಳು ಪಿಎಸ್‌ಐ ಪರೀಕ್ಷೆ ಬರೆದಿದ್ದಾರೆ. ಈಗ ಅಕ್ರಮ ಬಯಲಾಗಿರುವ ಕಾರಣ ಮರುಪರೀಕ್ಷೆ ನಡೆಸಬೇಕಾದ ಅವಶ್ಯಕ-ತೆಯಿದೆ. ಇದಕ್ಕಾಗಿ ನೂತನ ಪ್ರಾಧಿಕಾರ ರಚಿಸಿ ಪಾರದರ್ಶಕವಾಗಿ ಪರೀಕ್ಷಾ ಪ್ರಕ್ರಿ-ಯೆಗಳನ್ನು ಕೈಗೊಳ್ಳಬೇಕು. ಈ ಕುರಿತು ಸರ್ಕಾರಕ್ಕೆ ಆದೇಶ ನೀಡಬೇಕು' ಎಂದು ಪೃಥ್ವಿ ರೆಡ್ಡಿ ಮನವಿ ಮಾಡಿದರು.

'ಸಿಐಡಿ ತನಿಖೆಯು ನಿಧಾ-ನಗತಿಯಲ್ಲಿ ಸಾಗುತ್ತಿದೆ. ರಾಜ್ಯ ಸರ್ಕಾರವು ತನ್ನ ಪ್ರಭಾವ ಬಳಸಿ ತನಿಖೆ ವಿಳಂಬವಾಗುವಂತೆ ಮಾಡುವ ಸಾಧ್ಯತೆಯಿದೆ. ಆದ್ದರಿಂದ ತನಿಖೆಗೆ ಕಾಲಮಿತಿ ನಿಗದಿಪಡಿಸಬೇಕು. ಕೂಡಲೇ ತಪ್ಪಿತಸ್ಥರನ್ನು ಬಂಧಿಸಿ, ಆರೋಪಪಟ್ಟಿ ಸಲ್ಲಿಸಬೇಕು. ಈ ಕುರಿತು ಸರ್ಕಾರಕ್ಕೆ ಆದೇಶ ನೀಡಬೇಕು' ಎಂದು ಅವರು ಒತ್ತಾಯಿಸಿದರು.

'ಬಡವರು–ಶ್ರೀಮಂತರ ಮಧ್ಯೆ ಅಂತರ ಹೆಚ್ಚಳ'

ಯಲಹಂಕ: ಕೇಂದ್ರ ಸರ್ಕಾರದ ಶ್ರೀಮಂತರ ಪರವಾದ ಆಡಳಿತ ನೀತಿಯಿಂದಾಗಿ ದೇಶದಲ್ಲಿ ಬಡವ-ಶ್ರೀಮಂತರ ನಡುವಿನ ಅಂತರ ಹೆಚ್ಚುತ್ತಿರುವುದು ದುರದೃಷ್ಟಕರ ಸಂಗತಿ ಎಂದು ಶಾಸಕ ಕೃಷ್ಣಬೈರೇಗೌಡ ಬೇಸರ ವ್ಯಕ್ತಪಡಿಸಿದರು.

ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಜಕ್ಕೂರಿನ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯಭವನ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಅಂಬೇಡ್ಕರ್ ಅವರ 131ನೇ ಜಯಂತ್ಯೋತ್ಸವ ಹಾಗೂ ಅಂಬೇಡ್ಕರ್ ಸಮುದಾಯಭವನದ ಮೊದಲನೆ ಮಹಡಿಯ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದರು.

'ಕೇಂದ್ರ ಸರ್ಕಾರ ಶ್ರೀಮಂತ ಉದ್ಯಮಿಗಳಿಗೆ ಶೇ 30ರಷ್ಟು ತೆರಿಗೆ ವಿನಾಯಿತಿ ನೀಡಿದೆ. ಬಡವರ ಮೇಲಿನ ತೆರಿಗೆಯ ಪ್ರಮಾಣವನ್ನು ಹೆಚ್ಚಿಸಿರುವ ಪರಿಣಾಮ, ದೇಶದಲ್ಲಿ ಬಡವ-ಶ್ರೀಮಂತರ ನಡುವಿನ ಅಂತರ ಹೆಚ್ಚಾಗಿದೆ' ಎಂದು ದೂರಿದರು.

ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, 'ದಲಿತರು ಮತ್ತು ಹಿಂದುಳಿದ ಸಮುದಾಯಗಳು ಅಂಬೇಡ್ಕರ್, ಬುದ್ಧ ಹಾಗೂ ಬಸವಣ್ಣನವರನ್ನು ಎಂದಿಗೂ ಮರೆಯಬಾರದು. ಈ ಮೂವರ ತತ್ವ-ಸಿದ್ಧಾಂತಗಳು ಜೀವನ ಸುಧಾರಣೆಗೆ ಬಹಳ ಹತ್ತಿರವಾಗಿರುವುದರಿಂದ ಇವುಗಳ ಅರಿವು ಪಡೆದುಕೊಳ್ಳುವುದರ ಜೊತೆಗೆ ನಿತ್ಯಜೀವನದಲ್ಲಿ ಅಳವಡಿಸಿ ಕೊಳ್ಳಬೇಕು' ಎಂದು ತಿಳಿಸಿದರು.

ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಯೋಜಕ ವಿ.ನಾಗರಾಜ್, ಅಂಬೇಡ್ಕರ್ ಸಮುದಾಯಭವನ ಟ್ರಸ್ಟ್‌ನ ಅಧ್ಯಕ್ಷ ರವಿಕುಮಾರ್, ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿ ಡಾ. ಆರ್. ಜಯಶಂಕರ್, ಕಾಂಗ್ರೆಸ್ ಮುಖಂಡರಾದ ಎಂ.ಹನುಮಂತೇಗೌಡ, ಎನ್.ಎನ್. ಶ್ರೀನಿವಾಸಯ್ಯ, ಬಿ.ಜಿ.ರಮೇಶ್, ಹಿರಿಯ ವಕೀಲ ಎಸ್.ವಿ.ರಾಮಚಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಭೌಗೋಳಿಕ ಸೂಚಕ (ಜಿಐ ಟ್ಯಾಗ್) ಉತ್ಪನ್ನಗಳ ಉತ್ಸವ: ಉದ್ಘಾಟನೆ–ಮೈಸೂರಿನ ರಾಜವಂಶಸ್ಥ ಯದುವೀರ ಒಡೆಯರ್, ಆಯೋಜನೆ ಮತ್ತು ಸ್ಥಳ–ಜಿಐ ಟ್ಯಾಗ್ಡ್ ಉತ್ಪನ್ನಗಳ ಹೆರಿಟೇಜ್ ಮಾಲ್, ಇಂಡಿಯಾಸ್ ಓನ್ಲಿ, ಎಚ್‌ಎಸ್‌ಆರ್ ಬಡಾವಣೆಯ 6ನೇ ಹಂತ, ಬೆಳಿಗ್ಗೆ 10



ಯದುವೀರ ಒಡೆಯರ್

ಎಸ್‌ಜೆಬಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಎಸ್‌ಜೆಬಿ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಆ್ಯಂಡ್ ಪ್ಲಾನಿಂಗ್‌ನ ಪದವಿ ಪ್ರದಾನ: ಸಾನ್ನಿಧ್ಯ–ನಿರ್ಮಲಾನಂದನಾಥ ಸ್ವಾಮೀಜಿ, ಪ್ರಕಾಶನಾಥ ಸ್ವಾಮೀಜಿ, ಅತಿಥಿ–ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಎಂ.ಎನ್. ಚಂದ್ರಶೇಖರ್, ಸ್ಥಳ–ಬಿಜಿಎಸ್–ಎಸ್‌ಜೆಬಿ ಸಭಾಂಗಣ, ಕೆಂಗೇರಿ, ಬೆಳಿಗ್ಗೆ 10.30

ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಜೀವನ ಸಂಘರ್ಷ ಕುರಿತಾದ ಪುಸ್ತಕ ಬಿಡುಗಡೆ: 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಅತಿಥಿಗಳು–ಹೇಮಲತಾ ಮಹಿಷಿ, ಸುಧಾ ಕಾಮತ್, ಎಸ್.ಶೋಭಾ, ಆಯೋಜನೆ–ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಸ್ಥಳ–ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10.30

ಸಮನ್ವಯ ಕಲಾ ಉತ್ಸವ: ಅ.ನ.ಯಲ್ಲಪ್ಪರೆಡ್ಡಿ ಅವರ 'ಅರಣ್ಯೆ ನಿನಗೆ ಶರಣು' ಪುಸ್ತಕ ಬಿಡುಗಡೆ ಮತ್ತು ನೃತ್ಯರೂಪಕ ಪ್ರದರ್ಶನ: ಆಯೋಜನೆ–ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್, ರಾಜರಾಜೇಶ್ವರಿ ಕಲಾನಿಕೇತನ, ಇಕ್ರಾ, ಸ್ಥಳ–ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 6



ಸಮನ್ವಯ ಕಲಾ ಉತ್ಸವ

ಜನಪದ ಗೀತೆ ಶಿಬಿರ: ಉದ್ಘಾಟನೆ–ಅಚಲ್ ಪಾಂಡ್ಯ, ಅತಿಥಿಗಳು–ಎನ್. ನಮ್ರತಾ, ಅಪ್ಪಗೆರೆ ತಿಮ್ಮರಾಜು, ಆಯೋಜನೆ–ಗಾನಮಾಧುರ್ಯ ಸಾಂಸ್ಕೃತಿಕ ಕಲಾ ಕೇಂದ್ರ, ಸ್ಥಳ–ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ಮಲ್ಲತ್ತಹಳ್ಳಿ, ಬೆಳಿಗ್ಗೆ 10.30

ಕನ್ನಡೋತ್ಸವ: ನವೀಕೃತ ಪಾರಂಪರಿಕ ಪ್ರಾಂಗಣ ಅನಾವರಣ–ಯದುವೀರ ಒಡೆಯರ್, ಅಧ್ಯಕ್ಷತೆ–ಎಲ್. ಹನುಮಂತಯ್ಯ, ಉದ್ಘಾಟನೆ–ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು–ಪಂಕಜ್ ಗುಪ್ತ, ಮಿಲಿಂದ್ ಜಿ.ಕೊಪ್ಪಿಕರ್, ಟಿ.ಎಸ್. ನಾಗಾಭರಣ, ಕೆಂಪ ಹೊನ್ನಯ್ಯ, ಹರೇಕಳ ಹಾಜಬ್ಬ, ಮಳವಳ್ಳಿ ಮಹದೇವಸ್ವಾಮಿ, ಆಯೋಜನೆ–ಬಿಎಚ್‌ಇಎಲ್ ಇಪಿಡಿ ಕರ್ನಾಟಕ ಸಂಘ, ಸ್ಥಳ–ಸಿಬಿಯು ಮೈದಾನ, ಮಧ್ಯಾಹ್ನ 12.30

ವಿದ್ಯಾರ್ಥಿವೇತನ ವಿತರಣೆ ಸಮಾರಂಭ: ಆಯೋಜನೆ–ಯುವಿಸಿಇ ಪದವೀಧರರ ಸಂಘ, ಸ್ಥಳ–ಸೆನೆಟ್ ಹಾಲ್, ಯುವಿಸಿಇ, ಕೆ.ಆರ್.ವೃತ್ತ, ಮಧ್ಯಾಹ್ನ 3

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಸಂಗೀತ ಕಾರ್ಯಕ್ರಮ–ಐಶ್ವರ್ಯ ಮತ್ತು ಸೌಂದರ್ಯ, ವಿಶ್ವಜಿತ್ ಮತ್ತೂರ್, ಫಣೀಂದ್ರ ಭಾಸ್ಕರ್, ಭಾಗ್ಯಲಕ್ಷ್ಮಿ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ

ಕೊರೊನಾ ಸೋಂಕು ನಿಯಂತ್ರಣ: ಹಿಂದಿನ ನಿಬಂಧನೆಗಳ ಮುಂದುವರಿಕೆ–ಬಿಬಿಎಂಪಿ

ಸಭೆ, ಸಮಾರಂಭಗಳಿಗೆ ಸದ್ಯಕ್ಕಿಲ್ಲ ನಿರ್ಬಂಧ

ಪ್ರಜಾವಾಣಿ ವಾರ್ತೆ


ತ್ರಿಲೋಕಚಂದ್ರ

ಬೆಂಗಳೂರು: 'ನಗರದಲ್ಲಿ ಸದ್ಯಕ್ಕೆ ಕೋವಿಡ್ ಕಾರಣಕ್ಕೆ ಸಭೆ, ಸಮಾರಂಭಗಳ ಆಯೋಜನೆ ಮೇಲೆ ನಿರ್ಬಂಧ ವಿಧಿಸುವ ಪರಿಸ್ಥಿತಿ ಇಲ್ಲ. ಮುಂದಿನ ಸನ್ನಿವೇಶ ನೋಡಿಕೊಂಡು ಹೊಸ ಮಾರ್ಗಸೂಚಿ ರಚಿಸಲಿದ್ದೇವೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ. ತ್ರಿಲೋಕಚಂದ್ರ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಸದ್ಯಕ್ಕೆ ರೋಗ ಲಕ್ಷಣ ಹೊಂದಿದವರು ಹಾಗೂ ಆಸ್ಪತ್ರೆಗೆ ದಾಖಲಾಗುತ್ತಿರುವವರನ್ನಷ್ಟೇ ಕಡ್ಡಾಯವಾಗಿ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಜನನಿಬಿಡ ಪ್ರದೇಶಗಳಲ್ಲಿ ಕೈಗಳನ್ನು ಸೋಂಕು ನಿವಾರಕದಿಂದ ಸ್ವಚ್ಛಗೊಳಿಸುವುದು, ಪರಸ್ಪರ ಅಂತರ ಕಾಪಾಡುವುದು, ಕಡ್ಡಾಯವಾಗಿ ಮಾಸ್ಕ್ ಧರಿಸುವ ನಿಯಮಗಳು ಈಗಲೂ ಜಾರಿಯಲ್ಲಿವೆ. ಇನ್ನಾವುದೇ ಹೊಸ ನಿಯಮ ರೂಪಿಸಿಲ್ಲ' ಎಂದರು.

'ಮಹದೇವಪುರ ಹಾಗೂ ಪೂರ್ವ ಬೆಂಗಳೂರಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚು ಕಾಣಿಸಿಕೊಳ್ಳುತ್ತಿವೆ. ಈಗಲೂ ಕೋವಿಡ್ ಪರೀಕ್ಷೆಗೆ ಸಂಗ್ರಹಿಸುವ ಮಾದರಿಗಳನ್ನು ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸುತ್ತಿದ್ದೇವೆ. ನಗರದಲ್ಲಿ ಒಮೈಕ್ರಾನ್‌ನ ಹೊಸ ರೂಪಾಂತರಿ ತಳಿ ಪತ್ತೆಯಾದ ಬಗ್ಗೆ ಅಧಿಕೃತವಾಗಿ ವರದಿ ಆಗಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಕೆಲವು ರಾಜ್ಯಗಳಲ್ಲಿ ಕೊರೊನಾ ಸೋಂಕು ಹೆಚ್ಚಾಗುತ್ತಿದೆ. ಇದುವರೆಗೆ ನಮ್ಮಲ್ಲಿ ಸೌಮ್ಯ ಲಕ್ಷಣಗಳು ಮಾತ್ರ ಕಾಣಿಸಿಕೊಂಡಿದೆ. ನಾವೀಗ ನಾಲ್ಕನೇ ಅಲೆಯ ಮೊದಲ ಹಂತದಲ್ಲಿದ್ದೇವೆ. ನಾಲ್ಕನೇ ಅಲೆಯನ್ನು ಸಮರ್ಥವಾಗಿ ಎದುರಿಸಬೇಕಾದರೆ ಇದುವರೆಗೂ ಕೋವಿಡ್ ಲಸಿಕೆ ಪಡೆಯದವರು ತಕ್ಷಣ ಲಸಿಕೆ ಪಡೆಯಬೇಕು. ಕೋವಿಡ್ ಕಾಣಿಸಿಕೊಂಡವರಲ್ಲಿ ಲಸಿಕೆ ಪಡೆಯದವರೇ ಹೆಚ್ಚಾಗಿ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ ಎಂಬುದನ್ನು ಗಮನಿಸಬೇಕು. ಲಸಿಕೆ ಪಡೆದವರು ಎರಡನೇ ಡೋಸ್ ಹಾಗೂ ಬೂಸ್ಟರ್ ಡೋಸ್ ಪಡೆಯಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲರೂ ಮಾಸ್ಕ್ ಧರಿಸಬೇಕು. ಅನಿಯಂತ್ರಿತ ಮಧುಮೇಹ, ಅಧಿಕ ರಕ್ತದೊತ್ತಡ, ಕ್ಯಾನ್ಸರ್ ಮತ್ತಿತರ ಕಾಯಿಲೆ ಹೊಂದಿರುವವರು ಹೆಚ್ಚಿನ ಕಾಳಜಿ ವಹಿಸಬೇಕು' ಎಂದರು.

'ಮಕ್ಕಳಲ್ಲಿ ಕೋವಿಡ್ ಕಾಣಿಸಿಕೊಳ್ಳುವ ಪ್ರಮಾಣ ಹೆಚ್ಚಾಗಿಲ್ಲ. ನಾಲ್ಕನೇ ಅಲೆಯಲ್ಲಿ ರೋಗ ಲಕ್ಷಣಗಳು ಮೂರನೇ ಅಲೆಯ ಮಾದರಿಯಲ್ಲೇ ಇವೆ' ಎಂದರು.

'ಸಂಚಾರ ಟ್ರಯಾಜಿಂಗ್ ವ್ಯವಸ್ಥೆ ಅಳವಡಿಸಿಕೊಂಡ ಕಾರಣ ನಗರದಲ್ಲಿ ಕೋವಿಡ್‌ನ ಮೂರನೇ ಅಲೆಯನ್ನು ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗಿತ್ತು. ಅದು ಯಶಸ್ವಿ ಮಾದರಿ. ಸೋಂಕಿತರ ಮನೆಗೆ ತೆರಳಿ ಅವರಿಗೆ ಯಾವ ರೀತಿಯ ಚಿಕಿತ್ಸೆಯ ಅಗತ್ಯವಿದೆ ಎಂಬುದನ್ನು ನಿರ್ಧರಿಸಲು ವೈದ್ಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿರಬೇಕಾಗುತ್ತದೆ. ಜೊತೆಗೆ ಕೋವಿಡ್ ಪರೀಕ್ಷೆಯ ಪ್ರಮಾಣವನ್ನು ಹೆಚ್ಚಿಸಲು ಸ್ವ್ಯಾಬ್ ಸಂಗ್ರಹಿಸುವ ಹಾಗೂ ದತ್ತಾಂಶ ನಮೂದಿಸುವ ಸಿಬ್ಬಂದಿಯ ಸಂಖ್ಯೆಯನ್ನೂ ಜಾಸ್ತಿ ಮಾಡಬೇಕು ಎಂದು ಕೋರಿದ್ದೇವೆ' ಎಂದರು.

'3 ಲಕ್ಷ ಮಂದಿ ಇನ್ನೂ ಲಸಿಕೆ ಪಡೆದಿಲ್ಲ'

'ನಗರದ ನಿವಾಸಿಗಳಲ್ಲಿ ಲಸಿಕೆ ಪಡೆಯಲು ಅರ್ಹರಾದವರಲ್ಲಿ ಸುಮಾರು 3 ಲಕ್ಷ ಮಂದಿ ಇನ್ನೂ ಕೋವಿಡ್ ಲಸಿಕೆ ಪಡೆದಿಲ್ಲ. ಅಂತಹವರ ಮನೆಗೆ ತೆರಳಿ ಲಸಿಕೆ ಪಡೆಯುವಂತೆ ಮನವೊಲಿಸುತ್ತಿದ್ದೇವೆ. ಆದರೂ ಕೆಲವರು ಲಸಿಕೆ ಪಡೆಯಲು ಹಿಂಜರಿಯುತ್ತಿದ್ದಾರೆ. ಎರಡು ತಿಂಗಳಲ್ಲಿ 7 ಲಕ್ಷ ಮಂದಿಗೆ ಮನೆಗೆ ಮನೆಗೆ ಹೋಗಿ ಮನವೊಲಿಸಿ ಲಸಿಕೆ ಕೊಟ್ಟಿದ್ದೇವೆ' ಎಂದು ತ್ರಿಲೋಕಚಂದ್ರ ತಿಳಿಸಿದರು.



ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಉದಯಶಂಕರ್, ಎಸ್‌.ಕೆ.ಆಂಜಿನಪ್ಪ, ಎಚ್‌.ಪಿ.ನಾರಾಯಣಸ್ವಾಮಿ, ಎನ್‌.ಕೆ.ಮಹೇಶ್ ಕುಮಾರ್, ಲಕ್ಷ್ಮೀಪತಿ, ದಯಾನಂದ್, ಮಧು, ನರಸಿಂಹಮೂರ್ತಿ ಇತರರು ಇದ್ದರು.

₹ 8.50 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ವಿದ್ಯಾನಗರ ಕ್ರಾಸ್‌ನಿಂದ ರಜಾಕ್‌ಪಾಳ್ಯದ ವರೆಗೆ ಲೋಕೋಪಯೋಗಿ ಇಲಾಖೆಯ ಅನುದಾನದಡಿಯಲ್ಲಿ ₹8.50 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಈ ಕಾಮಗಾರಿಗಾಗಿ 4 ವರ್ಷದ ಹಿಂದೆಯೇ ಅನುದಾನ ಮಂಜೂರಾಗಿದ್ದರೂ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿ ಕಾಮಗಾರಿ ಸ್ಥಗಿತಗೊಂಡಿತ್ತು. ಈ ರಸ್ತೆಯು ಹಲವಾರು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾಗಿದ್ದು, ತೀರಾ ಹಾಳಾಗಿದ್ದ ಪರಿಣಾಮ, ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದರು. ಈಗ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾಗಿ ಕಾಮಗಾರಿ ಆರಂಭಿಸಲಾಗಿದ್ದು, ಇದರಿಂದ ಸಮಸ್ಯೆ ನಿವಾರಣೆಯಾಗಲಿದೆ' ಎಂದು ತಿಳಿಸಿದರು.

ಮೇ 29ರಿಂದ ಕಾಂಗ್ರೆಸ್ ಸಾಂಸ್ಥಿಕ ಚುನಾವಣೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇ 29ರಿಂದ ಜೂನ್ 10ರವರೆಗೆ ರಾಜ್ಯದಾದ್ಯಂತ ಕಾಂಗ್ರೆಸ್ ಸಾಂಸ್ಥಿಕ ಚುನಾವಣೆಗಳು ನಡೆಯಲಿವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈವರೆಗೆ ನಡೆದಿರುವ ಸದಸ್ಯಸ್ವತ್ವ ನೋಂದಣಿ ಆಧಾರದಲ್ಲೇ ಸಾಂಸ್ಥಿಕ ಚುನಾವಣೆ ನಡೆಸಲಾಗುವುದು. ಈವರೆಗೆ ನೋಂದಣಿಯಾಗಿರುವ 78 ಲಕ್ಷ ಸದಸ್ಯರಿಗಷ್ಟೇ ಮತದಾನದ ಅವಕಾಶ ಇರುತ್ತದೆ' ಎಂದರು.

ಮತದಾರರ ಪಟ್ಟಿಯನ್ನು ಪ್ರಕಟಿಸಿ ಆಕ್ಷೇಪಣೆ, ದೂರು ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗುವುದು. ನಂತರ ಆರಂಭಿಕ ಹಂತದಲ್ಲಿ ಬೂತ್ ಮಟ್ಟದ ಸಮಿತಿಗಳ ಪದಾಧಿಕಾರಿಗಳ ಆಯ್ಕೆ ನಡೆಯಲಿದೆ. ನಂತರ ಬ್ಲಾಕ್ ಕಾಂಗ್ರೆಸ್ ಸಮಿತಿಗಳ ಪದಾಧಿಕಾರಿಗಳು ಹಾಗೂ ಅಗತ್ಯ ಇರುವ ಕಡೆಗಳಿಗೆ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಸಲಾಗುವುದು ಎಂದರು.

ಮೂರನೇ ಹಂತದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳು ಹಾಗೂ ಅಧ್ಯಕ್ಷರ ಚುನಾವಣೆ ನಡೆಸಲಾಗುವುದು. ಕೊನೆಯ ಹಂತದಲ್ಲಿ ಕೆಪಿಸಿಸಿ ಮತ್ತು ಎಐಸಿಸಿ ಸದಸ್ಯರ ಆಯ್ಕೆಗೆ ಚುನಾವಣೆ ನಡೆಯಲಿದೆ. ಜಿಲ್ಲಾ ಮಟ್ಟ ಹಾಗೂ ರಾಜ್ಯ ಮಟ್ಟದ ಚುನಾವಣಾ ಪ್ರಕ್ರಿಯೆ ನಡೆಸಲು ಹೊರ ರಾಜ್ಯದವರು ಬರುತ್ತಾರೆ. ಬ್ಲಾಕ್ ಮಟ್ಟದ ಚುನಾವಣೆಗೆ ಇತರ ಕ್ಷೇತ್ರಗಳ ಮುಖಂಡರನ್ನು ನಿಯೋಜಿಸಲಾಗುವುದು ಎಂದು ವಿವರ ನೀಡಿದರು.

ಸದಸ್ಯರಲ್ಲದವರು ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಒಂದು ಕುಟುಂಬದ ಒಬ್ಬ ಸದಸ್ಯ ಮಾತ್ರ ಒಂದು ಮತಗಟ್ಟೆ ಸಮಿತಿಯಿಂದ ಚುನಾವಣೆಗೆ ಸ್ಪರ್ಧಿಸಬಹುದು. ಕಾಂಗ್ರೆಸ್‌ನ ಚುನಾವಣಾಧಿಕಾರಿ ಸುದರ್ಶನ್ ನಾಚಿಯಪ್ಪನ್, ಉಪ ಚುನಾವಣಾಧಿಕಾರಿ ಜೋಸೆಫ್ ಅಬ್ರಾಹಂ ಮತ್ತು ಮೋತಿಲಾಲ್ ದೇವಾನಂದ್ ನೇತೃತ್ವದಲ್ಲಿ ಪ್ರಕ್ರಿಯೆ ನಡೆಯಲಿದೆ ಎಂದರು.

ಸದಸ್ಯತ್ವ ನೋಂದಣಿಯಲ್ಲಿ ಕರ್ನಾಟಕವು ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಮೇ 1ರಿಂದ ಪುನಃ ಸದಸ್ಯತ್ವ ನೋಂದಣಿ ಆರಂಭವಾಗಲಿದೆ. ಆ ಬಳಿಕ ಸದಸ್ಯತ್ವ ಪಡೆಯುವವರಿಗೆ ಈ ವರ್ಷ ಸಾಂಸ್ಥಿಕ ಚುನಾವಣೆಯಲ್ಲಿ ಮತದಾನದ ಹಕ್ಕುಇರುವುದಿಲ್ಲ ಎಂದು ಹೇಳಿದರು.

ಮೇ 1ಕ್ಕೆ ವಧು–ವರರ ಸಮಾವೇಶ

ಬೆಂಗಳೂರು: ಸಪ್ತಪದಿ ಫೌಂಡೇಷನ್ ಟ್ರಸ್ಟ್ ಹಾಗೂ ರಾಜಾಜಿನಗರ ಬ್ರಾಹ್ಮಣ ಸಭಾ ಸಹಯೋಗದಲ್ಲಿ ಬ್ರಾಹ್ಮಣ ವಧು ವರರ ಸಮಾವೇಶವನ್ನು ರಾಜಾಜಿನಗರದ ಶ್ರೀಶಂಕರ ಸೇವಾ ಸಮಿತಿ ಸಭಾಂಗಣದಲ್ಲಿ ಮೇ 1ರಂದು ಬೆಳಿಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ.

ಸಂಪರ್ಕ: 8217876335

ಬುದ್ಧಿಮಾಂದ್ಯ ಹೆಣ್ಣು ಮಕ್ಕಳಿಗೆ ಜನ್ಮ ಕಿರುಕುಳದಿಂದ ತಾಯಿಯ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಬ್ಬರು ಬುದ್ಧಿಮಾಂದ್ಯ ಹೆಣ್ಣು ಮಕ್ಕಳಿಗೆ ಜನ್ಮ ನೀಡಿದ ಕಾರಣಕ್ಕೆ ಕಿರುಕುಳ ನೀಡಿ ಅಪಮಾನಿಸಿ ಮಹಿಳೆಯ ಸಾವಿಗೆ ಕಾರಣರಾದ ಪತಿ, ಅತ್ತೆ ಹಾಗೂ ಸಹೋದರಿಯನ್ನು ಅಪರಾಧಿಗಳು ಎಂದು ಸಾರಿರುವ ಹೈಕೋರ್ಟ್ ಅವರಿಗೆ ಶಿಕ್ಷೆ ವಿಧಿಸಿದೆ.

ಮಂಡ್ಯದ ವಿಚಾರಣಾ ನ್ಯಾಯಾಲಯ ಖುಲಾಸೆಗೊಳಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಗಳಾದ ಬಿ.ವೀರಪ್ಪ ಮತ್ತು ಎಸ್‌.ರಾಚಯ್ಯ ಅವರಿದ್ದ ವಿಭಾಗೀಯ ನ್ಯಾಯಪೀಠ ಭಾಗಶಃ ಮಾನ್ಯ ಮಾಡಿದೆ.

ಇಬ್ಬರು ಮಕ್ಕಳು ಪತಿ ಮಾದೇಶ, ಅತ್ತೆ ಮಾದಮ್ಮ ಮತ್ತು ಸಹೋದರಿ ಮಹದೇವಮ್ಮ ಬಳಿ ಇರುವ ಕಾರಣ ಮೂವರಿಗೂ ತಲಾ ಒಂದು ವರ್ಷ ಜೈಲು ಶಿಕ್ಷೆ ಹಾಗೂ ₹ 20 ಸಾವಿರ ದಂಡ ವಿಧಿಸಿದೆ.

ಮಂಡ್ಯದ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ಆರೋಪಿಗಳನ್ನು ಖುಲಾಸೆಗೊಳಿಸಿತ್ತು. ಇದನ್ನು ಪ್ರಶ್ನಿಸಿ ಮಳವಳ್ಳಿ ತಾಲ್ಲೂಕಿನ ಕಿರುಗಾವಲು ಪೊಲೀಸರು ಮೇಲ್ಮನವಿ ಸಲ್ಲಿಸಿದ್ದರು.

'ಸಂತ್ರಸ್ತೆ ಹೇಮಲತಾ ಸಾಯುವ ಮುನ್ನ ನೀಡಿರುವ ಹೇಳಿಕೆಗೆ ಸಂಬಂಧಿಸಿದ ಸಾಕ್ಷ್ಯಗಳು ಅನುಮಾನಾಸ್ಪದವಾಗಿವೆ. ಆದರೆ, ಸಂತ್ರಸ್ತೆಗೆ ಕಿರುಕುಳ ನೀಡಿರುವ ವಿಚಾರದಲ್ಲಿ ಸಾಕ್ಷ್ಯಗಳು ಸರಿಯಾಗಿವೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಕುಂಬಾರ ಸಂಘದ ಚುನಾವಣೆ: ಅಕ್ರಮ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುಂಬಾರರ ಸಂಘದ ಚುನಾವಣೆಯಲ್ಲಿ ಭಾರಿ ಅಕ್ರಮ ನಡೆದಿದ್ದು, ಮತದಾನದಲ್ಲಿ ಅಕ್ರಮಕ್ಕೆ ಅವಕಾಶ ನೀಡಿದ ಚುನಾವಣಾಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಸಂಘದ ಮುಖಂಡರು ಆಗ್ರಹಿಸಿದ್ದಾರೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುಂಬಾರ ಸಮುದಾಯದ ಮುಖಂಡ ಕೆ.ಮುನಿಸ್ವಾಮಿ, 'ಮಾ.27ರಂದು ಸಂಘದ ಚುನಾವಣೆ ನಡೆಯಿತು. ಚುನಾವಣಾಧಿಕಾರಿ ಮಂಜುನಾಥ್ ಅವರು ಸಮುದಾಯದ ಒಂದು ಬಣದ ಆಮಿಷಗಳಿಗೆ ಒಳಗಾಗಿ ಅಕ್ರಮಕ್ಕೆ ಅವಕಾಶ ನೀಡಿದ್ದು, ಇದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಆರೋಪಿಸಿದರು.

'ಚುನಾವಣಾಧಿಕಾರಿ ಲಂಚ ಪಡೆದು ಈ ರೀತಿ ಮಾಡಿದ್ದು, ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಸಂಘಕ್ಕೆ ಹೊಸದಾಗಿ ಚುನಾವಣೆ ನಡೆಸಬೇಕು. ಅಲ್ಲಿವರೆಗೆ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಬೇಕು' ಎಂದು ಒತ್ತಾಯಿಸಿದರು.

'ಆರೋಪ ಮಾಡುತ್ತಿರುವವರಿಂದ ಅಕ್ರಮ'

'ಪರಾಜಿತ ಅಭ್ಯರ್ಥಿಯಾಗಿರುವ ಕೆ.ಮುನಿಸ್ವಾಮಿ ಸಂಘದಲ್ಲಿ ಈ ಹಿಂದೆ ಹಲವು ಅಕ್ರಮಗಳನ್ನು ಎಸಗಿದ್ದಾರೆ. ಸಂಘಕ್ಕೆ ಮಂಜೂರಾದ ₹1 ಕೋಟಿ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಈ ಬಗ್ಗೆ ಕಲಾಸಿಪಾಳ್ಯ ಠಾಣೆಯಲ್ಲಿ ಪ್ರಕರಣವೂ ದಾಖಲಾಗಿದೆ' ಎಂದು ಕುಂಬಾರರ ಸಂಘದ ಕಾರ್ಯದರ್ಶಿ ಎಸ್‌.ಗೋವಿಂದ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಮುನಿಸ್ವಾಮಿ ಅವರು ಸಂಘದ ಹಣದಿಂದ ಹಲವೆಡೆ ಅಕ್ರಮ ಆಸ್ತಿಗಳನ್ನೂ ಮಾಡಿಕೊಂಡಿದ್ದಾರೆ. ಈಗ ಸಂಘದ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ' ಎಂದರು.

ಸಂಕ್ಷಿಪ್ತ ಸುದ್ದಿ

ರಾಷ್ಟ್ರೀಯ ಸಮ್ಮೇಳನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸೂಕ್ಷ್ಮಜೀವಿ ವಿಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಆಹಾರ ತಂತ್ರಜ್ಞಾನ ವಿಭಾಗವು ಏ.28 ಮತ್ತು 29ರಂದು 'ಸೂಕ್ಷ್ಮ ಜೀವಿಗಳ ಜೈವಿಕ ತಂತ್ರಜ್ಞಾನದ ಪ್ರಗತಿ: ಪ್ರಸ್ತುತ ಪ್ರವೃತ್ತಿಗಳು ಮತ್ತು ಭವಿಷ್ಯದ ನಿರೀಕ್ಷೆಗಳು' ಕುರಿತು ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿದೆ. ಶಿಕ್ಷಣ ತಜ್ಞರು, ವಿಜ್ಞಾನಿಗಳು, ಉದ್ಯಮದ ವೃತ್ತಿಪರರು, ಸ್ನಾತಕೋತ್ತರ ವಿದ್ಯಾರ್ಥಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಎಂದು ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಡಿ.ಸಿ. ಮೋಹನ್ ತಿಳಿಸಿದ್ದಾರೆ.

ಗೌತಮ್ ಅದಾನಿ ವಿಶ್ವದ ಐದನೆಯ ಸಿರಿವಂತ

ಬೆಂಗಳೂರು: ಫೋಬ್ಸ್ ನಿಯತಕಾಲಿಕೆಯ ಪ್ರಕಾರ, ಉದ್ಯಮಿ ಗೌತಮ್ ಅದಾನಿ ಅವರು ಜಗತ್ತಿನ ಐದನೆಯ ಅತ್ಯಂತ ಶ್ರೀಮಂತರಾಗಿ ಹೊರಹೊಮ್ಮಿದ್ದಾರೆ.

ನಿಯತಕಾಲಿಕೆಯು ಉದ್ಯಮಿಗಳು, ಹೂಡಿಕೆದಾರರ ಷೇರು ಮತ್ತು ಆಸ್ತಿಯ ಮೌಲ್ಯವನ್ನು ಆಧರಿಸಿ ಶ್ರೀಮಂತರ ಪಟ್ಟಿಯನ್ನು ನೀಡುತ್ತದೆ.

ಅದಾನಿ ಸಂಪತ್ತಿನ ಒಟ್ಟು ಮೌಲ್ಯ ₹ 9.88 ಲಕ್ಷ ಕೋಟಿ (ಮಂಗಳವಾರದ ಅಂದಾಜು) ಎಂದು ಫೋಬ್ಸ್ ಹೇಳಿದೆ. ಎಲಾನ್ ಮಸ್ಕ್ ಮತ್ತು ಜೆಫ್ ಬೆಜಾಸ್ ಕ್ರಮವಾಗಿ ಒಂದು ಮತ್ತು ಎರಡನೆಯ ಸ್ಥಾನಗಳಲ್ಲಿ ಇದ್ದಾರೆ.

ಖರೀದಿ ಕೇಂದ್ರಗಳಲ್ಲಿ ಮಧ್ಯಾಹ್ನದ ನಂತರ ಸರ್ವರ್ ಸಮಸ್ಯೆ ಪರಿಹಾರ

ರಾಗಿ: ನೋಂದಣಿ ಆರಂಭ

ಪ್ರಜಾವಾಣಿ ವಾರ್ತೆ



ಮೈಸೂರು ಜಿಲ್ಲೆಯ ಕೆ.ಆರ್‌.ನಗರದ ಎಪಿಎಂಸಿ ಆವರಣದಲ್ಲಿರುವ ರಾಗಿ ಖರೀದಿ ಕೇಂದ್ರದಲ್ಲಿ ಮಂಗಳವಾರ ರೈತರು ಮುಗಿಬಿದ್ದು ಹೆಸರು ನೋಂದಣಿ ಮಾಡಿಸಿದರು

ಬೆಂಗಳೂರು/ಮೈಸೂರು: ಸರ್ವರ್ ಸಮಸ್ಯೆಯಿಂದಾಗಿ ಸ್ಥಗಿತಗೊಂಡಿದ್ದ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿಗೆ ಹೆಸರು ನೋಂದಣಿ ಪ್ರಕ್ರಿಯೆ ಮಂಗಳವಾರ ಮಧ್ಯಾಹ್ನದ ನಂತರ ಸುಗಮವಾಗಿ ಆರಂಭವಾಗಿದೆ.

ರಾಗಿ ಬೆಳೆಗಾರರು ಹೆಸರು ನೋಂದಾಯಿಸಲು ಮೊದಲ ದಿನವಾದ ಸೋಮವಾರವೇ ತಾಂತ್ರಿಕ ಸಮಸ್ಯೆ ಎದುರಾಗಿತ್ತು. ಇದರಿಂದ ಬೇಸತ್ತು ಖರೀದಿ ಕೇಂದ್ರಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಬಂದಿದ್ದ ರೈತರು ಪ್ರತಿಭಟನೆ ನಡೆಸಿದ್ದರು. ಅವರಿಗೆಲ್ಲಾ ಟೋಕನ್ ಕೊಟ್ಟು ಕಳುಹಿಸಲಾಗಿತ್ತು.

ರಾಗಿ ಹೆಚ್ಚಾಗಿ ಬೆಳೆಯುವ ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ರಾಮನಗರ, ಮೈಸೂರು, ಹಾಸನ, ಚಾಮರಾಜನಗರ ಮತ್ತು ಚಿತ್ರದುರ್ಗ ಜಿಲ್ಲೆಗಳ ರೈತರು ಮಂಗಳವಾರ ಬೆಳಿಗ್ಗೆಯಿಂದಲೇ ಖರೀದಿ ಕೇಂದ್ರದ ಮುಂದೆ ಸರದಿ ಸಾಲಿನಲ್ಲಿ ನಿಂತಿದ್ದರು. ಸರ್ವರ್ ಸಮಸ್ಯೆ ಸರಿಪಡಿಸಿ ಮಧ್ಯಾಹ್ನದ ನಂತರ ಹೆಸರು ನೋಂದಣಿ ಪ್ರಕ್ರಿಯೆ ಆರಂಭಿಸಲಾಯಿತು.

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ಹಾಗೂ ಕೆಲವೆಡೆ ಇನ್ನೂ ಸರ್ವರ್ ಸಮಸ್ಯೆ ಪರಿಹಾರವಾಗಲಿಲ್ಲ. ಸುತ್ತಮುತ್ತಲ ಗ್ರಾಮಗಳಿಂದ ಬಂದು ಬೆಳಿಗ್ಗೆಯಿಂದ ಕಾದು ಕುಳಿತು ಬೇಸತ್ತ ರೈತರು ಅಧಿಕಾರಿಗಳ ವಿರುದ್ಧ ಹರಿಹಾಯ್ದರು. ರಾಮನಗರ ಜಿಲ್ಲೆಯ ಮಾಗಡಿಯಲ್ಲೂ ನೋಂದಣಿ ಆರಂಭವಾಗಲಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ಸರ್ವರ್ ಸಮಸ್ಯೆ ಸರಿಯಾದ ಬಗ್ಗೆ ರೈತರಿಗೆ ಮಾಹಿತಿ ಸಿಗದ ಕಾರಣ ಮಂಗಳವಾರ ಪ್ರಕ್ರಿಯೆ ನಡೆದಿಲ್ಲ. ಬುಧವಾರ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನೋಂದಣಿ ಆರಂಭವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

1.14 ಲಕ್ಷ ಮೆಟ್ರಿಕ್ ಟನ್ ಖರೀದಿ: ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಪ್ರತಿ ಕ್ವಿಂಟಲ್‌ಗೆ ₹3,377 ದರದಲ್ಲಿ ರಾಗಿ ಖರೀದಿಸಲಾಗುತ್ತದೆ. ಉತ್ಪಾದನೆಗೆ ಅನುಗುಣವಾಗಿ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಲ್ ಖರೀದಿಸಲಾಗುತ್ತದೆ. ರಾಜ್ಯದಲ್ಲಿ 1.14 ಲಕ್ಷ ಮೆಟ್ರಿಕ್ ಟನ್ ಖರೀದಿ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಇಷ್ಟು ಪ್ರಮಾಣದ ಖರೀದಿಗೆ ನೋಂದಣಿಯಾದ ಕೂಡಲೇ ಪ್ರಕ್ರಿಯೆ ಸ್ಥಗಿತಗೊಳ್ಳಲಿದೆ.

ವಿಜಯಶಂಕರ್‌ಗೆ 'ಅಕಲಂಕ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಎಸ್‌.ಆರ್‌. ವಿಜಯಶಂಕರ್

ಉಡುಪಿ: ದಿ. ಡಾ. ಉಪ್ಪಂಗಳ ರಾಮ ಭಟ್ಟ ಅವರ ಹೆಸರಿನ ದತ್ತಿ ನಿಧಿಯಿಂದ ಕೊಡಮಾಡುವ 'ಅಕಲಂಕ' ಪ್ರಶಸ್ತಿಗೆ ವಿಮರ್ಶಕರು ಹಾಗೂ ಅಂಕಣಕಾರರಾದ ಎಸ್‌.ಆರ್‌. ವಿಜಯಶಂಕರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಹಾಗೂ ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ತಿಳಿಸಿದ್ದಾರೆ.

ಪ್ರಶಸ್ತಿಯು ಫಲಕ ಹಾಗೂ ₹10,000 ಗೌರವಧನ ಒಳಗೊಂಡಿದ್ದು ಮೇ ತಿಂಗಳಲ್ಲಿ ಉಡುಪಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಕಸಾಪ ಗೌರವ ಕಾರ್ಯದರ್ಶಿ ಸುಬ್ರಹ್ಮಣ್ಯ ಶೆಟ್ಟಿ ಹಾಗೂ ನರೇಂದ್ರ ಕುಮಾರ್ ಕೋಟ ತಿಳಿಸಿದ್ದಾರೆ.

ಎಸ್‌.ಆರ್‌. ವಿಜಯಶಂಕರ್ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಂತರ ಕೇಂದ್ರದ ಗೌರವ ನಿರ್ದೇಶಕರಾಗಿ ಸದ್ಯ ಸೇವೆ ಸಲ್ಲಿಸುತ್ತಿದ್ದಾರೆ.

ಮುಸ್ಲಿಂ ಸ್ನೇಹಿತರಿಗೆ 'ಇಫ್ತಾರ್ ಕೂಟ'

ಬೈರಿಕಟ್ಟೆಯಲ್ಲಿ ಹಿಂದೂ ನವ ವಿವಾಹಿತನಿಂದ ಆಯೋಜನೆ

ಪ್ರಜಾವಾಣಿ ವಾರ್ತೆ



ಬೈರಿಕಟ್ಟೆಯಲ್ಲಿ ನವ ವಿವಾಹಿತ ಚಂದ್ರಶೇಖರ್ ಅವರು ಮುಸ್ಲಿಂ ಸಮುದಾಯದವರಿಗೆ ಇಫ್ತಾರ್ ಕೂಟ ಏರ್ಪಡಿಸಿದ್ದರು

ವಿಟ್ಲ (ದಕ್ಷಿಣ ಕನ್ನಡ): ರಂಜಾನ್ ಉಪವಾಸವಿದ್ದ ಕಾರಣ, ಮುಸ್ಲಿಂ ಸ್ನೇಹಿತರು ಮದುವೆಯಲ್ಲಿ ಊಟ ಮಾಡಲಿಲ್ಲ ಎಂಬ ಕಾರಣಕ್ಕೆ ಇಲ್ಲಿಯ ಮದುಮಗನೊಬ್ಬ ಊರಿನ ಮಸೀದಿಯಲ್ಲಿ ಇಫ್ತಾರ್ ಕೂಟ ಏರ್ಪಡಿಸಿದ್ದು, ಇದಕ್ಕೆ ಪ್ರಶಂಸೆ ವ್ಯಕ್ತವಾಗಿದೆ.

ಹಿಜಾಬ್, ಹಲಾಲ್- ಜಟ್ಕಾ ಕಟ್, ವ್ಯಾಪಾರ ಬಹಿಷ್ಕಾರದಂತಹ ಬೆಳವಣಿಗೆಗಳ ಮಧ್ಯದಲ್ಲೇ ಸಮೀಪದ ಬೈರಿಕಟ್ಟೆ ಎಂಬ ಪುಟ್ಟ ಊರು ಇದಕ್ಕೆ ಸಾಕ್ಷಿಯಾಗಿದೆ.

'ಗೆಳೆಯರ ಬಳಗ- ಬೈರಿಕಟ್ಟೆ'ಯ ಸದಸ್ಯ ಚಂದ್ರಶೇಖರ ಜೆಡ್ಡು ಅವರ ವಿವಾಹ ಏ.24 ರಂದು ನಡೆಯಿತು. ರಂಜಾನ್ ತಿಂಗಳಲ್ಲಿ ಉಪವಾಸ ಆಚರಿಸುವುದರಿಂದ ಮುಸ್ಲಿಂ ಸಮುದಾಯದವರು ಮದುವೆ ಕಾರ್ಯಕ್ರಮದಲ್ಲಿ ಊಟ ಮಾಡಿಲ್ಲ ಎಂಬ ಕಾರಣದಿಂದ, ಚಂದ್ರಶೇಖರ್ ಅವರು ಬೈರಿಕಟ್ಟೆ ಜುಮ್ಮಾ ಮಸೀದಿಯಲ್ಲಿ ಇಫ್ತಾರ್ ಕೂಟ ಏರ್ಪಡಿಸಿದ್ದರು.

'ಬೈರಿಕಟ್ಟೆ ಸೌಹಾರ್ದಕ್ಕೆ ಹೆಸರಾಗಿದೆ. ಶಾಮಿಯಾನ ಹಾಕಲು, ವಿದ್ಯುತ್ ದುರಸ್ತಿ ಕಾರ್ಯಕ್ಕೆ ಹಿಂದೂ, ಮುಸ್ಲಿಂ ಎನ್ನದೆ ಎಲ್ಲ ಧರ್ಮೀಯರ ಮನೆಗಳಿಗೆ ಹೋಗುತ್ತೇನೆ. ನಮ್ಮ ಗೆಳೆಯರ ಬಳಗದಲ್ಲಿ ಎಲ್ಲ ಸಮುದಾಯದವರೂ ಇದ್ದಾರೆ. ಊರಿನಲ್ಲಿ ಅನ್ಯೋನ್ಯ ಬಾಂಧವ್ಯ ಇದೆ. ಮುಸ್ಲಿಂ ಸ್ನೇಹಿತರಿಗಾಗಿ ಇಫ್ತಾರ್ ಕೂಟ ಹಮ್ಮಿಕೊಂಡಿದ್ದೆ' ಎಂದು ನವ ವಿವಾಹಿತ ಚಂದ್ರಶೇಖರ ಪ್ರತಿಕ್ರಿಯಿಸಿದರು.

ಹುಣಸೇಘಟ್ಟ: ಪರಿಶಿಷ್ಟರಿಗೆ ಸಿಗದ ಪೂಜೆಯ ಅವಕಾಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಠಾಣೆ ಮೆಟ್ಟಿಲೇರಿದ ವಿವಾದ
- ಗ್ರಾಮದಲ್ಲಿ ಪೊಲೀಸ್ ನಿಯೋಜನೆ

ತಿಪಟೂರು (ತುಮಕೂರು): ತಾಲ್ಲೂಕಿನ ನೊಣವಿನಕೆರೆ ಹೋಬಳಿ ಹುಣಸೇಘಟ್ಟ ಗ್ರಾಮದಲ್ಲಿ ಪರಿಶಿಷ್ಟ ಜಾತಿಯವರು ವಾಸಿಸುವ ಕಾಲೊನಿಗೆ ದೇವರ ಉತ್ಸವ ಮೂರ್ತಿ ಕರೆದುಕೊಂಡು ಹೋಗುವ ವಿಚಾರದಲ್ಲಿ ಪರಿಶಿಷ್ಟ ಜಾತಿಯವರು ಹಾಗೂ ಒಕ್ಕಲಿಗರು, ಲಿಂಗಾಯತರ ನಡುವೆ ಜಗಳ ನಡೆದಿದ್ದು, ವಿವಾದ ಈಗ ಪೊಲೀಸ್ ಠಾಣೆ ಮೆಟ್ಟಿಲೇರಿದೆ.

'ಗ್ರಾಮದಲ್ಲಿ ಅಸ್ಪೃಶ್ಯತೆ ಆಚರಣೆ ಮಾಡಲಾಗಿದೆ. ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ' ಎಂದು ಆರೋಪಿಸಿ ತಹಶೀಲ್ದಾರ್ ಹಾಗೂ ನೊಣವಿನಕೆರೆ ಪೊಲೀಸರಿಗೆ ಪರಿಶಿಷ್ಟ ಜಾತಿಯ ಮುಖಂಡರು ದೂರು ಸಲ್ಲಿಸಿದ್ದಾರೆ. ಈ ವಿಚಾರ ತಿಳಿಯುತ್ತಿದ್ದಂತೆ ಗ್ರಾಮದಲ್ಲಿ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಎರಡು ಸಮುದಾಯದವರ ಜತೆಗೆ ಮಾತುಕತೆ ನಡೆಸಿ ವಿವಾದ ಬಗೆಹರಿಸಲು, ತಹಶೀಲ್ದಾರ್, ಪೊಲೀಸರು ಮುಂದಾಗಿದ್ದಾರೆ.

ಹಿನ್ನೆಲೆ: ಗ್ರಾಮದಲ್ಲಿ ಭಾನುವಾರ ಜಾತ್ರಾ ಮಹೋತ್ಸವ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಆಂಜನೇಯ ಸ್ವಾಮಿಯ ಉತ್ಸವ ಮೂರ್ತಿಯನ್ನು ತಮ್ಮ ಕಾಲೊನಿಗೆ ತೆಗೆದುಕೊಂಡು ಬರುವಂತೆ ಪರಿಶಿಷ್ಟ ಜಾತಿಯವರು ಮನವಿ ಮಾಡಿದ್ದಾರೆ. ಇದಕ್ಕೆ ಗ್ರಾಮದ ಮುಖಂಡರು ಒಪ್ಪದೆ ಇದ್ದಾಗ ಮಾತಿನ ಚಕಮಕಿ, ವಾದ ವಿವಾದ ನಡೆದಿದೆ.

'ದೇಗುಲ ಮುಜರಾಯಿ ಇಲಾಖೆಗೆ ಸೇರಿದ್ದು, ದೇವರನ್ನು ನಮ್ಮ ಕಾಲೊನಿಗೂ ಕರೆದುಕೊಂಡು ಬರಲು ಯಾವುದೇ ಸಮಸ್ಯೆ ಇಲ್ಲ. ನಮ್ಮ ಭಾಗಕ್ಕೂ ಬಂದರೆ ನಾವೂ ಪೂಜೆ ಸಲ್ಲಿಸುತ್ತೇವೆ. ಆದರೆ ಗ್ರಾಮದ ಮುಖಂಡರು ಇದಕ್ಕೆ ಅವಕಾಶ ನೀಡುತ್ತಿಲ್ಲ. ಉತ್ಸವದ ಸಂದರ್ಭದಲ್ಲಿ ದೇವರನ್ನು ನಮ್ಮ ಕಾಲೊನಿಗೆ ಕರೆದುಕೊಂಡು ಬರದೆ ಅವಮಾನ ಮಾಡಿದ್ದಾರೆ. ಅಸ್ಪೃಶ್ಯತೆ ಆಚರಿಸುತ್ತಿದ್ದಾರೆ' ಎಂದು ಪರಿಶಿಷ್ಟ ಜಾತಿಯ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಜಾತ್ರೆ ಹಾಗೂ ಉತ್ಸವದ ಸಮಯದಲ್ಲಿ ಹಿಂದಿನಿಂದಲೂ ಉತ್ಸವ ಮೂರ್ತಿಯನ್ನು ಕಾಲೊನಿಗೆ ಕರೆದುಕೊಂಡು ಹೋಗುವ ಪದ್ಧತಿ ಇರಲಿಲ್ಲ. ಹಿಂದಿನಂತೆ ನಡೆದುಕೊಂಡು ಬಂದಿದ್ದೇವೆ. ಈಗಲೂ ಅದೇ ರೀತಿ ಉತ್ಸವ ನೆರವೇರಿಸಿದ್ದೇವೆ. ಅನಗತ್ಯವಾಗಿ ಕೆಲವರು ಗ್ರಾಮದಲ್ಲಿ ಅಶಾಂತಿ ನೆಲೆಸುವಂತೆ ಮಾಡುತ್ತಿದ್ದಾರೆ' ಎಂದು ಗ್ರಾಮಸ್ಥರು ಹೇಳುತ್ತಾರೆ.

ಹಿಂದಿನಂತೆ ಜಾತ್ರೆ: 'ಜಾತ್ರೆ ನಡೆಯುವ ಮುನ್ನ ಯಾವುದೇ ರೀತಿಯ ಮನವಿ, ದೂರು ಬಂದಿಲ್ಲ. ಹಿಂದಿನ ಸಂಪ್ರದಾಯದಂತೆ ಜಾತ್ರೆ ನಡೆಸಿದ್ದಾರೆ. ಇದೀಗ ಮನವಿ ಬಂದಿದ್ದು, ಶಾಂತಿ ಸಭೆ ನಡೆಸಿ ಸಮಸ್ಯೆ ಬಗೆಹರಿಸಲಾಗುವುದು. ಮಾತಿನ ಚಕಮಕಿ ಬಿಟ್ಟರೆ ಅಹಿತಕರ ಘಟನೆ ನಡೆದಿಲ್ಲ' ಎಂದು ತಹಶೀಲ್ದಾರ್ ಆರ್.ಜೆ.ಚಂದ್ರಶೇಖರ್ ತಿಳಿಸಿದರು.

ಕೃಷಿ ಉತ್ಪನ್ನಗಳಿಗೆ ಏರದ ಬೆಲೆ: ಬಿಜೆಪಿ ಶಾಸಕ ಟೀಕೆ



ರವೀಂದ್ರನಾಥ್

ದಾವಣಗೆರೆ: 'ಡಬಲ್ ಎಂಜಿನ್ ಸರ್ಕಾರ ಇದೆ ಎಂದು ನಾವು ಹೇಳಿಕೊಳ್ಳುತ್ತಿದ್ದರೂ ರೈತರ ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಸಿಗುತ್ತಿಲ್ಲ. ಎಂಜಿನ್‌ಗಳು ಪರಸ್ಪರ ವಿರುದ್ಧ ದಿಕ್ಕಿಗೆ ಎಳೆದರೆ ಪ್ರಯೋಜನವಿಲ್ಲ. ಕೇಂದ್ರ ಹಾಗೂ ರಾಜ್ಯದ ನಾಯಕರು ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಕೊಡಿಸಲು ಮುಂದಾಗಬೇಕು' ಎಂದು ಶಾಸಕ ಎಸ್‌.ಎ. ರವೀಂದ್ರನಾಥ್ ಹೇಳಿದರು.


ಬಿಜೆಪಿ ಜಿಲ್ಲಾ ರೈತ ಮೋರ್ಚಾ ಮಂಗಳವಾರ ಹಮ್ಮಿಕೊಂಡಿದ್ದ 'ಆತ್ಮ ನಿರ್ಭರ ಕೃಷಿ ಮತ್ತು ಸಿರಿಧಾನ್ಯಗಳ ವರ್ಷ ಆಚರಣೆ ಮೇಳ'ದಲ್ಲಿ ಮಾತನಾಡಿದರು.

'ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗುತ್ತಿದೆ. ಕೃಷಿ ಪರಿಕರಗಳ ಬೆಲೆ 10 ಪಟ್ಟು ಹೆಚ್ಚಾಗಿದೆ. ಭತ್ತ, ರಾಗಿ, ಗೋಧಿಗೆ 2012ರಲ್ಲಿ ರೈತರ ಉತ್ಪನ್ನಗಳಿಗೆ ಸಿಗುತ್ತಿದ್ದಷ್ಟೇ ಬೆಲೆ ಈಗಲೂ ಸಿಗುತ್ತಿದೆ. ಕೇಂದ್ರ ಸರ್ಕಾರ ಬೆಂಬಲ ಬೆಲೆ ಘೋಷಿಸಿದೆ ಎಂದು ನಾವು ಹೇಳುತ್ತಿದ್ದರೂ ವಾಸ್ತವದಲ್ಲಿ ಅಷ್ಟು ಬೆಲೆ ಸಿಗುತ್ತಿಲ್ಲ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಅನುದಾನ ಕಡಿತ: ಕುಸಿದ ಕಳ್ಳಬೇಟೆ ನಿಗ್ರಹ ಶಿಬಿರದ ಶಕ್ತಿ

ಹುಲಿ ರಕ್ಷಕರಿಗೆ ಇಲ್ಲ ಭದ್ರತೆ

• ಗಣಪತಿ ಹೆಗಡೆ



ಜೋಯಿಡಾ ತಾಲ್ಲೂಕಿನ ನುಜ್ಜಿಯಲ್ಲಿರುವ ಕಳ್ಳಬೇಟೆ ನಿಗ್ರಹದಳದ ಶಿಬಿರ

ಶಿರಸಿ: ಕಾಳಿ ಹುಲಿ ಸಂರಕ್ಷಿತಾರಣ್ಯದಲ್ಲಿ (ಕೆ.ಟಿ.ಆರ್) ಕಳ್ಳಬೇಟೆ ನಿಗ್ರಹಿಸಲು ಸ್ಥಾಪಿಸಲಾಗಿದ್ದ ಶಿಬಿರಗಳಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿ ಸಂಖ್ಯೆ ಅನುದಾನ ಕಡಿತದಿಂದ ಈಚೆಗೆ ಅರ್ಧದಷ್ಟು ಇಳಿಕೆಯಾಗಿದೆ. ಸೀಮಿತ ಸಂಖ್ಯೆಯಲ್ಲಿರುವ ಸಿಬ್ಬಂದಿ ಒತ್ತಡ, ಭಯದಲ್ಲಿ ಕೆಲಸ ಮಾಡುವ ಸ್ಥಿತಿ ಇದೆ.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಹುಲಿ ಸಂರಕ್ಷಿತಾರಣ್ಯಗಳ ನಿರ್ವಹಣೆಗೆ ಒದಗಿಸುತ್ತಿರುವ ಅನುದಾನ ಅರ್ಧಕ್ಕಿಂತ ಕಡಿಮೆಯಾಗಿದೆ. ಸರಾಸರಿ ₹8 ಕೋಟಿಯಷ್ಟಿದ್ದ ಅನುದಾನ ₹3.5 ಕೋಟಿಗೆ ಇಳಿಕೆಯಾಗಿದೆ ಎನ್ನುತ್ತಿವೆ ಅರಣ್ಯ ಇಲಾಖೆ ಮೂಲಗಳು.

ದಾಂಡೇಲಿ ವನ್ಯಜೀವಿ ಅಭಯಾರಣ್ಯದ 475 ಚದರ ಕಿ.ಮೀ ಹಾಗೂ ಅಣಶಿ ರಾಷ್ಟ್ರೀಯ ಉದ್ಯಾನದ 339.86 ಚದರ ಕಿ.ಮೀ ವ್ಯಾಪ್ತಿಯನ್ನು ಒಳಗೊಂಡ ಕಾಳಿ ಹುಲಿ ಸಂರಕ್ಷಿತಾರಣ್ಯ ವ್ಯಾಪ್ತಿಯಲ್ಲಿ ಪ್ರಾಣಿ ಬೇಟೆ ತಡೆಗೆ ಅಲ್ಲಲ್ಲಿ ಕಳ್ಳಬೇಟೆ ನಿಗ್ರಹ ಶಿಬಿರ (ಆ್ಯಂಟಿ ಪೋಚಿಂಗ್ ಕ್ಯಾಂಪ್) ಸ್ಥಾಪಿಸಲಾಗಿದೆ.

ಪ್ರತಿ ಶಿಬಿರದಲ್ಲಿ ಈ ಮೊದಲು ನಾಲ್ಕು ಮಂದಿ ಸಿಬ್ಬಂದಿ ಇದ್ದರು. ಆರು ತಿಂಗಳಿನಿಂದ ಈ ಸಂಖ್ಯೆ 2ಕ್ಕೆ ಇಳಿಕೆಯಾಗಿದೆ. ಸಂರಕ್ಷಿತಾರಣ್ಯ ವ್ಯಾಪ್ತಿಯಲ್ಲಿರುವ 44 ಶಿಬಿರಗಳ ಪೈಕಿ ಹಲವು ಸ್ಥಗಿತಗೊಂಡಿವೆ.


'ಜನವಸತಿ ಸ್ಥಳದಿಂದ ಬಹುದೂರದಲ್ಲಿರುವ ಶಿಬಿರಗಳಲ್ಲಿ ಇಬ್ಬರೇ ವಾಸವಿರುತ್ತೇವೆ. ರಕ್ಷಣೆಗೆ ಆಯುಧ ಇಲ್ಲ. ಹೆಚ್ಚಿನ ಜನರಿಲ್ಲದ ಕಾರಣ ವನ್ಯಪ್ರಾಣಿಗಳು ದಾಳಿ ನಡೆಸುವ ಆತಂಕ ಕಾಡುತ್ತಿದೆ' ಎಂದು ಶಿಬಿರದ ಸಿಬ್ಬಂದಿಯೊಬ್ಬರು ಸಮಸ್ಯೆ ವಿವರಿಸಿದರು.

'ನಾಲ್ಕು ಮಂದಿ ಕೆಲಸವನ್ನು ಇಬ್ಬರೇ ಮಾಡಬೇಕಿರುವುದರಿಂದ ರಜೆಯೂ ಸಿಗುತ್ತಿಲ್ಲ. ಕೆಲಸದ ಒತ್ತಡವೂ ಹೆಚ್ಚಿದೆ. ಯಾವುದೇ ಸೂಚನೆ ನೀಡದೆ ಈ ಹಿಂದೆ ಹಲವರನ್ನು ಕೆಲಸದಿಂದ ತೆಗೆಯಲಾಗಿದೆ. ಇದರಿಂದ ನಮಗೂ ಉದ್ಯೋಗದ ಅಭದ್ರತೆ ಕಾಡುತ್ತಿದೆ' ಎಂದು ದೂರಿದರು.


> **ಸೀಮಿತ ಅನುದಾನದಲ್ಲಿ ನಿರ್ವಹಣೆ ಮಾಡಬೇಕಾದ ಸ್ಥಿತಿ ಉಂಟಾದ್ದರಿಂದ ಕೆಲವೇ ಸಿಬ್ಬಂದಿಯಿಂದ ಶಿಬಿರ ನಡೆಸಬೇಕಾಗಿದೆ**
> **ಕೆ.ವಿ.ವಸಂತ ರೆಡ್ಡಿ**
> ಸಿಸಿಎಫ್, ಕೆನರಾ ಅರಣ್ಯ ವೃತ್ತ

'ಕಳ್ಳಬೇಟೆ ನಿಗ್ರಹ ಶಿಬಿರಗಳಿಗೆ ಅಗತ್ಯ ಸೌಲಭ್ಯ ಒದಗಿಸುವ ಜತೆಗೆ ರಕ್ಷಣೆ ಸಲುವಾಗಿ ಅರಣ್ಯ ರಕ್ಷಕರೊಬ್ಬರನ್ನು ನಿಯೋಜಿಸಿದ್ದೇವೆ' ಎಂದು ಕುಂಬಾರವಾಡಾ ಎಸಿಎಫ್ ಶಿವಾನಂದ ತೋಡ್ಕರ್ ಹೇಳಿದರು.

'ಶಿಬಿರಗಳಲ್ಲಿ ಸಿಬ್ಬಂದಿ ಸಂಖ್ಯೆ ಇಳಿಕೆಯಾಗಿರುವ ಪರಿಣಾಮ ಬೇಟೆ ಹೆಚ್ಚಳವಾಗುವ ಆತಂಕವಿದೆ. ಇದರಿಂದ ಹುಲಿಗಳಿಗೆ ಆಹಾರ ಕೊರತೆಯೂ ಉಂಟಾಗಬಹುದು' ಎಂದು ವನ್ಯಜೀವಿ ಕಾರ್ಯಕರ್ತ ಪಿ.ಗಿರೀಶ್ ಆತಂಕ ವ್ಯಕ್ತಪಡಿಸಿದರು.



ಅಂಧರ ಪಾಲಿಗೆ ಇದೊಂದು ಬುದ್ಧಿವಂತ ಊರುಗೋಲು; ಎದುರಿಗಿರುವ ವಸ್ತುಗಳನ್ನು ಗುರುತಿಸಬಲ್ಲುದು, ವ್ಯಕ್ತಿಗಳಿದ್ದರೆ ಹೇಳಬಲ್ಲುದು. ಅಕ್ಷರಗಳನ್ನು ಓದಿ, ಬಣ್ಣಗಳನ್ನು ಪತ್ತೆ ಹಚ್ಚಬಲ್ಲುದು...



ಕಣ್ಣಿಲ್ಲದವರಿಗೆ ಕಣ್ಣು ಈ ಕನ್ನಡಕ

ಶರತ್ ಭಟ್ ಸೇರಾಜೆ

ತಂತ್ರಜ್ಞಾನವು ಏನನ್ನೆಲ್ಲಾ ಮಾಡಬಲ್ಲದು ಎಂಬುದರ ಪಟ್ಟಿ ದೊಡ್ಡದು; 'ಕಣ್ಣಿಲ್ಲದವರಿಗೆ ಕಣ್ಣಾಗಬಲ್ಲದು' ಎಂಬ ನಮೂದು ಕೂಡ ಆ ಪಟ್ಟಿಗೆ ಸೇರಿದೆ ಎಂದರೆ ಹಲವರಿಗೆ ಆಶ್ಚರ್ಯವಾದೀತು.

ಕಾರ್ತಿಕ್ ಮಹಾದೇವನ್ ಎಂಬುವರು ಐದು ವರ್ಷಗಳ ಹುಟ್ಟುಹಾಕಿದ 'Envision Glasses' ಎಂಬ ಸಂಸ್ಥೆಯ ಕನ್ನಡಕ ಅದನ್ನೇ ಮಾಡಹೊರಟಿದೆ. 'Qualcomm'ನವರ 'ಕ್ವಾಡ್ ಕೋರ್ ಪ್ರೊಸೆಸರ್'ನ ಮೇಲೆ ಒಂದು ತಂತ್ರಾಂಶವನ್ನು ಅಳವಡಿಸಿ ಇದನ್ನು ರಚಿಸಲಾಗಿದೆ. ಗೂಗಲ್ಲಿನವರು ಹಿಂದೆ ಮಾರುಕಟ್ಟೆಗೆ ತಂದಿದ್ದ ಗೂಗಲ್ ಗ್ಲಾಸುಗಳ ಮುಂದುವರೆದ ಅಧ್ಯಾಯ ಅಥವಾ ಪರಿಷ್ಕೃತ ಆವೃತ್ತಿ ಇದು ಅನ್ನಬಹುದೇನೋ. ಸ್ಮಾರ್ಟ್ ವಾಚುಗಳು ಅಷ್ಟೊಂದು ಜನಪ್ರಿಯ ಆಗಬಹುದಾದರೆ, ಸ್ಮಾರ್ಟ್ ಗ್ಲಾಸುಗಳು ಯಾಕೆ ಬರಬಾರದು ಎಂಬ ಯೋಚನೆಯೇ ಅದರ ಹಿಂದೆ ಇದ್ದದ್ದು, ಇದ್ದಬದ್ದ ತಂತ್ರಜ್ಞಾನಗಳನ್ನೆಲ್ಲ ಬಳಸಿ, ಕನ್ನಡಕಗಳೂ ಒಂದು ಮಟ್ಟಕ್ಕೆ ಮೊಬೈಲು, ಕಂಪ್ಯೂಟರುಗಳಂತೆ ಕೆಲಸ ಮಾಡುವಂತೆ ಅದರಲ್ಲಿ ಮಾಡಲಾಗಿತ್ತು. ಆದರೇಕೋ ಗೂಗಲ್ಲಿನ ಗ್ಲಾಸು ಅಷ್ಟು ಜನಪ್ರಿಯವಾಗಿರಲಿಲ್ಲ. ಅದೇ ವಿಚಾರಗಳನ್ನು ಇನ್ನೊಂದು ದಿಕ್ಕಿನಲ್ಲಿ ತಿರುಗಿಸಿದರೆ ಹೇಗೆ ಎಂಬ ಯೋಜನೆಯ ಫಲವೇ ಈ 'ಎನ್ವಿಷನ್ ಗ್ಲಾಸ್'ಗಳ ಹುಟ್ಟಿಗೆ ಕಾರಣವಾಯಿತು.

ಅಂಧರ ಪಾಲಿಗೆ ಇದು ಒಂದು ಬುದ್ಧಿವಂತ ಊರುಗೋಲಾಗುವ ತಯಾರಿಯಲ್ಲಿದೆ. ಇದು ಒಂದು ಪಟ್ಟಿಯ ಹಾಗಿರುತ್ತದೆ. ಮಾಮೂಲಿ ಕನ್ನಡಕವನ್ನು ಧರಿಸುವ ಹಾಗೆ ಚೌಕಟ್ಟನ್ನು ಕಿವಿಗಳ ಮೇಲೆ ಇಡಬೇಕು, ಹಣೆಯ ಮೂಲಕ ಒಂದು ಪಟ್ಟಿ ಹಾದುಹೋಗುತ್ತದೆ, ಕಣ್ಣಿನ ಮೇಲಿನ ಭಾಗದಲ್ಲಿ ಬರುವ ಪುಟ್ಟ ಛಾಯಾಚಿತ್ರಗ್ರಾಹಿಯು ಎದುರುಗಡೆ ಇರುವ ವಸ್ತುಗಳ ಮೇಲೆ ಸ್ಥೂಲವಾಗಿ ಕಣ್ಣೋಡಿಸಿ, ಕೃತಕ ಬುದ್ಧಿಮತ್ತೆಯನ್ನು ಬಳಸಿ, ಸಮಕ್ಷದಲ್ಲಿ ಏನೇನಿದೆ ಅಂತ ತಿಳಿದುಕೊಳ್ಳುತ್ತದೆ. ಗಳಿಸಿದ ಜ್ಞಾನವನ್ನು ಧ್ವನಿಯಾಗಿ ಪರಿವರ್ತಿಸಿ, ಕನ್ನಡಕ ಹಾಕಿದವರ ಕಿವಿಗೆ ಬೀಳುವ ಹಾಗೆ ಉಸುರಿ ತನ್ನ ಕೆಲಸವನ್ನು ಈ ಚಷ್ಮಾ ಮಾಡುತ್ತದೆ.

ಅದು ಎದುರಿಗಿರುವ ವಸ್ತುಗಳನ್ನು ಗುರುತಿಸಬಲ್ಲದು, ವ್ಯಕ್ತಿಗಳಿದ್ದರೆ ಹೇಳಬಲ್ಲದು. ಅಕ್ಷರಗಳನ್ನು ಓದಿ, ಬಣ್ಣಗಳನ್ನು ಪತ್ತೆ ಹಚ್ಚಿ, ಮುಂದಿರುವುದು ಕಾರೋ ಬೈಕೋ ಉದ್ಯಾನವನವೋ ಬೆಂಚೋ ಎಂದು ಗ್ರಹಿಸಬಿಡುತ್ತದೆ. ಹೀಗೆ ನೋಡಿ, ಓದಿ, ಕಣ್ಣಾಡಿಸಿ, ವಿಶ್ಲೇಷಿಸಿ, ರೂಪ-ಆಕಾರಗಳ ಬಗ್ಗೆ ತಿಳಿದದ್ದನ್ನು ಸ್ಪೀಕರಿನ ಮೂಲಕ ಕಿವಿಮಾತಾಗಿ ಅರುಹಿ ಅಂಧರಿಗೆ 'ತಮ್ಮ ಮುಂದೇನಿದೆ' ಎಂಬ ಅರಿವನ್ನು ಮೂಡಿಸಬಲ್ಲದು. ಗೆಳೆಯರದ್ದೋ ಕುಟುಂಬದವರದ್ದೋ ಫೋಟೊಗಳನ್ನು ಅದರಲ್ಲಿ ಸ್ಟೋರ್ ಮಾಡಿ ಇಟ್ಟಿದ್ದರೆ, ಅವರು ಎದುರಿಗೆ ಬಂದಾಗ, 'ಮನೆಯವರು ಬಂದರೆಂದೋ, ಇಂಥವರು ಬಂದರೆಂದೋ' ಗೊತ್ತುಮಾಡಿ ಕೂಗಿ ಹೇಳುವ ಕೆಲಸವನ್ನೂ ಅದು ಮಾಡುತ್ತದೆ. ಹೀಗಾಗಿ, ಒಂದು ವಸ್ತುವನ್ನು ಎಲ್ಲಿಟ್ಟಿದ್ದೇವೆಂದು ಮರೆತವರೂ ಈ ಕನ್ನಡಕವನ್ನು ಹಿಡಿದುಕೊಂಡು ಮನೆಯಿಡೀ ತಿರುಗಿದರೆ, ಅದು ಎಲ್ಲಿ ಯಾವ ವಸ್ತು ಇದೆ ಅಂತ ಕೂಗಿ ಹೇಳುವಾಗ, ಕಾಣದಂತೆ ಮಾಯವಾದ ವಸ್ತು ಕೈಗೆಟಕುವಂತೆ ಮಾಡಲು ಇದನ್ನು ಬಳಸುವ ಸಾಧ್ಯತೆಯೂ ಇಲ್ಲದಿಲ್ಲ!

ಅಷ್ಟೇ ಅಲ್ಲ, ಮನೆಯವರೋ ಗೆಳೆಯರೋ ಕರೆ ಮಾಡಿದರೆ, ಕನ್ನಡಕದಲ್ಲಿ ಕಾಣುತ್ತಿರುವುದನ್ನು ಅವರಿಗೂ ತೋರಿಸಿ ಅವರಿಂದ ಮಾರ್ಗದರ್ಶನ ಪಡೆಯಲಿಕ್ಕೆ ಅನುವು ಮಾಡಿಕೊಡುವ ವ್ಯವಸ್ಥೆಯೂ ಇದರಲ್ಲಿದೆ. ಮೊಬೈಲು ಜಗತ್ತಿನ ಯಾವ ಮೂಲೆ-ಮುಡುಕುಗಳಿಗೂ ಮುಟ್ಟುತ್ತದೆ ಎಂದು ನಮಗೆ ಗೊತ್ತೇ ಇದೆ. ಅಂತಿದ್ದ ಮೇಲೆ ಯಾವ ಓಣಿಯ ಯಾವ ಗಲ್ಲಿಯಲ್ಲಿ ಬೇಕಾದರೂ ಕುಳಿತು ದೂರದಲ್ಲಿರುವ ಸುಲೋಚನಧಾರಿಗೆ ದಾರಿ ತೋರಿಸುವ ಸಲಹಾಕಾರರಾಗಿ ಆತ್ಮೀಯರು ಕಾರ್ಯ ನಿರ್ವಹಿಸಬಹುದು.

ಕಾರ್ತಿಕ್ ಮಹಾದೇವನ್ ಅವರು ನೆದರ್ಲೆಂಡ್ಸ್‌ನಲ್ಲಿ ಓದುವಾಗ ಮಾಡುತ್ತಿದ್ದ ಪ್ರಾಜೆಕ್ಟ್ ಒಂದರಲ್ಲಿ ಅಂಧರ ಸಮಸ್ಯೆಗಳ ಅಧ್ಯಯನ ಮಾಡುತ್ತಿದ್ದರಂತೆ. ಆಗ ಅಂಧರಿಗೆ ಸಹಾಯವಾಗುವಂಥ ಆ್ಯಪ್ ಒಂದನ್ನು ತಯಾರಿಸುವ ವಿಚಾರವು ತಲೆಗೆ ಬಂದದ್ದೇ ಈ ಯೋಜನೆಗೆ ಬೀಜಾವಾಪವಾಯಿತು. ಆ್ಯಪ್ ಆದರೆ ಅದನ್ನು ಕೈಯಲ್ಲಿ ಮೊಬೈಲು ಹಿಡಿದು ಬಳಸಬೇಕು, ಕನ್ನಡಕವಾದರೆ ಕೈಯಲ್ಲಿ ಹಿಡಿಯಬೇಕಾದ್ದಿಲ್ಲ, ಕೈಯಲ್ಲಿ ಊರುಗೋಲನ್ನೋ ಇನ್ನೇನನ್ನೋ ಹಿಡಿಯಬಹುದು ಎಂಬ ಆಲೋಚನೆ ಬಂತಂತೆ. ಟಚ್ ಫೋನ್‌ಗಳಲ್ಲಿ ಮಾಡುವಂತೆ ಕನ್ನಡಕವನ್ನು ಮುಟ್ಟಿ, ಸ್ವೈಪ್ ಮಾಡಿ ಅದಕ್ಕೆ ಆದೇಶಗಳನ್ನು ಕೊಡುವ ವಿಧಾನವನ್ನೂ ರೂಪಿಸಲಾಯಿತು. ಏನು ಬೇಕು, ಏನು ಮಾಡಬೇಕು - ಎಂಬ ಆದೇಶ ಸಿಕ್ಕಿದಮೇಲೆ ಉಳಿದ ಕೆಲಸವನ್ನು ತಂತ್ರಾಂಶಗಳು ಮತ್ತು ಕೃತಕ ಬುದ್ಧಿಮತ್ತೆಗಳು ಸೇರಿ ಲೀಲಾಜಾಲವಾಗಿ ನಿರ್ವಹಿಸಿಬಿಡುವಂತೆ ಮಾಡಲಾಯಿತು.

ಸೂಚನಾ ಫಲಕಗಳನ್ನು ಓದುವುದರಿಂದ ಅಂಗಡಿಗಳ ಫಲಕಗಳನ್ನು ಓದುವವರೆಗೆ, ದಾರಿಗಡ್ಡ ಬಂದ ಪ್ರಾಣಿಯಿಂದ ಹಿಡಿದು ಮರದವರೆಗೆ ಏನನ್ನು ಬೇಕಾದರೂ ಗುರುತಿಸಲು ಕೃತಕ ಬುದ್ಧಿಮತ್ತೆಯ ಕ್ಷೇತ್ರದಲ್ಲಿ ಈಗಾಗಲೇ ಆಗಿರುವ ಸಂಶೋಧನೆಗಳನ್ನು ಬಳಸಿದರೆ ಸಾಕು. ಒಂದು ಸ್ಮಾರ್ಟ್ ಗ್ಲಾಸು ಏನನ್ನೆಲ್ಲಾ ಮಾಡಲು ಸಾಧ್ಯ, ಅದರಲ್ಲಿ ಏನೆಲ್ಲ ಲಕ್ಷಣ, ವೈಶಿಷ್ಟ್ಯಗಳು ಇರಲು ಸಾಧ್ಯ ಅನ್ನುವುದನ್ನು ಗೂಗಲ್ಲಿನವರು ಈಗಾಗಲೇ ತೋರಿಸಿ ಆಗಿತ್ತು. ಹೀಗೆ, ಇರುವುದನ್ನೇ ಮುರಿದು ಜೋಡಿಸಿ ಮತ್ತೆ ಹೊಸ ರೀತಿಯಲ್ಲಿ ಕಟ್ಟುವ ಕ್ರಿಯೆಯನ್ನು ಆ್ಯಪಲ್‌ನಿಂದ ಹಿಡಿದು ಮೈಕ್ರೋಸಾಫ್ಟ್‌ನವರೆಗೆ ತಂತ್ರಜ್ಞಾನದ ಕಂಪನಿಗಳು ಮೊದಲಿನಿಂದಲೇ ಮಾಡಿಕೊಂಡು ಬಂದಿದ್ದವು. ಅದೇ ವಿಧಾನವನ್ನು ಇಲ್ಲಿಯೂ ಅನುಸರಿಸಲಾಯಿತು ಅಷ್ಟೇ. Kindness is the language which the deaf can hear and the blind can see (ಕರುಣೆ ಎಂಬುದು ಅಂಧರು ನೋಡಬಹುದಾದ ಮತ್ತು ಕಿವುಡರು ಕೇಳಬಹುದಾದ ಭಾಷೆ) ಎಂಬ ಮಾತನ್ನು ಸ್ವಲ್ಪ ಬದಲಾಯಿಸಿ, 'ಕರುಣೆ ಮಾಡುವ ಕೆಲಸವನ್ನು ತಂತ್ರಜ್ಞಾನವೂ ಮಾಡೀತು' ಎನ್ನಬಹುದೇನೋ!

ಸದ್ಯಕ್ಕೆ ದುಬಾರಿಯೇ ಆಗಿರುವ, ವಿದೇಶಗಳಲ್ಲಿ ಮಾತ್ರ ಹೊರಬಂದಿರುವ ಈ ಗ್ಲಾಸುಗಳು ಇಲ್ಲಿಯೂ ಬಂದು ಅಂಧರ ಕಣ್ಣಾಗಿ, ಬೆಳಕಾಗಿ ಕೆಲಸ ಮಾಡಲಿ ಎಂದು ಹಾರೈಸೋಣ.



ಪ್ರಾತಿನಿಧಿಕ ಚಿತ್ರ

ಮುದುಡುವ ಮಿದುಳು



ಕೊಳ್ಳೇಗಾಲ ಶರ್ಮ

'ಓಹೋ. ನಿಮ್ಮದು ದಪ್ಪತಲೆ. ಬಹಳ ಬುದ್ಧಿವಂತರಪ್ಪ' - ಎನ್ನುವ ಮಾತು ಕೇಳಿ ಖುಷಿ ಪಟ್ಟಿರಬಹುದಲ್ಲವೇ?

ನಿಜ. ತಲೆಯ ಗಾತ್ರ ಹಾಗೂ ಬುದ್ಧಿವಂತಿಕೆಯ ಬಗ್ಗೆ ಹೀಗೊಂದು ಮಿಥ್ಯೆ ಇದೆ. ಇದು ಸ್ವಲ್ಪ ಮಟ್ಟಿಗೆ ಸುಳ್ಳೇನಲ್ಲ ಬಿಡಿ. ಮಾನವನ ವಿಕಾಸದ ಹಾದಿಯಲ್ಲಿ ಅಂಗಗಳಲ್ಲಿ ಕಾಣುವ ಪ್ರಮುಖ ಬದಲಾವಣೆ ಎಂದರೆ ಹೆಚ್ಚಿದ ಮಿದುಳಿನ ಅರ್ಥಾತ್ ತಲೆಬುರುಡೆಯ ಗಾತ್ರ. ಸುಮಾರು ಮೂರು ಲಕ್ಷ ವರ್ಷಗಳ ಹಿಂದೆ ಇಂದು ನಾವು ಮನುಷ್ಯ ಎನ್ನುವ ಪ್ರಾಣಿ ಮೊಟ್ಟಮೊದಲಿಗೆ ಭೂಮಿಯ ಮೇಲೆ ಕಾಣಿಸಿತು. ಅದಕ್ಕೂ ಮೊದಲು ಇದೇ ರೀತಿಯಲ್ಲಿ ಎರಡು ಕಾಲಿನ ಮೇಲೆ ನಡೆಯುವ ಜೀವಿಗಳಿದ್ದರೂ, ಅವುಗಳು ಮನುಷ್ಯರಿಗಿಂತಲೂ ವಾನರರಿಗೆ ಹತ್ತಿರವಾದಂತಿದ್ದುವು. ಈ ಕಾರಣದಿಂದಾಗಿ ಮನುಷ್ಯನೆಂಬ ನಾಗರಿಕ, ಮಾತನಾಡುವ, ಬುದ್ಧಿವಂತ ಪ್ರಾಣಿ ವಿಕಾಸವಾಗಿದ್ದೇ ಈ ಮಿದುಳಿನಿಂದ ಎನ್ನುವುದುಂಟು. ಹೀಗಾಗಿ ತಲೆಯ ಗಾತ್ರಕ್ಕೂ ಬುದ್ಧಿವಂತಿಕೆಗೂ ನೇರ ತಳುಕು ಹಾಕುವವರಿದ್ದಾರೆ. ಆದರೆ ಇದೇ ಮಿದುಳು ವಯಸ್ಸಾಗುತ್ತಿದ್ದಂತೆ ಪುಟ್ಟದಾಗುತ್ತದೆ ಎಂದರೆ ನಂಬುವಿರಾ? ವಿಚಿತ್ರವಾದರೂ ಇದು ಸತ್ಯ. ಇತ್ತೀಚೆಗೆ 'ನೇಚರ್' ಪತ್ರಿಕೆಯಲ್ಲಿ ಪ್ರಕಟವಾಗಿರುವ ಸಂಶೋಧನೆಯೊಂದರ ಪ್ರಕಾರ ಮನುಷ್ಯರು ಮಗುವಿನ ಹಂತದಿಂದ ಬೆಳೆಯುತ್ತಿದ್ದಂತೆ ಸ್ವಲ್ಪ ಕಾಲ ಮಿದುಳಿನ ಗಾತ್ರವೂ ಹೆಚ್ಚಾಗುತ್ತದೆ. ಆದರೆ ಅನಂತರ ವಯಸ್ಸಾಗುತ್ತಿದ್ದ ಹಾಗೆ ಅದು ಕುಗ್ಗಲಾರಂಭಿಸುತ್ತದೆಯಂತೆ. ಅಮೆರಿಕೆಯ ಫಿಲಡೆಲ್ಫಿಯ ವಿಶ್ವವಿದ್ಯಾನಿಲಯದ ನರವಿಜ್ಞಾನಿ ಜಾಕೋಬ್ ಸೈಡ್ಲೀಸ್ ಮತ್ತು ಸಂಗಡಿಗರ ಸಾಧನೆ ಇದು.

ಮಿದುಳಿಗೆ ಪ್ರಾಣಿಗಳ ಬದುಕಿನಲ್ಲಿ ಬಲು ಪ್ರಮುಖ ಅಂಗ. ಇದನ್ನು ದೇಹದ ನಿಯಂತ್ರಕ ಎಂದೂ ಕರೆಯುತ್ತಾರೆ. ದೇಹದಲ್ಲಿರುವ ಪ್ರತಿಯೊಂದು ಅಂಗದ ಚಟುವಟಿಕೆಯನ್ನೂ ಇದು ನಿಯಂತ್ರಿಸುತ್ತದೆ. ಅಷ್ಟೇ ಅಲ್ಲ. ಹೊರಗಿನ ಪ್ರಪಂಚದಲ್ಲಿನ ಆಗುಹೋಗುಗಳನ್ನು ಅರ್ಥೈಸುವ ಅಂಗವೂ ಇದೇ. ಪಂಚೇಂದ್ರಿಯಗಳು ಗ್ರಹಿಸಿ ಕಳಿಸುವ ಸಂದೇಶಗಳನ್ನು ಒಟ್ಟಾಗಿಸಿ, ಏನಾಗುತ್ತಿದೆ ಎಂದು ನಮಗೆ ಅರಿವಾಗುವಂತೆ ಮಾಡುವುದೂ ಇದೇ ಮಿದುಳು.

> ವಯಸ್ಸಾದಂತೆ ಮನಸ್ಸು ಮುದುಡುವಂತೆಯೇ, ಮಿದುಳು ಕೂಡ ಗಾತ್ರದಲ್ಲಿ ಕಿರಿದಾಗುತ್ತದೆಯಂತೆ


ಮನುಷ್ಯನಲ್ಲಿಯಂತೂ ಇದಕ್ಕೆ ಇನ್ನೂ ಹೆಚ್ಚಿನ ಪ್ರಾಮುಖ್ಯ. ತಲೆಯ ಗಾತ್ರಕ್ಕೆ ಹೋಲಿಸಿದರೆ ಬೇರಾವ ಪ್ರಾಣಿಯಲ್ಲೂ ಇಲ್ಲದಷ್ಟು ದೊಡ್ಡ ಮಿದುಳು ಮಾನವನಲ್ಲಿದೆ. ಅದರಲ್ಲಿಯೂ ಮುಂಮಿದುಳು ಎನ್ನುವ ಭಾಗ ಉಳಿದೆಲ್ಲವುಗಳಿಗಿಂತಲೂ ದೊಡ್ಡದು. ಇದುವೇ ಮಾತು, ಭಾಷೆ ಹಾಗೂ ಬುದ್ಧಿವಂತಿಕೆಯ ಕೇಂದ್ರ ಎನ್ನುವುದು ನರವಿಜ್ಞಾನಿಗಳ ಅಂಬೋಣ. ಅಂತಹ ಮಿದುಳು ವಯಸ್ಸಾಗುತ್ತಿದ್ದಂತೆ ಕುಗ್ಗುತ್ತದೆಯೇ?

ಹೌದಂತೆ. ಸೈಡ್ಲೀಸ್ ಮತ್ತು ಸಂಗಡಿಗರು ಇದಕ್ಕಾಗಿ ಒಟ್ಟು ಒಂದು ಲಕ್ಷದ ಇಪ್ಪತ್ತು ಸಾವಿರ ಮಿದುಳುಗಳ ಚಿತ್ರಗಳನ್ನು ಪರಿಶೀಲಿಸಿದ್ದಾರೆ. ಹಾಗಂತ ಇವರೇನೂ ಅಷ್ಟೊಂದು ಜನರನ್ನು ಒಟ್ಟು ಮಾಡಿ ಅವರ ಮಿದುಳನ್ನು ಬೆದಕಲಿಲ್ಲ. ಬದಲಿಗೆ ಪ್ರಪಂಚದಾದ್ಯಂತ ವಿವಿಧ ಕಡೆಗಳಲ್ಲಿ ವೈದ್ಯರುಗಳು ತೆಗೆದಿದ್ದ ಮಿದುಳಿನ ಸ್ಕ್ಯಾನ್‌ಗಳನ್ನು ಹೆಕ್ಕಿ ನೋಡಿದ್ದಾರೆ. ವಿವಿಧ ವಯಸ್ಸಿನ, ವಿವಿಧ ಪ್ರದೇಶದ ಜನರ ಮಿದುಳುಗಳ ಗಾತ್ರಗಳನ್ನು ಈ ಚಿತ್ರಗಳ ಮೂಲಕ ಲೆಕ್ಕ ಹಾಕಿದ್ದಾರೆ. ಜೊತೆಗೆ ಮಿದುಳಿನಲ್ಲಿರುವ ಹೊರಭಾಗ, ಮುಂಮಿದುಳು, ಬುಡ ಮೊದಲಾದವುಗಳ ಗಾತ್ರದಲ್ಲಿ ಏನಾದರೂ ವ್ಯತ್ಯಾಸ ಆಗುತ್ತದೆಯೋ ಎಂದು ಗಮನಿಸಿದ್ದಾರೆ. ಇವೆಲ್ಲದರ ಫಲವಾಗಿ ಭ್ರೂಣಾವಸ್ಥೆಯಿಂದ ವೃದ್ಧಾವಸ್ಥೆಯವರೆಗೆ ವಿವಿಧ ವಯಸ್ಸಿನಲ್ಲಿ ಮಿದುಳಿನ ಗಾತ್ರ ಎಷ್ಟಿರುತ್ತದೆ ಎಂದು ಲೆಕ್ಕ ಪಟ್ಟಿ ಮಾಡುವುದು ಸಾಧ್ಯವಾಯಿತು. ಮಿದುಳಿನ ಬೆಳವಣಿಗೆಯ ಗತಿ ಹೇಗಿರುತ್ತದೆ ಎನ್ನುವುದು ತಿಳಿಯಿತು.

ಮನುಷ್ಯರಂತೆಯೇ ಮನುಷ್ಯರ ಮಿದುಳಿನದ್ದೂ ಆರಂಭ ಶೂರತ್ವ. ಆರಂಭದಲ್ಲಿ ಅಂದರೆ ಭ್ರೂಣಾವಸ್ಥೆಯಲ್ಲಿ, ಮಿದುಳಿನ ಎಲ್ಲ ಭಾಗಗಳೂ ತ್ವರಿತಗತಿಯಿಂದ ರೂಪುಗೊಳ್ಳುತ್ತವೆ. ಗಾತ್ರದಲ್ಲಿ ಬೆಳೆಯುತ್ತವೆ. ಹೀಗೆ ಬೆಳೆಯುವ ಭಾಗಗಳಲ್ಲಿ ಗ್ರೇ ಅಥವಾ ಬೂದುಬಣ್ಣದ ನರಭಾಗಗಳು ತುಸು ಮುಂದು. ಗ್ರೇ ಮ್ಯಾಟರ್ ಎನ್ನುವ ಈ ಅಂಶ ನಮ್ಮ ಬುದ್ಧಿವಂತಿಕೆಯ ಸಂಕೇತ ಎನ್ನಲಾಗುತ್ತದೆ. ಮಗು ಹುಟ್ಟುವ ಹೊತ್ತಿಗೆಲ್ಲ ಈ ಭಾಗ ಗರಿಷ್ಠ ಗಾತ್ರವನ್ನು ತಲುಪಿಯಾಗಿರುತ್ತದೆ. ತದನಂತರ ಒಳಭಾಗದಲ್ಲಿ ವೈಟ್ ಮ್ಯಾಟರ್ ಅಥವಾ ಬಿಳಿಮಿದುಳು ಬೆಳೆಯುತ್ತದೆ. ವಾಸ್ತವವಾಗಿ ಬಿಳಿಮಿದುಳು ನರಕೋಶಗಳ ಉದ್ದನೆಯ ಬಾಲದಂತಹ ತಂತುಗಳಿರುವ ಭಾಗ. ವ್ಯಕ್ತಿ ಮಧ್ಯವಯಸ್ಕನಾಗುವ ವೇಳೆಗೆ, ಅಂದರೆ ಸುಮಾರು ಮೂವತ್ತು ವರ್ಷ ವಯಸ್ಸಿನ ಹೊತ್ತಿಗೆ, ಇದು ಅತಿ ದೊಡ್ಡದಾಗುತ್ತದೆ. ಇವೆರಡನ್ನೂ ಆವರಿಸಿಕೊಂಡು ಇರುವ ಖಾಲಿಜಾಗೆಯ ಗಾತ್ರ ಆರಂಭದಲ್ಲಿ ಬಹಳ ಕಡಿಮೆ. ಇದು ನಿಧಾನವಾಗಿ ಹೆಚ್ಚಾಗುತ್ತದೆ. ವೃದ್ಧಾಪ್ಯದಲ್ಲಿ ಉಳಿದ ಭಾಗಗಳ ಗಾತ್ರ ಕಡಿಮೆಯಾಗಿ, ಈ ಭಾಗದ ಗಾತ್ರ ಹೆಚ್ಚಾಗುತ್ತದೆ ಎಂದು ಇವರ ಪಟ್ಟಿ ಸೂಚಿಸುತ್ತದೆ.

ಇದುವರೆಗೂ ಮಿದುಳು ಒಮ್ಮೆ ಬೆಳೆದ ನಂತರ ಗಾತ್ರ ಬದಲಾಗುವುದಿಲ್ಲ ಎನ್ನುವ ನಂಬಿಕೆ ಇತ್ತು. ಆದರೆ ಸೈಡ್ಲೀಸ್ ತಂಡದ ಸಂಶೋಧನೆ ಈ ನಂಬಿಕೆ ಸರಿಯಲ್ಲ ಎನ್ನುತ್ತಿದೆ. ಜೊತೆಗೆ ಮಿದುಳಿನ ಚಿತ್ರಗಳನ್ನು ತೆಗೆದು, ಅದರಲ್ಲಿರುವ ವಿವಿಧ ಭಾಗಗಳ ಗಾತ್ರಗಳ ಆಧಾರದ ಮೇಲೆ ಮಿದುಳಿನ ಆರೋಗ್ಯವನ್ನು ಇಲ್ಲವೆ ಚಟುವಟಿಕೆಯನ್ನು ಗುರುತಿಸುವುದುಂಟು. ಅಂತಹ ಅಧ್ಯಯನಗಳು ಮಿದುಳಿನಲ್ಲಿಯೂ ಬದಲಾವಣೆಗಳು ಅಗುತ್ತಿರಬಹುದು ಎನ್ನುವುದನ್ನು ಗಮನದಲ್ಲಿಡಬೇಕು ಎನ್ನುತ್ತಾರೆ ಸೈಡ್ಲೀಸ್. ಈ ಅಧ್ಯಯನಕ್ಕಾಗಿ ಒಟ್ಟು 1,01,457 ಮಂದಿಯ ಮಿದುಳಿನ ಗಾತ್ರಗಳನ್ನು ಲೆಕ್ಕ ಹಾಕಲಾಯಿತು. ಇದಕ್ಕಾಗಿ ಸುಮಾರು 1,23,894 ಚಿತ್ರಗಳನ್ನು ಸಂಗ್ರಹಿಸಲಾಯಿತು.

ಈಗಾಗಲೇ ಲಭ್ಯವಿರುವ ಮಾಹಿತಿಯನ್ನು ವಿಶ್ಲೇಷಿಸುವುದರಿಂದ ಎಷ್ಟೋ ಹೊಸ ಸಂಗತಿಗಳು ಅರಿವಾಗುತ್ತವೆ ಎನ್ನುವುದಕ್ಕೆ ಸೈಡ್ಲೀಸ್ ಅವರ ಈ ಸಂಶೋಧನೆ ಪುರಾವೆಯಾಗಿದೆ. ಇದಕ್ಕಾಗಿ ಇವರು ಸ್ವತಃ ಯಾರ ಮಿದುಳನ್ನೂ ಚಿತ್ರಿಸಲಾಗಲಿ, ರೋಗಿಯನ್ನು ಪರೀಕ್ಷಿಸುವುದಕ್ಕಾಗಲಿ ಹೋಗಲಿಲ್ಲ. ಬದಲಿಗೆ ಪ್ರಪಂಚದ ವಿವಿಧೆಡೆಗಳಲ್ಲಿ ಇದ್ದ ನರವೈದ್ಯರನ್ನು ಸಂಪರ್ಕಿಸಿ ಅವರ ಬಳಿ ಇದ್ದ ಚಿತ್ರಗಳನ್ನು ಪಡೆದುಕೊಂಡಿದ್ದಾರೆ. ಇಂತಹ ಸಂಶೋಧನೆಯ ಶ್ರೇಯಸ್ಸು ಯಾರಿಗೆ ದಕ್ಕಬೇಕು - ಎನ್ನುವ ಪ್ರಶ್ನೆಯನ್ನೂ ಇವರ ಸಂಶೋಧನೆ ಮುಂದಿಟ್ಟಿದೆ. ಇದನ್ನು ಕಲ್ಪಿಸಿದ ಸೈಗ್ಲೀಸರಿಗೆ ಸೇರಬೇಕೋ ಅಥವಾ ಈ ಚಿತ್ರಗಳನ್ನು ಒದಗಿಸಿದ ವೈದ್ಯರಿಗೂ ಸಲ್ಲಬೇಕೋ?



ಸ್ಯಾಮ್‌ಸಂಗ್ ಗ್ಯಾಲಕ್ಸಿ ಎ73

ಅವಿನಾಶ್ ಬಿ.

ಸ್ಯಾಮ್‌ಸಂಗ್ ಗ್ಯಾಲಕ್ಸಿ ಎ ಸರಣಿಯಲ್ಲೇ ಅತ್ಯಾಧುನಿಕ ಮತ್ತು ಫ್ಲ್ಯಾಗ್‌ಶಿಪ್ ಮಾದರಿಯ ವೈಶಿಷ್ಟ್ಯಗಳುಳ್ಳ ಗ್ಯಾಲಕ್ಸಿ ಎ73 ಫೋನ್, ಏ.11ರಂದು ಭಾರತದಲ್ಲಿ ಬಿಡುಗಡೆಯಾಗಿದೆ. ಪ್ರಜಾವಾಣಿಗೆ ರಿವ್ಯೂಗೆ ದೊರೆತ 8GB/256GB ಮಾದರಿಯ ಸ್ಯಾಮ್‌ಸಂಗ್ ಗ್ಯಾಲಕ್ಸಿ ಎ73 ಫೋನ್ ಹೇಗಿದೆ? ಒಂದು ವಾರದ ಬಳಕೆಯಲ್ಲಿ ಕಂಡುಬಂದ ಅಂಶಗಳು ಇಲ್ಲಿವೆ.

ವಿನ್ಯಾಸ, ಡಿಸ್‌ಪ್ಲೇ

ಇದು ಸ್ಯಾಮ್‌ಸಂಗ್ ಎ ಸರಣಿಯ ಅತ್ಯಂತ ಸ್ಲಿಮ್ (7.6 ಮಿಮೀ ದಪ್ಪ) ಫೋನ್. ಪ್ಲಾಸ್ಟಿಕ್ (ಪಾಲಿಕಾರ್ಬೊನೇಟ್) ಯೂನಿಬಾಡಿ ಇದ್ದು, ಹಿಂಭಾಗದಲ್ಲಿ ಮ್ಯಾಟ್ ಫಿನಿಶ್ ಇರುವುದರಿಂದ ಬೆರಳಚ್ಚು ಮೂಡುವುದಿಲ್ಲ. ಬಿಲ್ಡ್ ಚೆನ್ನಾಗಿದ್ದು ಬಳಕೆಗೆ ಅನುಕೂಲಕರವಾಗಿದೆ ಮತ್ತು ಲೋಹದ ಚೌಕಟ್ಟಿನೊಂದಿಗೆ ಪ್ರೀಮಿಯಂ ನೋಟವನ್ನು ಹೊಂದಿದೆ. 6.7 ಇಂಚಿನ ಸ್ಕ್ರೀನ್, ಐಪಿ67 ಪ್ರಮಾಣೀಕೃತ ಜಲನಿರೋಧಕತೆ, ದೂಳು ನಿರೋಧಕತೆ ಇದೆ. 120Hz ರಿಫ್ರೆಶ್ ರೇಟ್‌ನಿಂದಾಗಿ ಸ್ಕ್ರೀನ್‌ನಲ್ಲಿ ಸುಲಲಿತ ವೀಕ್ಷಣೆ ಸಾಧ್ಯವಾಗುತ್ತದೆ. FHD+ ಸೂಪರ್ AMOLED+ ಡಿಸ್‌ಪ್ಲೇ ಇದಕ್ಕೆ ಪೂರಕವಾಗಿದ್ದು, ಪ್ರೀಮಿಯಂ ವೈಶಿಷ್ಟ್ಯವು ಎದ್ದುಕಾಣುತ್ತದೆ. ಹೊರಾಂಗಣದಲ್ಲಿ, ವಿಶೇಷವಾಗಿ ಬಿಸಿಲು ಹೆಚ್ಚಿರುವಾಗಲೂ ಸ್ಕ್ರೀನ್ ವೀಕ್ಷಣೆಯಲ್ಲಿ ಸಮಸ್ಯೆಯಾಗುವುದಿಲ್ಲ. ಬಾಕ್ಸ್‌ನಲ್ಲಿ ಚಾರ್ಜರ್ ಇಲ್ಲ. ಯುಎಸ್‌ಬಿ ಟೈಪ್-ಸಿ ಚಾರ್ಜಿಂಗ್ ಕೇಬಲ್ ಮಾತ್ರ ನೀಡಲಾಗಿದೆ.

ಕ್ಯಾಮೆರಾ

108 ಮೆಗಾಪಿಕ್ಸೆಲ್ ಸಾಮರ್ಥ್ಯದ ಪ್ರಧಾನ ಕ್ಯಾಮೆರಾ ಸೆನ್ಸರ್ ಗ್ಯಾಲಕ್ಸಿ ಎ73 5ಜಿ ಫೋನ್‌ನ ವಿಶೇಷತೆ. ಗ್ಯಾಲಕ್ಸಿ ಎ ಸರಣಿಯಲ್ಲೇ ಮೊದಲ ಬಾರಿಗೆ ಈ ಭರ್ಜರಿ ಲೆನ್ಸ್ ಅಳವಡಿಸಲಾಗಿದ್ದು, ಬೇಕಾದಾಗ ಮಾತ್ರ ಬಳಸುವ ಆಯ್ಕೆಯಿದೆ. ಜೊತೆಗೆ 8MP ಅಲ್ಟ್ರಾವೈಡ್, 5MP ಮ್ಯಾಕ್ರೋ ಹಾಗೂ 5MP ಡೆಪ್ತ್ ಸೆನ್ಸರ್‌ಗಳಿವೆ. ಚಿತ್ರ ಮತ್ತು ವಿಡಿಯೊಗೆ ಇಮೇಜ್ ಸ್ಟೆಬಿಲೈಸೇಶನ್ ತಂತ್ರಜ್ಞಾನಗಳನ್ನು (OIS ಹಾಗೂ VDIS) ಬಳಸಿರುವುದರಿಂದ ಸ್ಪಷ್ಟ ಚಿತ್ರ/ವಿಡಿಯೊ ಮೂಡಿಬರುತ್ತದೆ. 3X ಆಪ್ಟಿಕಲ್ ಝೂಮ್ ಹಾಗೂ 10X ಡಿಜಿಟಲ್ ಝೂಮ್ ಇದೆ. ನೈಟ್ ಮೋಡ್ ಮೂಲಕ ಮಂದ ಬೆಳಕಿನಲ್ಲಿ ಅತ್ಯುತ್ತಮ ಚಿತ್ರಗಳು ಸೆರೆಯಾಗುತ್ತವೆ.

32MP ಸೆಲ್ಫೀ ಕ್ಯಾಮೆರಾ ಇದ್ದು, ಇದರಲ್ಲಿ ಅಂತರಜಾಲ ಸಂಪರ್ಕವಿರುವಾಗ ಬಳಸಬಹುದಾದ ಫನ್ ಮೋಡ್, ಈಗಿನ ವಿಡಿಯೊ ಸ್ಟೇಟಸ್ ಜಮಾನಕ್ಕೆ ಅತ್ಯುಪಯುಕ್ತವಾಗಿದೆ.

ವಿಶೇಷತೆಗಳು

ಗ್ಯಾಲಕ್ಸಿ ಎ73 ಫೋನ್‌ನಲ್ಲಿ 'ಆಬ್ಜೆಕ್ಟ್ ಇರೇಸರ್' ಎಂಬ, ಫೋಟೊದಿಂದ ನಿರ್ದಿಷ್ಟ ವಸ್ತುವನ್ನು ಅಳಿಸಬಹುದಾದ ವೈಶಿಷ್ಟ್ಯವು ಗಮನ ಸೆಳೆಯುತ್ತದೆ. ಈಗಿನ ಸೆಲ್ಫೀ ಅಥವಾ ಸ್ಟೇಟಸ್ ಜಮಾನದಲ್ಲಿ, ಫೋಟೊ ತೆಗೆದು, ನಿರ್ದಿಷ್ಟ ವಸ್ತುಗಳನ್ನು ಅಳಿಸಿಹಾಕಿ (ಹಿನ್ನೆಲೆಗೆ ಯಾವುದೇ ತೊಡಕಾಗದಂತೆ) ಸೋಷಿಯಲ್ ಮೀಡಿಯಾದಲ್ಲಿ ಶೇರ್ ಮಾಡುವವರಿಗೆ ಅನುಕೂಲಕರ ಇದು. ಇನ್ನೊಂದು ವೈಶಿಷ್ಟ್ಯವೆಂದರೆ, 'ಫೋಟೊ ರೀಮಾಸ್ಟರ್'. ಹಳೆಯ ಫೋಟೊಗಳನ್ನು ಈ ಫೋನ್‌ನ ಗ್ಯಾಲರಿಯಲ್ಲಿ ಸೇರಿಸಿಕೊಂಡರೆ (ಫೈಲ್ ಟ್ರಾನ್ಸ್‌ಫರ್ ಮೂಲಕ), ಆ ಭಾವಚಿತ್ರಗಳಿಗೆ ವಿನೂತನ ಸ್ಪರ್ಶ ನೀಡಿ, ಹೊಸತನ ತುಂಬಬಹುದು. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ) ತಂತ್ರಜ್ಞಾನದ ಸಮರ್ಪಕ ಬಳಕೆಯಾಗಿದೆ ಇಲ್ಲಿ.

ಫೋನ್ ಎತ್ತಿದರೆ ಸ್ಕ್ರೀನ್ ಆನ್ ಆಗುವುದು, ಸ್ಕ್ರೀನ್ ಆನ್/ಆಫ್ ಮಾಡಲು ಎರಡು ಬಾರಿ ಟ್ಯಾಪ್ ಮಾಡುವುದು, ಸ್ಕ್ರೀನ್ ಮೇಲೆಯೇ ನೋಡುತ್ತಿರುವಾಗ ಸ್ವಯಂಚಾಲಿತವಾಗಿ ಲಾಕ್ ಆಗದೇ ಇರುವುದು, ಸ್ಕ್ರೀನ್ ಮೇಲೆ ಕೈಯಿಟ್ಟರೆ ರಿಂಗಿಂಗ್ ಸದ್ದು ಮೌನವಾಗುವುದು, ಅಂಗೈ ತೋರಿಸಿದರೆ ಸೆಲ್ಫೀ ಫೋಟೊ ಸೆರೆಹಿಡಿಯುವುದು... ಈ ಅತ್ಯಾಧುನಿಕ ವೈಶಿಷ್ಟ್ಯಗಳು ಬಳಕೆಯ ಅನುಕೂಲತೆಯನ್ನು ಹೆಚ್ಚಿಸಿವೆ.



ಕಾರ್ಯಾಚರಣೆ

ಆಂಡ್ರಾಯ್ಡ್ ಫೋನ್‌ಗಳು ಬಿಸಿಯಾಗುತ್ತವೆ ಎಂಬ ಅಪವಾದಕ್ಕೆ ಸ್ಪಂದಿಸಿರುವ ಸ್ಯಾಮ್‌ಸಂಗ್, ಸಾಧನವನ್ನು ಸ್ವಯಂಚಾಲಿತವಾಗಿ ತಣ್ಣಗಾಗಿಸುವ ಹೀಟ್ ಪೈಪ್ ಮತ್ತು ವೇಪರ್ ಚೇಂಬರ್ ವ್ಯವಸ್ಥೆಯನ್ನು ಗ್ಯಾಲಕ್ಸಿ ಎ73 ರಲ್ಲಿ ಅಳವಡಿಸಿದೆ. ಸ್ನ್ಯಾಪ್‌ಡ್ರಾಗನ್ 778G 5G ಪ್ರೊಸೆಸರ್, RAM ಪ್ಲಸ್ ವೈಶಿಷ್ಟ್ಯದ ಮೂಲಕ, ಅನಿವಾರ್ಯ ಸಂದರ್ಭದಲ್ಲಿ RAM ಅನ್ನು 2, 4 ಅಥವಾ 6 ಜಿಬಿಯಷ್ಟು ಹೆಚ್ಚಿಸುವ ವೈಶಿಷ್ಟ್ಯವು ಭಾರಿ ತೂಕದ ಗೇಮಿಂಗ್ ಅಥವಾ ವಿಡಿಯೊ ವೀಕ್ಷಣೆಯ ಸಂದರ್ಭದಲ್ಲಿ ಅನುಭವಕ್ಕೆ ಬರುತ್ತದೆ. ಆಂಡ್ರಾಯ್ಡ್ 12ರ ಆಧಾರಿತ ಒನ್ ಯುಐ 4.1 ಮೂಲಕ ಕೆಲಸ ಮಾಡುವ ಈ ಸಾಧನಕ್ಕೆ ನಾಲ್ಕು ವರ್ಷಗಳ ಕಾಲ ಕಾರ್ಯಾಚರಣಾ ತಂತ್ರಾಂಶ, ಐದು ವರ್ಷ ಸುರಕ್ಷಾ ತಂತ್ರಾಂಶದ ಅಪ್‌ಡೇಟ್ ನೀಡಲಾಗುವುದು ಎಂದು ಸ್ಯಾಮ್‌ಸಂಗ್ ಘೋಷಿಸಿದೆ. ಆದರೆ, ಕ್ಷಿಪ್ರವಾಗಿ ತಂತ್ರಜ್ಞಾನ ಬದಲಾಗುತ್ತಿರುವ ಈ ಕಾಲದಲ್ಲಿ ನಾಲ್ಕು ವರ್ಷದ ಬಳಿಕ ಲಭ್ಯವಾಗುವ ಹೊಸ ತಂತ್ರಾಂಶಕ್ಕೆ ಈಗಿರುವ ಯಂತ್ರಾಂಶವು ಬೆಂಬಲಿಸೀತೆ ಎಂಬುದು ಕಾದು ನೋಡಬೇಕಾದ ವಿಚಾರ.

5000mAh ಬ್ಯಾಟರಿ ಸಾಮಾನ್ಯ ಬಳಕೆಯಲ್ಲಿ ದಿನಪೂರ್ತಿ ಕೆಲಸ ಮಾಡಿಯೂ ಶೇ 30-40ರಷ್ಟು ಉಳಿದಿರುತ್ತದೆ. 25W ವೇಗದ ಚಾರ್ಜಿಂಗ್ ಬೆಂಬಲವಿದ್ದು, ಅದರಲ್ಲಿ ಒಂದು ಗಂಟೆಯ ಆಸುಪಾಸಿನಲ್ಲಿ ಪೂರ್ತಿ ಚಾರ್ಜ್ ಆಗುತ್ತದೆ. 8GB/128GB ಮೂಲ ಮಾದರಿಯ ಬೆಲೆ ₹41,999 ಹಾಗೂ 8GB/256GB ಮಾದರಿಗೆ ₹44999.

ಒಟ್ಟಾರೆ ಹೇಗಿದೆ?

ಅತ್ಯುತ್ತಮ ಸ್ಕ್ರೀನ್, ಭರ್ಜರಿ ಕ್ಯಾಮೆರಾ, ಸುಲಲಿತ ಕಾರ್ಯಾಚರಣೆ, ಅತ್ಯುತ್ತಮ ಬ್ಯಾಟರಿ ಚಾರ್ಜ್ - ಇವುಗಳು ಸ್ಯಾಮ್‌ಸಂಗ್ ಗ್ಯಾಲಕ್ಸಿ ಎ73 ಸ್ಮಾರ್ಟ್ ಫೋನ್ ಅನ್ನು ಅರ್ಥಮಾಡಿಕೊಳ್ಳುವ ಅಂಶಗಳು. ಮತ್ತು ಇದು ಗುಣಮಟ್ಟದಲ್ಲಿ ಎಸ್ ಸರಣಿ (ಉದಾ. ಗ್ಯಾಲಕ್ಸಿ ಎಸ್22) ಫೋನ್‌ಗೆ ಉತ್ತಮ ಪ್ರತಿಸ್ಪರ್ಧಿಯೂ ಹೌದು.

ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ಪ್ರಕರಣ: ವಾರದೊಳಗೆ ಶರಣಾಗಲು ಆರೋಪಿಗಳಿಗೆ ಕೋರ್ಟ್ ಸೂಚನೆ

ಮತ್ತೊಬ್ಬ ಅಭ್ಯರ್ಥಿ ಬಂಧನ; ದಿವ್ಯಾ ಬಂಧನಕ್ಕೆ ವಾರಂಟ್

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಆರೋಪಿಯನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ. ಏತನ್ಮಧ್ಯೆ, ಈ ಪ್ರಕರಣದ ಆರೋಪಿಯಾಗಿರುವ ಇಲ್ಲಿಯ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯಸ್ಥೆ ದಿವ್ಯಾ ಹಾಗರಗಿ ಸೇರಿದಂತೆ ಆರು ಜನರ ವಿರುದ್ಧ ಇಲ್ಲಿಯ ನ್ಯಾಯಾಲಯ ಬಂಧನ ವಾರಂಟ್ ಹೊರಡಿಸಿದೆ.

ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕು ನರಿಬೋಳ ಗ್ರಾಮದ ಎನ್.ವಿ.ಸುನೀಲಕುಮಾರ ಬಂಧಿತರು. ಇಲ್ಲಿನ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಪರೀಕ್ಷಾ ಕೇಂದ್ರದಲ್ಲಿಯೇ ಅವರು ಪರೀಕ್ಷೆ ಬರೆದಿದ್ದಾರೆ. ಪರೀಕ್ಷೆಯಲ್ಲಿ ಎಲೆಕ್ಟ್ರಾನಿಕ್ ಉಪಕರಣ ಬಳಸಿ ಪಾಸಾದ ಆರೋಪ ಇವರ ಮೇಲಿದೆ. ಹಗರಣದಲ್ಲಿ ಈಗಾಗಲೇ ಬಂಧಿತರಾದ ರುದ್ರಗೌಡ ಡಿ. ಪಾಟೀಲ ಮುಖಾಂತರವೇ ಅವರು ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂದು ಸಿಐಡಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಕ್ರಮಕ್ಕೆ ಸಂಬಂಧಿಸಿದಂತೆ ದಾಖಲೆ, ಓಎಂಆರ್ ಶೀಟ್ ಮರು-ಪರಿಶೀಲನೆಗೆ ಹಾಜರಾಗಲು ಸುನೀಲಕುಮಾರಗೆ ಬುಲಾವ್ ಬಂದಿತ್ತು. ಸೋಮವಾರ ಬೆಂಗಳೂರಿನ ಸಿಐಡಿ ಕಚೇರಿಗೆ ತೆರಳಿದ್ದರು. ಪರಿಶೀಲನೆ ವೇಳೆ ಅಕ್ರಮ ನಡೆದ ಸಂದೇಹ ಬಂದಿದ್ದು, ಆರೋಪಿಯನ್ನು ಅಧಿಕಾರಿಗಳು ಸ್ಥಳದಲ್ಲೇ ವಶಕ್ಕೆ ಪಡೆದರು. ಮಂಗಳವಾರ ಅವರನ್ನು ಕಲಬುರಗಿಗೆ ಕರೆತಂದರು.

'ಆರೋಪಿಯು ರುದ್ರಗೌಡ ಡಿ. ಪಾಟೀಲಗೆ ₹ 40 ಲಕ್ಷ ಹಣ ನೀಡಿದ್ದ ಎಂಬ ಸಂಶಯ ಇದ್ದು, ವಿಚಾರಣೆ ನಡೆದಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಶರಣಾಗಲು ಗಡುವು: ದಿವ್ಯಾ ಹಾಗರಗಿ, ನೀರಾವರಿ ಇಲಾಖೆಯ ಜ್ಯೂನಿಯರ್ ಎಂಜಿನಿಯರ್ ಮಂಜುನಾಥ ಮೇಳಕುಂದಿ, ರವೀಂದ್ರ ಮೇಳಕುಂದಿ, ಜ್ಞಾನಜ್ಯೋತಿ ಶಾಲೆಯ ಪ್ರಾಚಾರ್ಯ ಕಾಶಿನಾಥ, ಶಿಕ್ಷಕಿಯರಾದ ಅರ್ಚನಾ ಹಾಗೂ ಶಾಂತಿಬಾಯಿ ಅವರ ವಿರುದ್ಧ ಇಲ್ಲಿನ ಮೂರನೇ ಜೆಎಂಎಫ್ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಶ್ರೀವಾಸ್ತವ ಅವರು ಬಂಧನ ವಾರಂಟ್ ಜಾರಿಗೊಳಿಸಿದ್ದಾರೆ. ವಾರದೊಳಗೆ ಸಿಐಡಿ ಪೊಲೀಸರ ಎದುರು ಶರಣಾಗಬೇಕು ಎಂದೂ ಆರೋಪಿಗಳಿಗೆ ಸೂಚಿಸಿದ್ದಾರೆ.

ಎರಡು ವಾರಗಳಿಂದ ತಲೆಮ-ರೆಸಿಕೊಂಡಿರುವ ದಿವ್ಯಾ ಹಾಗರಗಿ ಹಾಗೂ ಇತರ ಆರೋಪಿಗಳನ್ನು ಬಂಧಿಸಲು ಸಿಐಡಿಗೆ ಸಾಧ್ಯವಾಗಿಲ್ಲ. ಹೀಗಾಗಿ ನ್ಯಾಯಾಲಯದ ವಾರಂಟ್ ಪಡೆದಿದ್ದು, ಒಂದೊಮ್ಮೆ ಶರಣಾಗದಿದ್ದರೆ ಆರೋಪಿಗಳ ಆಸ್ತಿಯನ್ನೂ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ ಎಂದು ಮೂಲಗಳು ತಿಳಿಸಿವೆ.

'ಕೇಂದ್ರ ಮಂಜೂರಾತಿಗೆ ಸಂಸದ ಶಿಫಾರಸು'

ಕಲಬುರಗಿ: 'ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಅವರ ಶಿಕ್ಷಣ ಸಂಸ್ಥೆಯಲ್ಲಿ ಪಿಎಸ್‌ಐ ನೇಮಕಾತಿಯ ಪರೀಕ್ಷಾ ಕೇಂದ್ರ ಆಯ್ಕೆ ಮಾಡಲು ಸಂಸದ ಡಾ. ಉಮೇಶ ಜಾಧವ ಅವರು ಶಿಫಾರಸು ಪತ್ರ ನೀಡಿದ್ದಾರೆ' ಎಂದು ಕೆಪಿಸಿಸಿ ಉಪಾಧ್ಯಕ್ಷ ಡಾ.ಶರಣಪ್ರಕಾಶ ಪಾಟೀಲ ಆರೋಪಿಸಿದರು.

'ಸಂಸದರು ಏಕೆ ಶಿಫಾರಸು ಮಾಡಿದರು ಎಂಬುದನ್ನು ಪ್ರಶ್ನಿಸುವ ಬದಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅದನ್ನು ಸಮರ್ಥಿಸಿಕೊಂಡಿದ್ದಾರೆ. ಶಿಫಾರಸು ಪತ್ರ ಕೊಟ್ಟರಬಹುದು. ಅದೇನು ದೊಡ್ಡ ವಿಚಾರವಲ್ಲ ಎಂದು ಹೇಳಿಕೆ ನೀಡಿದ್ದಾರೆ. ಮುಖ್ಯಮಂತ್ರಿಯಂತಹ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಹೀಗೆ ಹೇಳುವುದು ಸರಿಯೇ' ಎಂದು ಅವರು ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಗೃಹ ಸಚಿವರಿಂದ ಬಿಜೆಪಿ ಪ್ರಭಾವಿಗಳ ರಕ್ಷಣೆ'

ಬೆಂಗಳೂರು: ಪಿಎಸ್‌ಐ ನೇಮಕಾತಿಯಲ್ಲಿ ನಡೆದಿರುವ ಅಕ್ರಮದಲ್ಲಿ ಬಿಜೆಪಿಯ ಪ್ರಭಾವಿ ನಾಯಕರು ಶಾಮೀಲಾಗಿದ್ದು, ಗೃಹ ಸಚಿವ ಆರಗ ಜ್ಞಾನೇಂದ್ರ ಅವರೆಲ್ಲರನ್ನೂ ರಕ್ಷಿಸುತ್ತಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಆರೋಪಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಅವರು, 'ಪ್ರಮುಖ ಆರೋಪಿ, ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಜತೆ ಆ ಪಕ್ಷದ ಪ್ರಭಾವಿಗಳು ಶಾಮೀಲಾಗಿರುವುದರಿಂದ ಪ್ರಮುಖ ಆರೋಪಿಗಳನ್ನು ಬಂಧಿಸಲು ಪೊಲೀಸರಿಗೆ ಸಾಧ್ಯವಾಗಿಲ್ಲ. ದಿವ್ಯಾ ಅವರನ್ನು ಬಂಧಿಸಲಾಗದ ಪೊಲೀಸರು ಇನ್ನೂ ದೊಡ್ಡವರನ್ನು ಹಿಡಿದು ತರುತ್ತಾರೆಯೆ ಎಂದು ಪ್ರಶ್ನಿಸಿದರು.

ಚವ್ಹಾಣ ವಿಚಾರಣೆ ಏಕಿಲ್ಲ?: 'ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಮೊದಲು ಪತ್ರ ಬರೆದವರು ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ. ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಅವರಿಗೆ ನೋಟಿಸ್ ನೀಡಿರುವ ಸಿಐಡಿ ಅಧಿಕಾರಿಗಳು, ಚವ್ಹಾಣ್ ಅವರ ವಿಚಾರಣೆಯನ್ನು ಏಕೆ ನಡೆಸಿಲ್ಲ' ಎಂದು ಪ್ರಶ್ನಿಸಿದರು.

'ಶ್ರೀ ನಾರಾಯಣ ಗುರುಗಳ ತತ್ವ ಪಾಲನೆಯಿಂದ ಒಗ್ಗಟ್ಟು'



ಶ್ರೀ ನಾರಾಯಣ ಗುರು ಅವರ ಪ್ರತಿಮೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿ –ಪಿಟಿಐ ಚಿತ್ರ

ನವದೆಹಲಿ/ತಿರುವನಂತಪುರ (ಪಿಟಿಐ): 'ಒಂದೇ ಜಾತಿ, ಒಂದೇ ಧರ್ಮ, ಒಬ್ಬನೇ ದೇವರು ಎಂಬ ಶ್ರೀ ನಾರಾಯಣ ಗುರುಗಳ ಸಂದೇಶವನ್ನು ಎಲ್ಲರೂ ಪಾಲಿಸಿದರೆ ಜಗತ್ತಿನ ಯಾವೊಂದು ಶಕ್ತಿಯೂ ಭಾರತವನ್ನು ವಿಭಜಿಸಲು ಸಾಧ್ಯವಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಶಿವಗಿರಿ ತೀರ್ಥಯಾತ್ರೆಯ 90ನೇ ವರ್ಷಾಚರಣೆ ಹಾಗೂ ಬ್ರಹ್ಮ ವಿದ್ಯಾಲಯದ ಸುವರ್ಣ ಮಹೋತ್ಸವದ ಅಂಗವಾಗಿ ಶ್ರೀ ನಾರಾಯಣ ಧರ್ಮ ಸಂಘ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಭಾರತೀಯರಾದ ನಮಗೆ ಇರುವುದು ಒಂದೇ ಜಾತಿ, ಅದು ಭಾರತೀಯತೆ. ಒಂದೇ ಧರ್ಮ, ಅದು ಸೇವೆ ಹಾಗೂ ಕರ್ತವ್ಯ. ಒಂದೇ ದೇವರು, ಅದು ಭಾರತ ಮಾತೆ' ಎಂದರು.

'ಭಾರತದ ಸಮಾಜದಲ್ಲಿ ಅವಿಭಾಜ್ಯ ಅಂಗವಾಗಿರುವ ಜಾತಿ ಪದ್ಧತಿಯಂತಹ ಸಾಮಾಜಿಕ ಪಿಡುಗನ್ನು ಹೋಗಲಾಡಿಸಲು ಶ್ರೀ ನಾರಾಯಣ ಗುರುಗಳು ಆಧುನಿಕತೆ ಹಾಗೂ ಸಾಂಪ್ರದಾಯಿಕ ಮೌಲ್ಯಗಳಿಗೆ ಸಮಾನ ಒತ್ತು ನೀಡಿದರು' ಎಂದು ಅವರು ಅಭಿಪ್ರಾಯಪಟ್ಟರು.

ಸಿಎಂ ಭೇಟಿಯ ಭರವಸೆ: ಪಾದಯಾತ್ರೆ ಅಂತ್ಯ

ಪ್ರಜಾವಾಣಿ ವಾರ್ತೆ

ಹಾವೇರಿ: 1,522 ಬಡ ಮಹಿಳೆಯರ ಗರ್ಭಕೋಶ ತೆಗೆದು ಹಾಕಿರುವ ಪ್ರ-ಕರಣದಲ್ಲಿ ಪರಿಹಾರ ನೀಡಬೇಕು ಎಂದು ಆಗ್ರಹಿಸಿ, ರಾಣೆಬೆನ್ನೂರಿನಿಂದ ಶಿಗ್ಗಾವಿಯ ಮುಖ್ಯಮಂತ್ರಿ ಮನೆವರೆಗೆ ನೂರಾರು ಮಹಿಳೆಯರು ಕೈಗೊಂಡಿದ್ದ ಪಾದಯಾತ್ರೆ ಮಂಗಳವಾರ ಹಾವೇರಿ ತಾಲ್ಲೂಕಿನ ನೆಲೋಗಲ್ಲ ಹೊರವಲಯ-ದಲ್ಲಿ ಅರ್ಧಕ್ಕೆ ಅಂತ್ಯಗೊಂಡಿತು.

ಗರ್ಭಕೋಶ ತೆಗೆದಿರುವ ಸರ್ಜನ್ ಡಾ.ಶಾಂತ ಪಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ನೂರಾರು ಮಹಿಳೆಯರು ರಾಣೆಬೆನ್ನೂರಿನಿಂದ ಪಾದಯಾತ್ರೆ ಆರಂಭಿಸಿದ್ದರು.

ಏ.28ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶಿಗ್ಗಾವಿಗೆ ಬರಲಿದ್ದು, ಆ ಸಂದರ್ಭದಲ್ಲಿ ಗರ್ಭಕೋಶ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಐವರು ಮಹಿಳೆಯರು ಹಾಗೂ ಹೋರಾಟದ ನೇತೃತ್ವ ವಹಿಸಿದ್ದ ಮುಖಂಡರ ನಿಯೋಗ ಭೇಟಿ ಮಾಡಿಸುವುದಾಗಿ ಅಧಿಕಾರಿಗಳು ನೀಡಿದ ಭರವಸೆಯ ಮೇರೆಗೆ ಪಾದಯಾತ್ರೆ ಮೊಟಕುಗೊಳಿಸಲು ಪ್ರ-ತಿಭಟನಾಕಾರರು ನಿರ್ಧರಿಸಿದರು. 500 ಮಹಿಳೆಯರಿಗೆ ದೃಢೀಕರಣ ಪತ್ರ ಶೀಘ್ರ: 'ಗರ್ಭಕೋಶ ತೆಗೆಸಿಕೊಂಡ ಬಗ್ಗೆ ಒಂದು ಸಾವಿರ ಮಹಿಳೆಯರಿಗೆ ಈಗಾಗಲೇ ದೃಢೀಕರಣ ಪತ್ರ ನೀಡಲಾಗಿದೆ. ಬಾಕಿ 500 ಮಹಿಳೆಯರಿಗೆ 15 ದಿನದೊಳಗೆ ದೃಢೀಕರಣ ಪತ್ರ ನೀಡಲು ಡಿಎಚ್‌ಒ ಅವರಿಗೆ ಸೂಚಿಸಿದ್ದೇನೆ' ಎಂದು ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣವರ ಮಾಹಿತಿ ನೀಡಿದರು.



1522 ಬಡ ಮಹಿಳೆಯರ ಗರ್ಭಕೋಶವನ್ನು ಅನಧಿಕೃತವಾಗಿ ತೆಗೆದು ಹಾಕಿರುವ ಪ್ರಕರಣದಲ್ಲಿ ಪರಿಹಾರ ನೀಡಬೇಕು ಎಂದು ಆಗ್ರಹಿಸಿ, ಹಾವೇರಿ ತಾಲ್ಲೂಕಿನ ನೆಲೋಗಲ್ಲ ಹೊರವಲಯದಲ್ಲಿ ಧರಣಿ ಕುಳಿತ ಪ್ರತಿಭಟನಾಕಾರರೊಂದಿಗೆ ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣವರ ಮಾತುಕತೆ ನಡೆಸಿದರು. ಎಸ್ಪಿ ಹನುಮಂತರಾಯ ಇದ್ದಾರೆ

ಶಾಲೆಗಳಲ್ಲಿ ಧರ್ಮ ಬೋಧಿಸದಂತೆ ನಿಗಾ: ಶಿಕ್ಷಣ ಸಚಿವ ನಾಗೇಶ್

ಬೆಂಗಳೂರು: 'ರಾಜ್ಯದ ಯಾವುದೇ ಶಾಲೆಗಳಲ್ಲಿ ಧಾರ್ಮಿಕ ಪಠ್ಯ ಬೋಧಿಸದಂತೆ ನಿಗಾ ಇರಿಸಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮಂಗಳವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬೆಂಗಳೂರಿನ ರಿಚರ್ಡ್ಸ್ ಟೌನ್‌ನ ಕ್ಲಾರೆನ್ಸ್ ಶಾಲೆಯಲ್ಲಿ ಬೈಬಲ್ ಅಧ್ಯಯನ ಕಡ್ಡಾಯಗೊಳಿಸಿರುವ ಕುರಿತು ಪರಿಶೀಲಿಸಲು ಕ್ಷೇತ್ರ ಶಿಕ್ಷಣಾಧಿ-ಕಾರಿಗೆ ಸೂಚಿಸಲಾಗಿದೆ' ಎಂದರು.

'ಕರ್ನಾಟಕ ಶಿಕ್ಷಣ ಕಾಯ್ದೆ' ಪ್ರಕಾರ ಶಾಲೆಗಳಲ್ಲಿ ಧಾರ್ಮಿಕ ಪಠ್ಯ ಬೋಧಿಸಲು ಅವಕಾಶವಿಲ್ಲ. ಸಿಬಿಎಸ್‌ಇ, ಐಸಿಎಸ್‌ಇ ಶಾಲೆಗಳಿಗೂ ಈ ಕಾಯ್ದೆ ಅನ್ವಯವಾ-ಗುತ್ತದೆ. ಕಾಯ್ದೆಯ ಉಲ್ಲಂಘನೆ ಆಗಿದ್ದರೆ ಕ್ರಮ ಜರುಗಿಸಲಾಗುವುದು ಎಂದರು.

ಭಗವದ್ಗೀತೆ, ರಾಮಾಯಣ, ಮಹಾಭಾರತ, ಸತ್ಯ ಹರಿಶ್ಚಂದ್ರನ ಕತೆಗಳು ಹಿಂದೂ ಧಾರ್ಮಿಕ ಪಠ್ಯದ ವ್ಯಾಪ್ತಿಗೆ ಸೇರುವುದಿಲ್ಲ. ಆದರೆ, ಅವುಗಳನ್ನು ಬೋಧಿಸಲು ಮುಂದಾದರೆ ಬುದ್ಧಿಜೀವಿಗಳು ಎನಿಸಿಕೊಂಡವರು ತಕರಾರು ತೆಗೆಯುತ್ತಾರೆ. ಬೈಬಲ್ ಮತ್ತು ಕುರಾನ್ ಧಾರ್ಮಿಕ ಪಠ್ಯಗಳು. ಅವುಗಳ ಬೋಧನೆ ಮಾಡುವುದು ಕಣ್ಣೆದುರು ಕಂಡರೂ ಚಕಾರ ಎತ್ತುತ್ತಿಲ್ಲ ಎಂದು ಟೀಕಿಸಿದರು.

ಯಾವುದೇ ಶಾಲೆಯಲ್ಲೂ ಧಾರ್ಮಿಕ ಪಠ್ಯ ಕಲಿಯುವಂತೆ ಒತ್ತಾಯಿಸುವಂತಿಲ್ಲ. ಈ ಬಗ್ಗೆ ಪರಿಶೀಲನೆ ನಡೆಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ನಿರ್ದೇಶನ ನೀಡಲಾಗಿದೆ. ಯಾವುದೇ ಸಂಸ್ಥೆಗಳು ತಪ್ಪು ಮಾಡಿದರೂ ಕ್ರಮ ನಿಶ್ಚಿತ ಎಂದು ತಿಳಿಸಿದರು.

ಕ್ಲಾರೆನ್ಸ್ ಶಾಲೆಯಲ್ಲಿ ಬೈಬಲ್ ಅಧ್ಯಯನ ಕಡ್ಡಾಯ ಆರೋಪದ ಕುರಿತು ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ಅಧಿಕಾರಿಗಳು ನೋಟಿಸ್ ನೀಡಿದ್ದಾರೆ. ಅವರಿಂದ ಉತ್ತರ ಬಂದ ಬಳಿಕ ಪರಿಶೀಲಿಸಿ, ಅಗತ್ಯ ಕ್ರಮಕ್ಕೆ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಗೆ (ಸಿಬಿಎಸ್‌ಇ)ಗೆ ಶಿಫಾರಸು ಮಾಡಲಾಗುವುದು ಎಂದರು.

'ಡಿಕೆಶಿ– ದಿವ್ಯಾ ಗೋಡಂಬಿ ತಿನ್ನುತ್ತಿದ್ದಾರೆಯೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಿಯಾಂಕ ಖರ್ಗೆಯವರೇ ಪೂರ್ಣ ಸರ್ಕಾರವೇ ದಿವ್ಯಾ ಹಾಗರಗಿ ಜತೆ ಇದೆ ಎಂದು ಆಪಾದಿಸಿದ್ದೀರಿ. ಆದರೆ ಇಲ್ಲಿ ನೋಡಿ... ಈ ಚಿತ್ರ ಏನು ಹೇಳುತ್ತದೆ ನೋಡಿ' ಎಂದು ಬಿಜೆಪಿ ವ್ಯಂಗ್ಯವಾಡಿದೆ.

'ಎಷ್ಟೊಂದು ತನ್ಮಯತೆಯಿಂದ ಮಾತನಾಡುತ್ತಿದ್ದಾರೆ' ಎಂದು ಕುಟುಕಿರುವ ಬಿಜೆಪಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ದಿವ್ಯಾ ಹಾಗರಗಿ ಜತೆಗಿರುವ ಚಿತ್ರವನ್ನು ಟ್ಯಾಗ್ ಮಾಡಿದೆ. ದಿವ್ಯಾ ಹಾಗರಗಿ ಜತೆ ಗೃಹ ಸಚಿವ ಆರಗ ಜ್ಞಾನೇಂದ್ರ ನಿಂತಿರುವ ಚಿತ್ರವನ್ನು ಟ್ವೀಟ್ ಮಾಡಿದ್ದ ಕಾಂಗ್ರೆಸ್, ಸಚಿವರ ರಾಜೀನಾಮೆಗೆ ಒತ್ತಾಯಿಸಿತ್ತು.

'ನಿಮ್ಮ ಪಕ್ಷದ ಯಾರು ಯಾರು ಗೋಡಂಬಿ–ಬಾದಾಮಿ ತಿಂದಿರಬಹುದು ಎಂಬುದನ್ನು ವಿವರಿಸಬಹುದೇ' ಎಂದೂ ಲೇವಡಿ ಮಾಡಿದೆ.

'ಪಿಎಸ್‌ಐ ನೇಮಕ ಹಗರಣ ಕಾಂಗ್ರೆಸ್ ಕೃಪಾ ಪೋಷಿತ ನಾಟಕ ಮಂಡಳಿಯ ಟೂಲ್ ಕಿಟ್ ಎಂಬುದಕ್ಕೆ ಸಾಕ್ಷ್ಯ ಇಲ್ಲಿದೆ. ಅಧಿಕಾರ ಇಲ್ಲದಿದ್ದರೂ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ತುರುಕುವುದಕ್ಕೆ ಕಾಂಗ್ರೆಸ್ ನಾಯಕರಿಗೆ ಮಾತ್ರ ಸಾಧ್ಯ' ಎಂದೂ ಹೇಳಿದೆ.



ಡಿ.ಕೆ.ಶಿವಕುಮಾರ್ ಜತೆ ದಿವ್ಯಾ ಹಾಗರಗಿ

> **ದಿವ್ಯಾ ಹಾಗರಗಿ ನನ್ನ ಜತೆ ಇರುವ ಫೋಟೋವನ್ನು ಬಿಜೆಪಿ ನಾಯಕರು ಹಂಚುತ್ತಿದ್ದಾರೆ. ತನಿಖಾಧಿಕಾರಿಗಳು ನನಗೂ ನೋಟಿಸ್ ನೀಡಿ ಕರೆದು, ತನಿಖೆ ಮಾಡಲಿ**
> **ಡಿ.ಕೆ. ಶಿವಕುಮಾರ್**
> ಕೆಪಿಸಿಸಿ ಅಧ್ಯಕ್ಷ

ಪರೀಕ್ಷೆ ಅಕ್ರಮ: ಕುಲಸಚಿವರ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿ-ಕೆ ಸೋರಿಕೆ ಪ್ರಕರಣದ ಸಂಬಂಧ ಮಲ್ಲೇಶ್ವರ ಠಾಣೆ ಪೊಲೀಸರು ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಪ್ರೊ.ಎಚ್. ನಾಗರಾಜ್ ಅವರನ್ನು ಮಂಗಳವಾರ ವಿಚಾರಣೆ ನಡೆಸಿದ್ದಾರೆ.

ನಾಗರಾಜ್ ಅವರು ಬಂಧಿತ ಆರೋಪಿ ಆರ್.ಸೌಮ್ಯಾ ಅವರಿಗೆ ಪಿಎಚ್.ಡಿ ಮಾರ್ಗದರ್ಶಕರಾಗಿ-ದ್ದರು. ಮೈಸೂರು ವಿಶ್ವವಿದ್ಯಾಲ-ಯದ ಭೂಗೋಳಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಅವರನ್ನು ಇತ್ತೀಚೆಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾ-ಲಯದ ಕುಲಸಚಿವ ಹುದ್ದೆಗೆ ನೇಮಕ ಮಾಡಲಾಗಿತ್ತು.

ಭೂಗೋಳಶಾಸ್ತ್ರ ವಿಷಯದಲ್ಲಿ ಪರಿಣತಿ ಹೊಂದಿದ್ದ ನಾಗರಾಜ್ ಅವರು ಪ್ರಶ್ನೆಪತ್ರಿಕೆ ತಯಾರಿಕಾ ತಂಡದಲ್ಲಿದ್ದ-ರು ಎಂದು ಗೊತ್ತಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಅವರ ಪಾತ್ರ ಇರುವ ಶಂಕೆಯೂ ಇದೆ ಎಂದು ಮೂಲಗಳು ಹೇಳಿವೆ.

ಮೈಸೂರಿನಲ್ಲಿ ಅತಿಥಿ ಉಪನ್ಯಾ-ಸಕಿಯಾಗಿ ಕೆಲಸ ಮಾಡುತ್ತಿದ್ದ ಸೌಮ್ಯಾ, ಸಹಾಯಕ ಪ್ರಾಧ್ಯಾಪಕರ ನೇಮಕಾತಿಗಾಗಿ ನಡೆದ ಪರೀಕ್ಷೆ ಬರೆದಿದ್ದರು. ಅವರ ಮೊಬೈಲ್‌ನ ವಾಟ್ಸ್‌ಆ್ಯಪ್‌ನಿಂದ 18 ಪ್ರಶ್ನೆಗಳು ಸೋರಿಕೆಯಾಗಿದ್ದವು. ಈ ಸಂಬಂಧ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ರಮ್ಯಾ ಅವರು ಮಲ್ಲೇಶ್ವರ ಠಾಣೆಗೆ ಇದೇ 22ರಂದು ದೂರು ನೀಡಿದ್ದರು. ಅದನ್ನು ಆಧರಿಸಿ, ಸೌಮ್ಯಾ ಅವರನ್ನು ಪೊಲೀಸರು ಮೈಸೂರಿನಲ್ಲಿ ಬಂಧಿಸಿದ್ದರು. ಕೋರ್ಟ್ ನ್ಯಾಯಾಂಗಬಂಧನಕ್ಕೆ ಒಪ್ಪಿಸಿತ್ತು.

'ಸೌಮ್ಯಾ ಅವರನ್ನು ತನಿಖಾ ತಂಡದವರು ಮಂಗಳವಾರ ಸುಪರ್ದಿಗೆ ಪಡೆದು ಹಲವು ಆಯಾಮಗಳಲ್ಲಿ ವಿಚಾರಣೆ ನಡೆಸಿದ್ದರು. ಅವರು ನೀಡಿದ ಮಾಹಿತಿ ಆಧಾರದಲ್ಲಿ ಪ್ರೊ. ನಾಗರಾಜ್ ಅವರನ್ನು ವಿಚಾರಣೆಗೆ ಕರೆಸಲಾಗಿದೆ' ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಸೌಮ್ಯಾ ಅವರನ್ನು ಬಿಟ್ಟು ಮತ್ತ್ಯಾರನ್ನೂ ಬಂಧಿಸಲಾಗಿಲ್ಲ. ಅನುಮಾನ ವ್ಯಕ್ತವಾದವರನ್ನು ಕರೆಸಿ ವಿಚಾರಣೆ ನಡೆಸಲಾಗುತ್ತಿದೆ' ಎಂದೂ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ತನಿಖೆಗೆ ಹಾಜರಾಗಲು ತೇಜಸ್ವಿಗೆ ಸೂಚನೆ

ನವದೆಹಲಿ (ಪಿಟಿಐ): ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನಿವಾಸದಲ್ಲಿ ನಡೆದ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಗೆ ಹಾಜರಾಗುವಂತೆ ದೆಹಲಿ ಪೊಲೀಸರು ಸಂಸದ ತೇಜಸ್ವಿ ಸೂರ್ಯ ಅವರಿಗೆ ಸೂಚನೆ ನೀಡಿದ್ದಾರೆ.

ತನಿಖೆಗೆ ಹಾಜರಾಗುವಂತೆ ಸೂರ್ಯ ಅವರನ್ನು ಕೇಳಲಾಗಿದೆ. ಅವರು ತಮ್ಮ ಸಹಕಾರದ ಭರವಸೆ ನೀಡಿದ್ದು, ತನಿಖೆಗೆ ಹಾಜರಾಗುವುದಾಗಿ ಹೇಳಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರೀಯ ವಿದ್ಯಾಲಯ ಪ್ರವೇಶ: ಸಂಸದರ ಕೋಟಾ ರದ್ದು

ನವದೆಹಲಿ (ಪಿಟಿಐ): ಕೇಂದ್ರೀಯ ವಿದ್ಯಾಲಯಗಳಲ್ಲಿ ಪ್ರವೇಶ ಪಡೆಯುವುದಕ್ಕೆ ಸಂಬಂಧಿಸಿದ 'ಸಂಸದರ ವಿವೇಚನಾ ಕೋಟಾ'ವನ್ನು ಕೇಂದ್ರ ಸರ್ಕಾರ ರದ್ದುಪಡಿಸಿದೆ.

ಈ ಸಂಬಂಧ ಕೇಂದ್ರೀಯ ವಿದ್ಯಾಲಯ ಸಂಘಟನೆ (ಕೆವಿಎಸ್) ಪರಿಷ್ಕೃತ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ರೈಲಿನಿಂದ ಬಿದ್ದ ವ್ಯಕ್ತಿಗೆ ಪರಿಹಾರ ನೀಡಲು ಹೈಕೋರ್ಟ್ ಆದೇಶ

ಮುಂಬೈ (ಪಿಟಿಐ): ಮುಂಬೈನ ಜೀವ-ನಾಡಿಯಂತಿರುವ ಲೋಕಲ್ ರೈಲನ್ನು ಹತ್ತುವಾಗ ಬಿದ್ದು ಗಾಯಗೊಂಡ ವ್ಯಕ್ತಿಯೊಬ್ಬರಿಗೆ ₹ 3 ಲಕ್ಷ ಪರಿಹಾರ ನೀಡುವಂತೆ ಬಾಂಬೆ ಹೈಕೋರ್ಟ್ ಆದೇಶಿಸಿದೆ.

ಕಿಕ್ಕಿರಿದು ತುಂಬಿದ್ದ ಲೋಕಲ್ ರೈಲಿನಿಂದ ಬಿದ್ದಿದ್ದರಿಂದ ಕಾಲಿಗೆ ಗಾಯವಾಗಿದ್ದ 75 ವರ್ಷದ ವ್ಯಕ್ತಿ-ಯೊಬ್ಬರಿಗೆ ಪರಿಹಾರ ನೀಡುವಂತೆ ನ್ಯಾಯಮೂರ್ತಿ ಭಾರತಿ ಡಾಂಗ್ರೆ ಅವರ ಏಕಪೀಠ ಪಶ್ಚಿಮ ರೈಲ್ವೆಗೆ ನಿರ್ದೇಶಿಸಿದೆ.

ಪ್ರವರ್ಗ 2 ಎ ಅಡಿ ಬಣಜಿಗರು ಪಡೆದ ಪ್ರಮಾಣ ಪತ್ರ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗಾಯಿತ ಬಲಜಿಗ/ ಬಣಜಿಗ ಸಮುದಾಯದವರು ಪ್ರವರ್ಗ 2 ಎ ಅಡಿ ಪಡೆದಿರುವ ಜಾತಿ ಪ್ರಮಾಣ-ಪತ್ರವನ್ನು ರದ್ದುಪಡಿಸುವಂತೆ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಆಗ್ರಹಿಸಿದೆ.

ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗ್ಡೆ ಅವರಿಗೆ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್. ವೆಂಕಟರಾಮಯ್ಯ ಮನವಿ ಸಲ್ಲಿಸಿದ್ದಾರೆ.

ಬಣಜಿಗ ಜಾತಿಯವರು ಪ್ರವರ್ಗ-2ಎ ಅಡಿ ಪ್ರಮಾಣ ಪತ್ರ ಹಾಗೂ ಆದಾಯ ಪ್ರಮಾಣಪತ್ರ ಪಡೆದರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಇಂತಹ ಪ್ರಮಾ-ಣಪತ್ರವನ್ನು ರದ್ದುಪಡಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಿದ್ದಾರೆ.

ಪ್ರವರ್ಗ– 2 ಎ ಅಡಿ ಶೇ 15ರಷ್ಟು ಮೀಸಲಾತಿ ಇದೆ. ಅಗಸ, ತಿಗಳ, ಸವಿತಾ, ದೇವಾಂಗ, ಈಡಿಗ, ಕುರುಬ ಸೇರಿದಂತೆ 102 ಜಾತಿಗಳು ಈ ಪ್ರವರ್ಗದಡಿ ಮೀಸಲಾತಿ ಪಡೆಯುತ್ತಿವೆ. ಆದರೆ ಪ್ರವರ್ಗ-3 ಎ ಅಡಿಯಲ್ಲಿರುವ ಬಲಜಿಗ/ಬಣಜಿಗ ಸಮುದಾಯದವರನ್ನು ಶಿಕ್ಷಣದ ಮೀಸಲಾತಿಗೆ ಸೀಮಿತವಾಗಿ ಪ್ರವರ್ಗ -2ಎಗೆ ವರ್ಗಾಯಿಸಿ ಸರ್ಕಾರ ಆದೇಶ ಹೊರಡಿಸಿದೆ. ಇದರ ಪರಿಣಾಮವಾಗಿ ಬಣಜಿಗರು ಎಂಜಿನಿಯರಿಂಗ್ ಹಾಗೂ ವೈದ್ಯ ಶಿಕ್ಷಣದ ಎಲ್ಲ ಕೋರ್ಸ್‌ಗಳಲ್ಲಿ ಪ್ರವರ್ಗ-2 ಎ ಅಡಿ ಪ್ರವೇಶ ಪಡೆಯುತ್ತಿ-ದ್ದಾರೆ.ಹೀಗೆ ಪ್ರಮಾಣ ಪತ್ರ ನೀಡದಂತೆ ಆದೇಶ ಹೊರಡಿಸಬೇಕು ಎಂದು ಮನವಿಯಲ್ಲಿ ಕೋರಿದ್ದಾರೆ.

ಜಾತಿಪತ್ರ ನಕಲಿ: ಪ್ರಹಾರ

ಒಂದನೇ ಪುಟದಿಂದ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನಕಲಿ ಜಾತಿ ಪ್ರಮಾಣ ಪತ್ರ ಪ್ರಕರಣಗಳ ತನಿಖೆ ಕುರಿತಂತೆ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು. '1097 ವ್ಯಕ್ತಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. 165 ಪ್ರಕರಣಗಳಲ್ಲಿ ತಹಶೀಲ್ದಾರ್ ಮತ್ತು ಇತರ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಕ್ಕೆ ಪತ್ರ ಬರೆಯಲಾಗಿದೆ' ಎಂದರು.

'ನಕಲಿ ಜಾತಿ ಪ್ರಮಾಣ ಪತ್ರ ಪಡೆಯುವುದು ಮತ್ತು ಅದನ್ನು ಮಾಡಿಕೊಡುವುದು ಸಂವಿಧಾನ ಬಾಹಿರ. ನಕಲಿ ಜಾತಿ ಪ್ರಮಾಣ ಪತ್ರದ ಬಗ್ಗೆ ಸಮಾಜ ಕಲ್ಯಾಣ ಇಲಾಖೆಗೆ ಯಾರೇ ದೂರು ಕೊಟ್ಟರೂ, ಇಲಾಖೆಯು ನಮಗೆ ಅದರ ಒಂದು ಪ್ರತಿಯನ್ನು ಕಳುಹಿಸುತ್ತದೆ. ಅದರ ಆಧಾರದ ಮೇಲೆ ನಾವು ತನಿಖೆಯನ್ನು ನಡೆಸುತ್ತೇವೆ' ಎಂದರು.

'ವಿಶ್ವನಾಥ್ ಪಿಳ್ಳೈ ಪ್ರಕರಣದ-ಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣಪತ್ರ ನೀಡಿ ನೌಕರಿ ಪಡೆದಿದ್ದರೆ, ವಿಚಾರಣೆ ಇಲ್ಲದೇ ವಜಾ ಮಾಡಬೇಕು. ಇತರ ಯಾವುದೇ ಪ್ರಕರಣಗಳಲ್ಲಿ ವಜಾಗೆ ಮುನ್ನ ಅವರ ವಾದವನ್ನು ಆಲಿಸಲು ಅವಕಾಶ ಇರುತ್ತದೆ. ಆದರೆ, ಪರಿಶಿಷ್ಟ ಜಾತಿ ಮತ್ತು ಪಂಗಡದ ನಕಲಿ ಜಾತಿ ಪ್ರಮಾಣಪತ್ರದ ವಿಚಾರದಲ್ಲಿ ನೇರವಾಗಿ ಶಿಕ್ಷೆಗೆ ಗುರಿಪಡಿಸಬಹುದು' ಎಂದು ರವೀಂದ್ರನಾಥ್ ಹೇಳಿದರು.

ಜಾತಿ ಪ್ರಮಾಣಪತ್ರ ನೀಡುವಾಗ ತಹಶೀಲ್ದಾರ್, ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರ ಜವಾಬ್ದಾರಿ ಹೆಚ್ಚು. ಯಾರೇ ಒಬ್ಬರು ಜಾತಿ ಪ್ರಮಾ-ಣಪತ್ರಕ್ಕೆ ಅರ್ಜಿ ಸಲ್ಲಿಸಿದಾಗ ಸಾರ್ವಜನಿಕ ನೋಟಿಸ್ ನೀಡಿ ಅಹವಾಲು ಆಹ್ವಾನಿಸಬೇಕು. ಅರ್ಜಿ ಸಲ್ಲಿಸಿದಾಗ ನಿಜವಾಗಿಯೂ ಪರಿಶಿಷ್ಟ ಜಾತಿ, ಪಂಗಡಕ್ಕೆ ಸೇರಿದವರೇ ಎಂಬುದನ್ನು ಅಕ್ಕಪಕ್ಕದವ-ರಲ್ಲಿ ವಿಚಾರಿಸಿ ಖಾತರಿ ಪಡಿಸಿಕೊಳ್ಳುವು-ದು ಕಡ್ಡಾಯ. ಇದರಲ್ಲಿ ಲೋಪವಾದರೆ ಸಂಬಂಧಿತ ಅಧಿಕಾರಿಗಳು ಶಿಕ್ಷೆಗೆ ಗುರಿಯಾಗುತ್ತಾರೆ' ಎಂದು ಹೇಳಿದರು.

ಬುಡ್ಗಾ ಜಂಗಮ, ಕಾಡು ಕುರುಬ, ಮಲೆಯರು ಹೆಸರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಕಲಿ ಪ್ರಮಾಣಪತ್ರವ-ನ್ನು ಸೃಷ್ಟಿಸಿರುವುದು ಕಂಡು ಬಂದಿದೆ ಎಂದೂ ರವೀಂದ್ರನಾಥ್ ಅವರು ತಿಳಿಸಿದರು.

ಉದ್ಯೋಗ ವಾಣಿ



ಸುಭಾಷಿತ

ನಿಮ್ಮ ಮಾತೇ ನೀವು ಮಾಡಿಕೊಳ್ಳುವ ಕರಾರಿನಂತೆ ಇರಬೇಕು. ಹೇಳಿದ್ದನ್ನು ಮಾಡಿ ಮತ್ತು ನೀಡಿದ್ದ ಭರವಸೆಯನ್ನು ಉಳಿಸಿಕೊಳ್ಳಿ.

–ಮೆಲಾನಿಯಾ ಟ್ರಂಪ್

ಕೊರೊನಾ ನಾಲ್ಕನೇ ಅಲೆ ಸಾಧ್ಯತೆ ಸ್ವಯಂಪ್ರೇರಿತ ಮುನ್ನೆಚ್ಚರಿಕೆ ಅಗತ್ಯ

ಕೋವಿಡ್‌ನ ನಾಲ್ಕನೇ ಅಲೆ ಕಾಡಬಹುದಾದ ಸಾಧ್ಯತೆಯ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಮಾರ್ಗಸೂಚಿ ಗೊತ್ತುಪಡಿಸಿರುವುದು ರಾಜ್ಯ ಸರ್ಕಾರಕ್ಕೆ ಅನಿವಾರ್ಯವಾಗಿದ್ದ ಕ್ರಮ. ದೆಹಲಿ, ಹರಿಯಾಣ ಮತ್ತು ತಮಿಳುನಾಡಿನಲ್ಲಿ ಕೊರೊನಾ ಸೋಂಕಿನ ಪ್ರಮಾಣ ಏರುಮುಖದಲ್ಲಿದೆ. ಬೆಂಗಳೂರಿನಲ್ಲಿ ಕೋವಿಡ್ ದೃಢ ಪ್ರಮಾಣದಲ್ಲಿ ಏರಿಕೆಯಾಗಿದೆ. ಈ ಏರಿಕೆಯ ಕಾರಣದಿಂದಾಗಿ ಕೊರೊನಾ ನಿಯಂತ್ರಿಸಲು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಸಾರ್ವಜನಿಕ ಜಾಗೃತಿ ಮೂಡಿಸುವುದು ಅಗತ್ಯವಾಗಿತ್ತು. ಕೊರೊನಾ ಪ್ರಕರಣಗಳು ವಿರಳಗೊಂಡ ಹಿನ್ನೆಲೆಯಲ್ಲಿ, ಬೆಂಗಳೂರನ್ನು ಹೊರತುಪಡಿಸಿ ರಾಜ್ಯದ ಉಳಿದೆಡೆಗಳಲ್ಲಿ ಮಾಸ್ಕ್ ಧರಿಸುವವರ ಸಂಖ್ಯೆ ತೀರಾ ಕಡಿಮೆಯಾಗಿತ್ತು. ಕೊರೊನಾ ಕಾರಣದಿಂದಾಗಿ ಎರಡು ವರ್ಷಗಳಿಂದ ಕ್ಷೀಣಿಸಿದ್ದ ಯುಗಾದಿ ಹಬ್ಬದ ಸಂಭ್ರಮ ಈ ಬಾರಿ ಗರಿಗೆದರಿತ್ತು. ರಾಜ್ಯದ ವಿವಿಧ ಭಾಗಗಳಲ್ಲಿ ಜಾತ್ರೆ-ರಥೋತ್ಸವಗಳು ಸಾವಿರಾರು ಜನರ ಹಾಜರಿಯಲ್ಲಿ ಅದ್ಧೂರಿಯಾಗಿ ನಡೆದಿದ್ದವು. ಸಾರ್ವಜನಿಕ ಬದುಕು ಹಳಿಗೆ ಮರಳುತ್ತಿರುವ ಸಂದರ್ಭದಲ್ಲೇ ಕೊರೊನಾ ಸೋಂಕಿನ ಪ್ರಮಾಣ ಮತ್ತೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಸ್ಥಳ, ಒಳಾಂಗಣ ಮತ್ತು ಪ್ರಯಾಣದ ಸಂದರ್ಭದಲ್ಲಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಮಾರ್ಗಸೂಚಿ ಹೊರಡಿಸಿದೆ. ಮಾಸ್ಕ್ ಧರಿಸದವರಿಗೆ ದಂಡ ವಿಧಿಸುವ ನಿರ್ಧಾರಕ್ಕೆ ಸರ್ಕಾರ ಇನ್ನೂ ಬಂದಿಲ್ಲವಾದರೂ, ಸಾರ್ವಜನಿಕ ಸ್ಥಳಗಳಲ್ಲಿ ಉಗುಳಿದರೆ ದಂಡ ಹಾಕುವುದಾಗಿ ಎಚ್ಚರಿಸಿದೆ. ಸಾರ್ವಜನಿಕ ಸ್ಥಳಗಳಲ್ಲಿ ಎರಡು ಅಡಿ ಭೌತಿಕ ಅಂತರ ಕಾಯ್ದುಕೊಳ್ಳುವಂತೆಯೂ ಸೂಚಿಸಿದೆ. ಸರ್ಕಾರದ ಈ ಮಾರ್ಗಸೂಚಿಯನ್ನು ಹೇರಿಕೆಯೆಂದು ಭಾವಿಸದೆ, ವೈಯಕ್ತಿಕ ಹಾಗೂ ಸಮುದಾಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಬ್ಬರೂ ಸ್ವಯಂಪ್ರೇರಣೆಯಿಂದ ಪಾಲಿಸಬೇಕಾಗಿದೆ. ಕೊರೊನಾದ ಮೊದಲ ಎರಡು ಅಲೆಗಳಲ್ಲಿ ಎದುರಿಸಿದ ಸಾವುನೋವುಗಳ ಪಾಠ ಸುಲಭಕ್ಕೆ ಮರೆಯುವಂತಹದ್ದಲ್ಲ. ಮೂರನೇ ಅಲೆಯು ಸೌಮ್ಯವಾಗಿದ್ದ ಕಾರಣ ಹೆಚ್ಚು ಸಾವುನೋವಿಲ್ಲದೆ ಅದನ್ನು ಎದುರಿಸಲು ಸಾಧ್ಯವಾಗಿತ್ತು. ಈಗ ನಾಲ್ಕನೇ ಅಲೆಯ ಆತಂಕ ಎದುರಾಗಿದ್ದು, ಮುನ್ನೆಚ್ಚರಿಕೆಯ ವಿವೇಕ ಹಾಗೂ ಸಂಯಮವನ್ನು ಪ್ರದರ್ಶಿಸಬೇಕಾಗಿದೆ. ಕೊರೊನಾ ನಿಯಂತ್ರಣದ ಉದ್ದೇಶದಿಂದ ಜಾರಿಗೆ ತರಲಾಗಿದ್ದ ಲಾಕ್‌ಡೌನ್‌ಗಳು ಜನಸಾಮಾನ್ಯರನ್ನು ಇನ್ನಿಲ್ಲದಂತೆ ನಲುಗಿಸಿವೆ. ಮತ್ತೊಂದು ಲಾಕ್‌ಡೌನ್‌ಗೆ ಅವಕಾಶ ಕಲ್ಪಿಸದಿರುವ ಸಾಧ್ಯತೆ ಸಾರ್ವಜನಿಕರ ಕೈಯಲ್ಲೇ ಇದೆ. ಚೀನಾದ ಬೀಜಿಂಗ್, ಶಾಂಘೈನಲ್ಲಿ ಕೊರೊನಾ ಪ್ರಕರಣಗಳು ಹಾಗೂ ಸಾವುಗಳ ಸಂಖ್ಯೆ ಏರುತ್ತಿದೆ. ಅಂಥ ಸನ್ನಿವೇಶ ನಮ್ಮಲ್ಲಿ ಸೃಷ್ಟಿಯಾಗದಿರುವಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವ ಬದ್ಧತೆಯನ್ನು ಸಮಾಜ ಮೈಗೂಡಿಸಿಕೊಳ್ಳಬೇಕಾಗಿದೆ.



ಲಸಿಕೆ ಅಭಿಯಾನದ ಜೊತೆಗೆ ಆರೋಗ್ಯ ವಲಯವನ್ನು ಸದೃಢಗೊಳಿಸಲು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು

ಮುನ್ನೆಚ್ಚರಿಕೆ ಲಸಿಕೆ ಪಡೆಯುವುದು ಕೊರೊನಾ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸುವ ಅಂಶ ಎಂದು ಸರ್ಕಾರ ಹಾಗೂ ಲಸಿಕೆ ತಯಾರಿಕಾ ಸಂಸ್ಥೆಗಳು ಸಾರ್ವಜನಿಕರಿಗೆ ಕಿವಿಮಾತು ಹೇಳುತ್ತಿವೆ. ಮೊದಲೆರಡು ಡೋಸ್‌ಗಳನ್ನು ಉಚಿತವಾಗಿ ನೀಡಿದ್ದರಿಂದಾಗಿ, ಲಸಿಕೆ ಪಡೆದವರ ಸಂಖ್ಯೆ ಗಣನೀಯ ಪ್ರಮಾಣದಲ್ಲಿತ್ತು. ಈಗ ಮುನ್ನೆಚ್ಚರಿಕೆ ಲಸಿಕೆಯನ್ನು ಹಣ ಪಾವತಿಸಿ ಪಡೆಯಬೇಕಾಗಿರುವುದರಿಂದ, ಎಲ್ಲರೂ ಲಸಿಕೆಯನ್ನು ಪಡೆಯುತ್ತಾರೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ. ಆದರೆ, ಹಿರಿಯ ನಾಗರಿಕರಿಗೆ ಸರ್ಕಾರ ನೀಡುತ್ತಿರುವ ಉಚಿತ ಲಸಿಕೆಯನ್ನು 60 ವರ್ಷ ಮೇಲ್ಪಟ್ಟ ಎಲ್ಲರೂ ಪಡೆಯುವುದು ಒಳ್ಳೆಯದು. ಹಣ ಭರಿಸಲು ಸಾಧ್ಯವಾಗದ ದುರ್ಬಲ ವರ್ಗದವರಿಗೆ ಉಚಿತವಾಗಿ ಲಸಿಕೆ ನೀಡುವ ಸಾಧ್ಯತೆಯನ್ನು ಸರ್ಕಾರ ಪರಿಶೀಲಿಸಬೇಕು. ಪ್ರಸ್ತುತ ಕೊರೊನಾ ಸೋಂಕಿನಿಂದ ಆಸ್ಪತ್ರೆಗೆ ದಾಖಲಾಗುತ್ತಿರುವವರಲ್ಲಿ ಲಸಿಕೆ ಪಡೆಯದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ನೀಡಿರುವ ಮಾಹಿತಿ ಕೂಡ ಲಸಿಕೆಯ ಮಹತ್ವವನ್ನು ದೃಢಪಡಿಸುವಂತಿದೆ. ಹಾಗಾಗಿ, ಆದಷ್ಟೂ ಹೆಚ್ಚು ಜನರು ಲಸಿಕೆ ಪಡೆಯಲು ಸಾಧ್ಯವಿರುವ ಎಲ್ಲ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು. ಸಾರ್ವಜನಿಕರಿಗೆ ಮಾರ್ಗದರ್ಶಿ ಸೂತ್ರಗಳನ್ನು ಗೊತ್ತುಪಡಿಸಿ, ‘ನಿಮ್ಮನ್ನು ನೀವು ರಕ್ಷಿಸಿಕೊಳ್ಳಿ’ ಎಂದು ಹೇಳಿದಷ್ಟಕ್ಕೆ ಸರ್ಕಾರದ ಕರ್ತವ್ಯ ಮುಗಿಯುವುದಿಲ್ಲ. ಲಸಿಕೆ ಅಭಿಯಾನದ ಜೊತೆಗೆ, ಆರೋಗ್ಯ ವಲಯವನ್ನು ಸದೃಢಗೊಳಿಸಲು ಈಗಿನಿಂದಲೇ ಸಿದ್ಧತೆ ನಡೆಸುವುದು ಅಗತ್ಯ. ಆಸ್ಪತ್ರೆಗಳು ತಮ್ಮ ಮೂಲಭೂತ ಸೌಕರ್ಯಗಳನ್ನು ಪುನರ್ ಪರಿಶೀಲಿಸಿಕೊಂಡು ಕೊರೊನಾ ಸೋಂಕನ್ನು ಎದುರಿಸಲು ಸಜ್ಜಾಗಬೇಕಾಗಿದೆ. ಮೇ 16ರಿಂದ ಶಾಲೆಗಳು ಆರಂಭಗೊಳ್ಳುತ್ತಿವೆ. 5ರಿಂದ 12 ವಯೋಮಾನದ ಮಕ್ಕಳಿಗೆ ತುರ್ತು ಬಳಕೆಗಾಗಿ ಎರಡು ಲಸಿಕೆಗಳಿಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಈ ಅವಕಾಶವನ್ನು ಬಳಸಿಕೊಂಡು, ಶಾಲಾ ಮಕ್ಕಳನ್ನು ಲಸಿಕೆಯ ಸುರಕ್ಷಿತ ಆವರಣದೊಳಗೆ ತರುವುದಕ್ಕೆ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಸರ್ಕಾರ ತ್ವರಿತವಾಗಿ ಮಾಡಬೇಕಾಗಿದೆ.

ದಿನದ ಟ್ವೀಟ್

ಗಂಭೀರವಾಗಿ ಪರಿಗಣಿಸಬೇಕಿದೆ



ಮೊಬೈಲ್ ವಿಡಿಯೊ ಗೇಮ್ ಚಟವು ಹೆಚ್ಚು ಗಣನೆಗೆ ಒಳಗಾಗದ ಒಂದು ಸಾಮಾಜಿಕ ಪಿಡುಗಾಗಿದೆ. ಇಂತಹ ಗೇಮ್‌ಗಳು ಯಾರನ್ನೇ ಆದರೂ ಅವುಗಳಿಗೆ ಅಂಟಿಕೊಳ್ಳುವಂತೆ ಮಾಡಬಲ್ಲವು. 90ರ ದಶಕದಲ್ಲಿ ನಗರಗಳಲ್ಲಿ ಕಂಡುಬರುತ್ತಿದ್ದ ಈ ವಿದ್ಯಮಾನ ಇದೀಗ ಅಗ್ಗದ ಡೇಟಾ, ಸಾಧನಗಳಿಂದ ಮತ್ತು ವೈವಿಧ್ಯಮಯ ಆಟಗಳಿಂದಾಗಿ ಎಲ್ಲೆಡೆಯೂ ಕಂಡುಬರುತ್ತಿದೆ. ಶಾಲೆಗಳಲ್ಲಿ ಮಕ್ಕಳ ಸಾಧನೆ ಶೇ 20ರಷ್ಟು ಕುಸಿದಿದೆ ಎಂಬ ಮಾತಿದೆ, ಕ್ರೀಡೆಗಳಿಂದ ವಿಮುಖರಾಗುತ್ತಿರುವ ಸಂಗತಿಗಳು ಕೇಳಿಬರುತ್ತಿವೆ...

ಕಿರಣ್ ಕೊಡ್ಲಾಡಿ, ನಾಗರಿಕ

ಕಿಡಿನುಡಿ



ಇನ್ನು ಮುಂದೆ ನೇಮಕಾತಿಗೆ ಅರ್ಜಿ ಕರೆಯುವಾಗ ನೇರವಾಗಿ ಎಫ್‌ಡಿಎಗೆ ₹ 20 ಲಕ್ಷ, ಎಸ್‌ಡಿಎಗೆ ₹ 15 ಲಕ್ಷ, ಪಿಎಸ್‌ಐಗೆ ₹ 50 ಲಕ್ಷ ಅಂತ ಸೂಚನೆ ಕೊಡಬೇಕು. ನಮಗೆ ಕೊಡೋ ತಾಕತ್ತು ಇದ್ರೆ ಅರ್ಜಿ ಹಾಕ್ತೀವಿ, ಇಲ್ಲ ಅಂದ್ರೆ ಬಿಡ್ತೀವಿ. ಸುಮ್ನೆ ಅರ್ಜಿಗೆ ಹಾಕೋ ನಮ್ಮ ಹಣನಾದ್ರೂ ಉಳಿಯುತ್ತೆ.

ಮಹೇಶ್ ಹಿರೇಮಠ, ನಾಗರಿಕ

25 ವರ್ಷಗಳ ಹಿಂದೆ

ಭಾನುವಾರ, 27-4-1997

- **ಜನತಾದಳಕ್ಕೆ ಮತ್ತೆ ಹೆಗಡೆ ಸೇರ್ಪಡೆಗೆ ಲಾಲೂ ಪಣ**

ನವದೆಹಲಿ, ಏ. 26 (ಪಿಟಿಐ)– ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಒಬ್ಬ ದ್ವಿಮುಖ ವ್ಯಕ್ತಿತ್ವದ ಸಂಚುಗಾರ ಎಂದು ಜನತಾದಳದ ಅಧ್ಯಕ್ಷ ಲಾಲೂ ಪ್ರಸಾದ್ ಯಾದವ್ ಟೀಕಿಸುವುದರೊಂದಿಗೆ ಜನತಾ ದಳದೊಳಗಿನ ಆಂತರಿಕ ಕಲಹ ಉಲ್ಬಣಿಸಿತು.

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಮತ್ತು ದೇವೇಗೌಡರ ಕಡು ವೈರಿ ರಾಮಕೃಷ್ಣ ಹೆಗಡೆ ಅವರನ್ನು ಮತ್ತೆ ಪಕ್ಷಕ್ಕೆ ಸೇರಿಸಿಕೊಳ್ಳಲು ಶತಾಯಗತಾಯ ಯತ್ನಿಸುವುದಾಗಿ ಲಾಲೂ ಪಣ ತೊಟ್ಟಿರುವುದು ಕೂಡಾ ಜನತಾದಳದಲ್ಲಿ ಮುಂದೆ ನಡೆಯುವ ವಿದ್ಯಮಾನಗಳ ಸಂಕೇತದಂತಿದೆ.

ಈ ನಡುವೆ, ‘ಮತ್ತೆ ಜನತಾದಳಕ್ಕೆ ಹಿಂತಿರುಗುವ ಪ್ರಶ್ನೆಯೇ ಇಲ್ಲ’ ಎಂದು ಲೋಕಶಕ್ತಿ ಅಧ್ಯಕ್ಷರಾದ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಬೆಂಗಳೂರಿನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಹೆಗಡೆ ಅವರು ಮರಳಿ ದಳಕ್ಕೆ ಹಿಂತಿರುಗಬೇಕು ಎಂದು ಜನತಾದಳದ ಕೆಲವು ಸಚಿವರು ಹೇಳಿಕೆ ನೀಡುತ್ತಿರುವ ಹಿನ್ನೆಲೆಯಲ್ಲಿ ಅವರು ಈ ಸ್ಪಷ್ಟನೆ ನೀಡಿದರು.

50 ವರ್ಷಗಳ ಹಿಂದೆ

ಗುರುವಾರ, 27-4-1972

- **ಪೆನುಗೊಂಡ ಬಳಿ ರೈಲು ಹಳಿ ತಪ್ಪಿ 18 ಸಾವು: 41 ಜನಕ್ಕೆ ಗಾಯ**

ಬೆಂಗಳೂರು, ಏ. 26– ಪೆನುಗೊಂಡ ಬಳಿ ಬೆಂಗಳೂರು– ಹುಬ್ಬಳ್ಳಿ ಪ್ಯಾಸೆಂಜರ್ ರೈಲು ಬುಧವಾರ ಬೆಳಗಿನ ಜಾವ ಹಳಿ ತಪ್ಪಿ 18 ಮಂದಿ ಸತ್ತು, 41 ಜನರಿಗೆ ಗಾಯಗಳಾದವು.

ಗಾಯಗೊಂಡವರಲ್ಲಿ 24 ಮಂದಿಯನ್ನು ಅನಂತಪುರದಲ್ಲಿ ಆಸ್ಪತ್ರೆಗೆ ಸೇರಿಸಲಾಗಿದೆ. 37 ಮಂದಿ ಪ್ರಯಾಣಿಕರು, ನಾಲ್ವರು ರೈಲ್ವೆ ಸಿಬ್ಬಂದಿ ಗಾಯಗೊಂಡವರಲ್ಲಿ ಸೇರಿದ್ದಾರೆ.

- **ಭೂ ಹಿಡುವಳಿ: ಸಂವಿಧಾನದ 29ನೇ ತಿದ್ದುಪಡಿ ಮಸೂದೆ ಮಂಡನೆ**

ನವದೆಹಲಿ, ಏ. 26– ಭೂ ಹಿಡುವಳಿ ಮಿತಿಗಿಂತ ಹೆಚ್ಚಾಗಿರುವ ಭೂಮಿಯನ್ನು ಮಾರುಕಟ್ಟೆ ಬೆಲೆ ರೀತ್ಯ ಪರಿಹಾರ ಕೊಡದೆ ವಶಪಡಿಸಿಕೊಳ್ಳುವಂತೆ ರಾಜ್ಯಗಳಿಗೆ ಅಧಿಕಾರ ನೀಡಲು ಅವಕಾಶ ಮಾಡಿಕೊಡುವ ಸಂವಿಧಾನದ 29ನೇ ತಿದ್ದುಪಡಿ ಮಸೂದೆಯನ್ನು ಕಾನೂನು ಸಚಿವ ಎಚ್.ಆರ್. ಗೋಖಲೆ ಅವರು ಲೋಕಸಭೆಯಲ್ಲಿ ಇಂದು ಮಂಡಿಸಿದರು.

- **ಕೃಷ್ಣಾ ಜಲವಿವಾದ ತೀರ್ಪಿನ ಘಟ್ಟದಲ್ಲಿರುವಾಗ ಸಂಧಾನದ ಪ್ರಯತ್ನ ಸಲ್ಲದು: ದೇವೇಗೌಡ**

ಬೆಂಗಳೂರು, ಏ. 26– ‘ಕೃಷ್ಣಾ ಜಲ ವಿವಾದ ಪಂಚಾಯ್ತಿಯ ಮುಂದೆ ತೀರ್ಪಿನ ಘಟ್ಟದಲ್ಲಿರುವಾಗ ಸಂಧಾನದ ಪ್ರಯತ್ನ ಸಲ್ಲದು’ ಎಂದು ವಿರೋಧ ಪಕ್ಷದ ನಾಯಕ ಶ್ರೀ ಎಚ್.ಡಿ. ದೇವೇಗೌಡ ಹೇಳಿದ್ದಾರೆ.

‘ಈ ಕ್ರಮವು ಪಂಚಾಯ್ತಿ ಮುಂದೆ ವಾದಿಸು ತ್ತಿರುವ ನಮ್ಮ ಅಧಿಕಾರಿಗಳು ಮತ್ತು ಕಾನೂನು ಪಂಡಿತರನ್ನು ಅಧೀರರನ್ನಾಗಿ ಮಾಡಲಿದೆ’ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಶಾಂತಿ, ಸೌಹಾರ್ದಕ್ಕಾಗಿ ಕಾದಿದೆ ಕರ್ನಾಟಕ; ಬೇಕಾಗಿದೆ ಸಹಬಾಳ್ವೆ

ಖೆಡ್ಡಾದಲ್ಲಿ ಬಿದ್ದ ಪ್ರತಿಪಕ್ಷಗಳು



ಅನುಸಂಧಾನ

ರವೀಂದ್ರ ಭಟ್ಟ

ವಿರೋಧ ಪಕ್ಷಗಳು ತೋಡಿದ ಖೆಡ್ಡಾದಲ್ಲಿ ಆಡಳಿತ ಪಕ್ಷ ಬೀಳುವುದು ಸಾಮಾನ್ಯ. ಅಂತಹ ಘಟನೆಗಳು ಕರ್ನಾಟಕದಲ್ಲಿ ಸಾಕಷ್ಟು ನಡೆದಿವೆ. ಆಡಳಿತ ಪಕ್ಷವನ್ನು ಮಣಿಸಲು ಪ್ರತಿಪಕ್ಷಗಳು ಪಟ್ಟು ಬಿಗಿ ಮಾಡುವುದೂ ಹೊಸತೇನೂ ಅಲ್ಲ. ಚುನಾವಣೆ ಹತ್ತಿರಕ್ಕೆ ಬಂದಾಗ ಆಡಳಿತ ಪಕ್ಷವನ್ನು ಬೆದರಿಸುವ ರೀತಿಯಲ್ಲಿ ವಿರೋಧ ಪಕ್ಷಗಳು ನಡೆದುಕೊಳ್ಳುವುದೂ ಸಹಜ. ಆದರೆ ಕರ್ನಾಟಕದಲ್ಲಿ ಈ ಬಾರಿ ಪರಿಸ್ಥಿತಿ ಕೊಂಚ ಭಿನ್ನವಾಗಿದೆ. ಆಡಳಿತ ಪಕ್ಷ ತೋಡಿದ ಖೆಡ್ಡಾದಲ್ಲಿ ವಿರೋಧ ಪಕ್ಷಗಳು ಬಿದ್ದಿವೆ. ಸುಲಭಕ್ಕೆ ಮೇಲೆ ಬರಲು ಸಾಧ್ಯವಾಗದಂತೆ ಬಾಣದ ಮೇಲೆ ಬಾಣಗಳನ್ನು ಆಡಳಿತ ಪಕ್ಷ ಬಿಡುತ್ತಿದೆ. ಆ ಪಕ್ಷದ ಬತ್ತಳಿಕೆಯಲ್ಲಿ ಇನ್ನೂ ಸಾಕಷ್ಟು ಬಾಣಗಳು ಇವೆಯಂತೆ. ಯಾವ ಬಾಣ ಯಾವಾಗ ಹೊರಕ್ಕೆ ಬರುತ್ತದೆ ಎಂದು ಪ್ರತಿಪಕ್ಷಗಳು ಆತಂಕದಿಂದ ಕಾಯುವಂತಾಗಿದೆ. ಆದರೆ ಒಂದು ಮಾತು ಸತ್ಯ. ಆಡಳಿತ ಪಕ್ಷ ಬಿಡುತ್ತಿರುವ ಬಾಣಗಳಾಗಲೀ ವಿರೋಧ ಪಕ್ಷಗಳ ಪ್ರತಿ ಬಾಣಗಳಾಗಲೀ ಯಾವುದೂ ಜನೋಪಯೋಗಿ ಅಲ್ಲ.

ಕೊಂಚ ಹಿಂದಕ್ಕೆ ಹೋಗಿ. ಕಾಂಗ್ರೆಸ್ ಪಕ್ಷ ಮೇಕೆದಾಟು ಯೋಜನೆಗೆ ಆಗ್ರಹಿಸಿ ಪಾದಯಾತ್ರೆ ನಡೆಸುತ್ತಿದ್ದಾಗ ರಾಜ್ಯದ ರಾಜಕೀಯ ಹೇಗಿತ್ತು ಎಂದು ನೆನಪಿಸಿಕೊಳ್ಳಿ. ಮೇಕೆದಾಟು ಪಾದಯಾತ್ರೆಗೆ ಜನರಿಂದ ಅತ್ಯುತ್ತಮ ಪ್ರತಿಕ್ರಿಯೆ ಲಭ್ಯವಾಯಿತು. ಕಾಂಗ್ರೆಸ್ ಪಕ್ಷ ಇನ್ನೇನು ಅಧಿಕಾರಕ್ಕೆ ಬರುತ್ತದೆ ಎಂಬ ಉಮೇದು ಕೂಡ ಆ ಪಕ್ಷದ ನಾಯಕರಲ್ಲಿ ಕಾಣಿಸಿಕೊಂಡಿತ್ತು. ಮೇಕೆದಾಟು ಪಾದಯಾತ್ರೆಗೆ ಸಂಬಂಧಿಸಿದಂತೆ ಬಿಜೆಪಿ ನಾಯಕರು ಪ್ರತಿಕ್ರಿಯೆ ನೀಡಲು ಶುರುಮಾಡಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹಿತ ಅವರ ಸಂಪುಟದ ಬಹುತೇಕ ಸಚಿವರು ಈ ಬಗ್ಗೆ ಮಾತನಾಡಲು ಆರಂಭಿಸಿದರು. ಸಚಿವ ಗೋವಿಂದ ಕಾರಜೋಳ ಎಲ್ಲ ಪತ್ರಿಕೆಗಳಿಗೂ ಜಾಹೀರಾತು ನೀಡಿ, ಮೇಕೆದಾಟು ಯೋಜನೆ ಬಗ್ಗೆ ಕಾಂಗ್ರೆಸ್ ಪಕ್ಷವನ್ನು ಸಿಲುಕಿಸಲು ಯತ್ನಿಸಿದರು. ಆದರೂ ಕಾಂಗ್ರೆಸ್ ಜಗ್ಗಲಿಲ್ಲ. ಕೋವಿಡ್ ಮಾರ್ಗಸೂಚಿ ಇದ್ದರೂ ಪಾದಯಾತ್ರೆ ಆರಂಭವಾಯಿತು. ಕೋವಿಡ್ ಮೂರನೇ ಅಲೆ ಹೆಚ್ಚಾಗುತ್ತಿದ್ದಂತೆ ಪಾದಯಾತ್ರೆಗೆ ತಾತ್ಕಾಲಿಕ ಬ್ರೇಕ್ ಹಾಕಿದರೂ ನಂತರ ಮತ್ತೆ ನಡೆಯಿತು. ಆ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರ ಉಮೇದು ಎಷ್ಟಿತ್ತೆಂದರೆ, ಉತ್ತರ ಕರ್ನಾಟಕದಲ್ಲಿ ಮಹದಾಯಿ ಪಾದಯಾತ್ರೆ ನಡೆಸುವುದಾಗಿಯೂ ಪಕ್ಷ ಪ್ರಕಟಿಸಿತು. ಒಮ್ಮೆ ಮೇಕೆದಾಟು ಪಾದಯಾತ್ರೆ ನಿಂತು ಮತ್ತೊಮ್ಮೆ ಪಾದಯಾತ್ರೆ ಶುರುವಾಗುವ ನಡುವಿನ ಅಂತರದಲ್ಲಿ ಬಿಜೆಪಿ ಆಟ ಶುರು ಮಾಡಿತು.

ಮೇಕೆದಾಟು ಪಾದಯಾತ್ರೆ ಯಶಸ್ಸಿನಿಂದ ಕಾಂಗ್ರೆಸ್ ತೇಲುತ್ತಿರುವಾಗಲೇ ಉಡುಪಿಯಲ್ಲಿ ಹಿಜಾಬ್ ಗಲಾಟೆ ಆರಂಭವಾಯಿತು. ಅಲ್ಲಿಗೆ ಕಾಂಗ್ರೆಸ್ ಆಟ ಮುಕ್ತಾಯವಾಗಿ ಬಿಜೆಪಿ ಆಟ ಆರಂಭವಾಯಿತು. ರಾಜ್ಯದ ರಾಜಕೀಯ ಸ್ಥಿತಿಯೂ ಉಲ್ಟಾಪಲ್ಟಾ ಆಯಿತು. ಹಿಜಾಬ್ ಗಲಾಟೆ ಆಕಸ್ಮಿಕವಲ್ಲ. ಆಡಳಿತ ಪಕ್ಷ ಕ್ರಿಯೆ ನಡೆಸಲು ಆರಂಭಿಸಿತು. ಪ್ರತಿಪಕ್ಷಗಳು ಪ್ರತಿಕ್ರಿಯೆ ನೀಡಲು ತೊಡಗಿದವು. ಬಿಜೆಪಿ ಮತ್ತು ಅದರ ಸಹವರ್ತಿ ಸಂಘಟನೆಗಳು ಹಿಜಾಬ್ ವಿವಾದವನ್ನು ದೊಡ್ಡದು ಮಾಡುತ್ತಿದ್ದಂತೆ ಅದಕ್ಕೆ ಪ್ರತಿಕ್ರಿಯೆ ನೀಡುವುದಷ್ಟೇ ಕಾಂಗ್ರೆಸ್ ಕೆಲಸವಾಯಿತು. ಹಿಜಾಬ್ ಹಿಂದೆಯೇ ಹಲಾಲ್ ಬಂತು. ಆಜಾನ್ ಬಂತು. ಮುಸ್ಲಿಂ ವ್ಯಾಪಾರಿಗಳಿಗೆ ಬಹಿಷ್ಕಾರ ಹಾಕಿದ್ದಾಯಿತು. ಹುಬ್ಬಳ್ಳಿಯಲ್ಲಿ ಕೋಮು ಗಲಭೆಯಾಯಿತು. ಒಂದರ ನಂತರ ಒಂದು ಬಾಣಗಳು ಬರುತ್ತಲೇ ಇದ್ದವು. ಅದಕ್ಕೆಲ್ಲಾ ಪ್ರತಿಕ್ರಿಯೆ ನೀಡುವುದರಲ್ಲಿಯೇ ಪ್ರತಿಪಕ್ಷಗಳ ಸಮಯ ವ್ಯರ್ಥವಾಗತೊಡಗಿತು. ಅಲ್ಲಿಗೆ ವಿರೋಧ ಪಕ್ಷಗಳು ಖೆಡ್ಡಾಕ್ಕೆ ಬಿದ್ದಂತಾಯಿತು. ಮಹದಾಯಿ ಪಾದಯಾತ್ರೆ ಮರೆತೇಹೋಯಿತು. ಬೆಲೆ ಏರಿಕೆಯೂ ನೆನಪಾಗಲಿಲ್ಲ.

ಆಡಳಿತ ಪಕ್ಷದ ನಡೆ ಎಷ್ಟೊಂದು ಸೂಕ್ಷ್ಮವಾಗಿತ್ತು, ಭಾವನಾತ್ಮಕವಾಗಿತ್ತು ಎಂದರೆ, ಮೇಲ್ನೋಟಕ್ಕೆ ಯಾರಿಗೂ ಇದರಲ್ಲಿ ತಪ್ಪಿದೆ ಎಂದು ಅನ್ನಿಸುತ್ತಲೇ ಇರಲಿಲ್ಲ. ಜನರಿಗೆ ಕೂಡ ಅನುಮಾನ ಬರಲಿಲ್ಲ. ಈ ಆಂದೋಲನ ಎಷ್ಟೊಂದು ಪ್ರಭಾವಶಾಲಿ ಆಗಿತ್ತು ಎಂದರೆ, ಬೆಲೆ ಏರಿಕೆ, ನಿರುದ್ಯೋಗ, ಕುಡಿಯುವ ನೀರಿನ ಸಮಸ್ಯೆಗಳೆಲ್ಲಾ ಗೌಣವಾಗತೊಡಗಿದವು. ಬದುಕಿಗಿಂತ ಭಾವನೆಗೇ ಬೆಲೆ ಹೆಚ್ಚಾಗತೊಡಗಿತು. ‘ನೀವು ಮುಸ್ಲಿಂ ಪರ, ನೀವು ಮುಸ್ಲಿಂ ಪರ’ ಎಂದು ದೂರುವ ಅವರ ಪರಿ ಹೇಗಿತ್ತೆಂದರೆ, ಪ್ರತಿಪಕ್ಷಗಳು ‘ಇಲ್ಲ, ನಾವು ಕೋಮು ಸೌಹಾರ್ದದ ಪರ’ ಎನ್ನುವ ಬದಲು ‘ಹೌದು, ನಾವು ಮುಸ್ಲಿಂ ಪರ’ ಎಂದೇ ಹೇಳುವಂಥ ಸ್ಥಿತಿ ನಿರ್ಮಿಸಿಬಿಟ್ಟರು.

ಈ ನಡುವೆ ಬೆಲೆ ಏರಿಕೆ ಬಗ್ಗೆ ಕಾಂಗ್ರೆಸ್ ಪಕ್ಷ ರಾಜ್ಯದಾದ್ಯಂತ ಹೋರಾಟ ನಡೆಸುವುದಾಗಿ ಪ್ರಕಟಿಸಿತು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿಯೂ ಹೋರಾಟದ ರೂಪುರೇಷೆ ಸಿದ್ಧವಾಯಿತು. ಆದರೆ ಬಿಜೆಪಿ ಮತ್ತು ಅದರ ಮಿತ್ರ ಸಂಘಟನೆಗಳು ಹೊರಬಿಡುತ್ತಿದ್ದ ಬಾಣಗಳ ಸುರಿಮಳೆಯಲ್ಲಿ ಕಾಂಗ್ರೆಸ್ ಹೋರಾಟ ಮೇಲೆ ಬರಲೇ ಇಲ್ಲ. ಜನಸ್ಪಂದನೆಯೂ ಸೂಕ್ತ ಪ್ರಮಾಣದಲ್ಲಿ ಸಿಗಲಿಲ್ಲ. ಕೋಮುವಾದಿಗಳು ವಿಜೃಂಭಿಸುತ್ತಿದ್ದರೂ ಕರ್ನಾಟಕದ ಸೌಹಾರ್ದ ಪರಂಪರೆಯನ್ನು ನೆನಪಿಸುವಂತಹ ಪ್ರಯತ್ನ ಪ್ರತಿಪಕ್ಷಗಳಿಂದ ದೊಡ್ಡಮಟ್ಟದಲ್ಲಿ ಆಗಲಿಲ್ಲ. ಕೋಮು ಭಾವನೆ ಉದ್ರೇಕಿಸುವ ಪ್ರಯತ್ನವನ್ನು ಎಷ್ಟೇ ಮಾಡಿದರೂ ನಾವು ಅದಕ್ಕೆ ಜಗ್ಗುವುದಿಲ್ಲ ಎಂಬುದನ್ನು ಸಾಬೀತುಪಡಿಸಲು ಪ್ರತಿಪಕ್ಷಗಳು ಸೋತವು. ಜೆಡಿಎಸ್ ಪಕ್ಷ ಕೂಡ ರಾಜ್ಯದಲ್ಲಿ ನೀರಾವರಿ ಯೋಜನೆಗಾಗಿ ಜನತಾ ಜಲಧಾರೆ ಕಾರ್ಯಕ್ರಮ ನಡೆಸಲು ಮುಂದಾಯಿತು. ಜಲಧಾರೆಗಿಂತ ಹೆಚ್ಚಾಗಿ ಕೋಮು ಗಲಾಟೆಯ ಬಗ್ಗೆ ಪ್ರತಿಕ್ರಿಯೆ ನೀಡುವುದರಲ್ಲಿಯೇ ಆ ಪಕ್ಷದ ಸಮಯ ವ್ಯರ್ಥವಾಗತೊಡಗಿತು.

ಇದರ ನಡುವೆ ಶೇ 40ರಷ್ಟು ಕಮಿಷನ್ ವಿಚಾರ ಜೋರಾಯಿತು. ಸಚಿವ ಸ್ಥಾನಕ್ಕೆ ಕೆ.ಎಸ್.ಈಶ್ವರಪ್ಪ ಅವರ ರಾಜೀನಾಮೆ ಕೊಡಿಸುವಲ್ಲಿ ಕಾಂಗ್ರೆಸ್ ಪಕ್ಷ ಯಶಸ್ಸು ಗಳಿಸಿತು. ಆದರೆ ಆ ವಿಚಾರ ತಾರ್ಕಿಕ ಅಂತ್ಯ ಪಡೆಯುವುದಕ್ಕೆ ಮೊದಲೇ ಹುಬ್ಬಳ್ಳಿ ಕೋಮು ಗಲಭೆ ಜೋರಾಯಿತು. ‘ಈಶ್ವರಪ್ಪ ಬಂಧನವಾಗುವವರೆಗೆ ನಮ್ಮ ಹೋರಾಟ’ ಎಂದು ಕಾಂಗ್ರೆಸ್ ಗರ್ಜಿಸಿತ್ತಾದರೂ ಹುಬ್ಬಳ್ಳಿ ಗಲಭೆ ಎಲ್ಲವನ್ನೂ ಮರೆಸಿತು. ಪಿಎಸ್ಐ ನೇಮಕಾತಿ ಹಗರಣ ಹೊರಕ್ಕೆ ಬಿತ್ತು. ನೇಮಕಾತಿ ಹಗರಣಗಳು ಒಂದರ ಹಿಂದೆ ಒಂದು ಹೊರಬರುತ್ತಲೇ ಇವೆ. ಅವನ್ನು ರಾಜಕೀಯವಾಗಿ ಬಳಸಿಕೊಳ್ಳಲು ಪ್ರತಿಪಕ್ಷಗಳಿಗೆ ಸಮಯವೇ ಸಿಗುತ್ತಿಲ್ಲ. ಪಿಎಸ್ಐ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಆಡಿಯೊವೊಂದನ್ನು ಬಿಡುಗಡೆ ಮಾಡಿದ್ದೇ ತಡ, ಅವರಿಗೇ ವಿಚಾರಣೆಗೆ ಬರಲು ನೋಟಿಸ್ ನೀಡಲಾಗಿದೆ. ಈಗ ಅದಕ್ಕೆ ಪ್ರತಿಕ್ರಿಯೆ ನೀಡಲು ಕಾಂಗ್ರೆಸ್ ಮುಖಂಡರು ಮುಂದಾದರು. ಇದು ಹೀಗೆಯೇ ಮುಂದುವರಿಯುತ್ತಿದೆ.

ಇವೆಲ್ಲಾ ರಾಜಕೀಯಗಳು, ಚುನಾವಣೆ ಹೊಸ್ತಿಲಲ್ಲಿ ಇವೆಲ್ಲಾ ಮಾಮೂಲು ಎಂದುಕೊಳ್ಳಬಹುದು. ಆದರೆ ರಾಜ್ಯದ ಮತದಾರರಿಗೆ ಇದ್ಯಾವುದೂ ಬೇಕಿಲ್ಲ. ಅವರು ಬೆಲೆ ಏರಿಕೆಯ ಬೇಗೆಯಲ್ಲಿ ಬೇಯುತ್ತಿದ್ದಾರೆ. ಬೆಲೆ ಏರಿಕೆಯನ್ನು ತಡೆಯುವಂತಹ ಭಗೀರಥ ಯಾರಾದರೂ ಬಂದಾರೆಯೇ ಎಂದು ಎದುರು ನೋಡುತ್ತಿದ್ದಾರೆ. ರಾಜ್ಯ ದಲ್ಲಿ ನೆಮ್ಮದಿಯ ವಾತಾವರಣ ಸೃಷ್ಟಿಯಾಗಿ, ತಮ್ಮಷ್ಟಕ್ಕೆ ತಾವು ದುಡಿದು ತಿನ್ನುವ ಅವಕಾಶಕ್ಕಾಗಿ ಅವರು ಕಾಯುತ್ತಿದ್ದಾರೆ. ಅವರಿಗೆ ಹಿಜಾಬ್ ಬೇಡ, ಅವರಿಗೆ ಬೇಕಾಗಿರುವುದು ಜಾಬ್. ಕೋಮು ಸಂಘರ್ಷ ಅವರಿಗೆ ಬೇಡ. ಅವರಿಗೆ ಬೇಕಾಗಿರುವುದು ಸಹಬಾಳ್ವೆ. ಬೆಳಿಗ್ಗೆ ಬೆಳಿಗ್ಗೆ ಆಜಾನ್ ಕೇಳಿಬರಲಿ ಅಥವಾ ಹನುಮಾನ್ ಚಾಲೀಸಾ ಕೇಳಿಬರಲಿ, ಅದಕ್ಕೆಲ್ಲಾ ಕಿವಿಗೊಡಲು ಅವರಿಗೆ ಪುರಸತ್ತು ಇಲ್ಲ. ಅವರಿಗೆ ಬೇಕಾಗಿದ್ದು ದುಡಿಯುವ ಕೈಗೆ ಕೆಲಸ. ಅದಕ್ಕೆ ಶಾಂತಿ ನೆಲೆಸಬೇಕು. ಸೌಹಾರ್ದ ಮುಂದುವರಿಯಬೇಕು. ಅದಕ್ಕಾಗಿ ಕಾದಿದೆ ಕರ್ನಾಟಕ.

ಆಡಳಿತ ಪಕ್ಷ ಬಿಡುವ ಬಾಣಗಳಿಗೆ ಪ್ರತಿಕ್ರಿಯೆ ನೀಡುವುದನ್ನು ನಿಲ್ಲಿಸಿ ಅಥವಾ ನಿರ್ಲಕ್ಷಿಸಿ ಜನರ ಕರೆಗೆ ಓಗೊಡದಿದ್ದರೆ ಮತದಾರರು ಕೂಡ ಸೂಕ್ತ ಸಮಯದಲ್ಲಿ ಸೂಕ್ತ ಪ್ರತಿಕ್ರಿಯೆ ನೀಡುತ್ತಾರೆ.



ಚುರುಮುರಿ



ಬಾಯ್ಕಾಟ್ ಟು ಬ್ಲ್ಯಾಕ್‌ಮೇಲ್!

• ಗುರು ಪಿ.ಎಸ್.

ರಾಜಕೀಯಕ್ಕೆ ಬರೋ ಇಂಟರೆಸ್ಟ್ ಇರುವ ಯುವಸಮೂಹಕ್ಕೆ ಟ್ರೈನಿಂಗ್ ಕೊಡೋದಕ್ಕಾಗಿ ‘ಪೊಲಿಟಿಕಲ್ ಪಾಠಶಾಲೆ’ ಆರಂಭಿಸಿದ್ದ ಮುದ್ದಣ್ಣ, ‘ಸಂಪತ್ತಿಗೆ ಸವಾಲ್’ ಮಂಜುಳಾ ಅವರ ಜೆಂಟ್ಸ್ ವರ್ಷನ್‌ನಲ್ಲಿ ‘ಬಿಕನಾಸಿ ಹಳೆ ಬಿಕನಾಸಿ’ ಅಂತ ಬಯ್ಯೋದನ್ನು ಹೇಳಿಕೊಡ್ತಿದ್ದ.

‘ಇದೇನ್ ಮುದ್ದಣ್ಣ, ಎಷ್ಟ್ ಒಳ್ಳೊಳ್ಳೆ ಬೈಗುಳಗಳಿವೆ. ಅವನ್ನೆಲ್ಲ ಬಿಟ್ಟು ಇಷ್ಟು ಸಾಫ್ಟ್ ಬೈಗುಳ ಹೇಳಿಕೊಡ್ತಿದ್ದೀಯಲ್ಲ...’ ಅಸಮಾಧಾನದಿಂದಲೇ ಕೇಳಿದ ಹಿತೈಷಿ ವಿಜಿ.

‘ಇದರಲ್ಲಿ ನಿನಗೆ ನನ್ನಷ್ಟು ಅನುಭವ ಇಲ್ಲ ಸುಮ್ನಿರು. ಈಗೇನಿದ್ದರೂ ಇಂಗ್ಲಿಷ್‌ನ ‘ಬಿ’ಯಿಂದ ಸ್ಟಾರ್ಟ್ ಆಗೋ ಪದಗಳೇ ಟ್ರೆಂಡಿಂಗ್‌ನಲ್ಲಿ ಇರೋದು...’

‘ಹೌದಾ... ಅದ್ಹೇಗೆ...?’

‘ಮೊದಲನೇ ಉದಾಹರಣೆ ಬಾಯ್ಕಾಟ್. ಬಟ್ಟೆ, ಮಾಂಸ, ಮಾವು ನಂತರ ಚಿನ್ನ... ಹೀಗೆ ಬಾಯ್ಕಾಟ್ ಅನ್ನೋರಿಗೆಲ್ಲ ಎಷ್ಟ್ ಪಬ್ಲಿಸಿಟಿ ಸಿಗ್ತಿದೆ ನೋಡು’.

‘ಅದೂ ಹೌದು. ಬಾಯ್ಕಾಟ್ ಅನ್ನೋರೇ ಬಾಸ್ ಅನ್ನೋ ಹಾಗಾಗಿದೆ. ಮುಂದೆ...’

‘ಎರಡನೇದು ಬುಲ್ಡೋಜರ್. ಈಗ ಅದು ನಮ್ಮ ರಾಷ್ಟ್ರೀಯ ವಾಹನ. ಅದರ ಬಗ್ಗೆ ಯೂಥ್‌ಗೆ ಹೇಳದಿದ್ರೆ ಹೇಗೆ ಹೇಳು? ‘ಬುಲ್ಡೋಜರ್– ಉಸಿರೆತ್ತಿದರೆ ನೆಲಸಮ’ ಅಂತ ಸಪರೇಟ್ ಚಾಪ್ಟರ್ರೇ ಇದೆ ಅದರ ಬಗ್ಗೆ...’

‘ಮೂರನೆಯದು ಬ್ಲ್ಯಾಕ್‌ಮೇಲ್. ಮೇಲಿನಿಂದ ಹಿಡಿದು ಕೆಳಗೆ ಇರೋರನ್ನೆಲ್ಲ ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಬೇಕು ಅಂದ್ರೆ ಈ ಅಸ್ತ್ರ ಬೇಕೇ ಬೇಕು. ಯಾರನ್ನು, ಯಾವಾಗ, ಯಾವ ಯಾವ ರೀತಿ ಬ್ಲ್ಯಾಕ್‌ಮೇಲ್ ಮಾಡಬೇಕು ಅನ್ನೋದನ್ನ ಇದರಲ್ಲಿ ಹೇಳಿಕೊಡ್ತೇವೆ...’

‘ಹೇಗೆ ಮಾತಾಡಬೇಕು ಅನ್ನೋದನ್ನ ಮಾತ್ರ ಹೇಳಿಕೊಡ್ತೀರೋ, ಹೊಸ ಪಾರ್ಟಿ ಕಟ್ಟೋರಿಗೆ ಪಕ್ಷದ ಹೆಸರು ಕೂಡ ಸೂಚಿಸ್ತೀರೋ? ಮತ್ತೆ ಇದರಲ್ಲೂ ಕಂಡೀಷನ್‌ಗಳೇನಾದರೂ ಇದಾವಾ...?’

‘ಇದೆ, ಪಾರ್ಟಿ ಹೆಸರು ಕೂಡ ‘ಬಿ’ಯಿಂದ ಸ್ಟಾರ್ಟ್ ಆಗಬೇಕು...!’

ಸಂಗತ

ಕಲಿಯುತ್ತಲೇ ಇರಬೇಕು ಕಲಿಸುವವರೂ!

ಮಕ್ಕಳ ಮೌಲ್ಯಮಾಪನದಂತೆ ಪ್ರತಿವರ್ಷವೂ ಶಿಕ್ಷಕರ ಮೌಲ್ಯಮಾಪನವೂ ಆಗಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ಕೋವಿಡ್ ಕಾರಣಕ್ಕೆ ಎರಡು ವರ್ಷ ಭೌತಿಕ ತರಗತಿಗಳು ನಡೆಯದೆ ಮಕ್ಕಳ ಶಿಕ್ಷಣಕ್ಕೆ ಉಂಟಾಗಿರುವ ಹಿನ್ನಡೆ ಸರಿದೂಗಿಸಲು ಶಿಕ್ಷಣ ಇಲಾಖೆ ದೇಶದಲ್ಲಿಯೇ ಮೊದಲ ಬಾರಿಗೆ ಜಾರಿಗೊಳಿಸಿರುವ ‘ಕಲಿಕಾ ಚೇತರಿಕೆ’ ಯೋಜನೆ ಇನ್ನೇನು ಶುರುವಾಗಲಿದೆ. ಹಾಗೆಯೇ ಶಿಕ್ಷಕರ ಬೋಧನಾ ಚೇತರಿಕೆ ಹೇಗಿದೆ?

ಕೆಲವು ದಿನಗಳ ಹಿಂದೆ ಶಿಕ್ಷಕರೊಬ್ಬರು ತಮ್ಮ ಮೇಲಿನ ಅಧಿಕಾರಿಗೆ ಬರೆದ ಪತ್ರದಲ್ಲಿ ಹತ್ತೆಂಟು ತಪ್ಪುಗಳಿದ್ದವು. ‘ಕಲಿಸುವ ನೀವೇ ಇಷ್ಟೊಂದು ತಪ್ಪು ಮಾಡಿರುವಾಗ ಹೇಗೆ ಕಲಿಸುವಿರಿ?’ ಎಂದು ಅಧಿಕಾರಿ ಕೇಳಿದ್ದರು. ಶಿಕ್ಷಕರ ಬರಹ ಶುದ್ಧವಾಗಿರಬೇಕು. ಮಾತನಾಡುವ ಭಾಷೆ ಪರಿಣಾಮಕಾರಿಯಾಗಿರಬೇಕು. ವಿಷಯಜ್ಞಾನ ಸ್ಪಷ್ಟವಾಗಿರಬೇಕು. ಇದು ಸತತ ಅಧ್ಯಯನದಿಂದ ಮಾತ್ರ ಸಾಧ್ಯ.

ಕಲಿಸುವ ಶಿಕ್ಷಕರು ಕಲಿಯುವುದನ್ನು ಎಂದೋ ನಿಲ್ಲಿಸಿಬಿಟ್ಟಿದ್ದಾರೆ ಎಂಬ ಮಾತು ಆಗಾಗ ಕೇಳಿಬರುತ್ತದೆ. ಶಿಕ್ಷಕ ಸದಾ ವಿದ್ಯಾರ್ಥಿಯೂ ಆಗಿರಬೇಕು. ಹೊಸ ಸಂಶೋಧನೆಗಳು, ಬೆಳವಣಿಗೆಗಳು ಓದಿನಿಂದ ಮಾತ್ರ ಅರಿವಿಗೆ ಬರುತ್ತವೆ. ಉರಿಯುವ ದೀಪ ತಾನು ಉರಿಯದೇ ಬೆಳಕು ಕೊಡುವುದಾದರೂ ಹೇಗೆ?


ನೀವು ಅಪ್‌ಡೇಟ್ ಆಗಬೇಕು, ಹೊಸದನ್ನು ಕಲಿಯಬೇಕು ಅನ್ನುವ ಹೇಳಿಕೆಗಳನ್ನು ಕೆಲವು ಶಿಕ್ಷಕರು ಸಕಾರಾತ್ಮಕವಾಗಿ ಸ್ವೀಕರಿಸುವ ಮನಃಸ್ಥಿತಿಯಲ್ಲಿ ಇಲ್ಲ. ಸಮಯವೇ ಇಲ್ಲ, ಕಚೇರಿಯ ಕ್ಲಾರ್ಕ್ ಆಗಿದ್ದೇವೆ ಎಂದೆಲ್ಲ ಹೇಳಿ ಜಾರಿಕೊಳ್ಳುತ್ತಿದ್ದಾರೆ.

ಅನೇಕ ಮಕ್ಕಳಿಗೆ ಸರಿಯಾಗಿ ಓದಲು- ಬರೆಯಲು ಬರುವುದಿಲ್ಲ ಎಂಬ ದೂರಿದೆ. ಎಸ್‌ಎಸ್‌ಎಲ್‌ಸಿ ಪಾಸಾದ ಮಗು ತಪ್ಪಿಲ್ಲದೆ ಬರೆಯಲು ಹೆಣಗಾಡುತ್ತದೆ. ಆದರೆ ಪ್ರತಿಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಉತ್ತಮವಾಗಿಯೇ ಬರುತ್ತದೆ. ಪರೀಕ್ಷೆಯಲ್ಲಿ ಎಲ್ಲಾ ಶಾಲೆಗಳು ‘ಎ’ ಗ್ರೇಡ್ ಪಡೆಯುತ್ತವೆ. ಅದು ಹೇಗೆ ಸಾಧ್ಯ? ಇದು ಖಂಡಿತ ಯೋಚಿಸಬೇಕಾದ ಸಂಗತಿ.

ಮಕ್ಕಳ ಮೌಲ್ಯಮಾಪನದಂತೆ ಪ್ರತಿವರ್ಷವೂ ಶಿಕ್ಷಕರ ಮೌಲ್ಯಮಾಪನವೂ ಆಗಬೇಕು. ಒಂದು, ಮಕ್ಕಳ ಕಡೆಯಿಂದ ಮತ್ತು ಇನ್ನೊಂದು, ಇಲಾಖೆಯ ಕಡೆಯಿಂದ. ಶಿಕ್ಷಕರನ್ನು ಮಕ್ಕಳು ಪರೀಕ್ಷಿಸುವ ಪರಿಪಾಟ ತುಂಬ ವಿಶೇಷವಾದದ್ದು. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶವೊಂದನ್ನೇ ಆಧರಿಸಿ ಶಿಕ್ಷಕರ ಮೌಲ್ಯಮಾಪನ ನಿರ್ಧರಿಸುವ ಕ್ರಮ ಬಿಡಬೇಕು. ಅವರ ಓದುವಿಕೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ, ಸಾಮಾಜಿಕ ಸ್ಪಂದನೆ ಇವುಗಳನ್ನು ಗಮನಿಸಬೇಕು.

ಶಿಕ್ಷಕರು ಬೋಧಿಸುವ ವಿಷಯದ ಬಗೆಗೆ ಇಲಾಖೆ ಆಗಾಗ ಕಡ್ಡಾಯವಾಗಿ ಮೌಲ್ಯಮಾಪನ ಮಾಡಬೇಕು. ಶಿಕ್ಷಕರ ಕಲಿಸುವ ಸಾಮರ್ಥ್ಯ ಎಷ್ಟಿದೆ ಎಂಬುದನ್ನು ಅಳೆದು, ನ್ಯೂನತೆ ಇರುವ ಕಡೆ ಕಡ್ಡಾಯ ತರಬೇತಿ ಆಯೋಜಿಸಬೇಕು ಮತ್ತು ತರಬೇತಿಗೆ ತಜ್ಞರು, ಅನುಭವಿಗಳು, ವಿಶೇಷ ಸಾಧಕರು ಮಾರ್ಗದರ್ಶನ ಮಾಡಬೇಕು.

ಇಬ್ಬರು ಶಿಕ್ಷಕರಿದ್ದರೆ ಮೂರು ದಿನ ಒಬ್ಬರು, ಇನ್ನು ಮೂರು ದಿನ ಇನ್ನೊಬ್ಬರು ಬರುತ್ತಾರೆ. ಶಾಲೆಗೆ ಯಾವಾಗಲೋ ಬಂದು ಹೋಗುತ್ತಾರೆ. ತರಗತಿಯಲ್ಲಿ ಏನೂ ಕಲಿಸದೆ ಪುಸ್ತಕದಲ್ಲಿ ಇದ್ದದ್ದನ್ನು ಗಿಳಿಪಾಠದಂತೆ ಮಾಡಿ ಹೋಗುತ್ತಾರೆ. ಅವರ ಸ್ವಂತ ಮಕ್ಕಳು ಖಾಸಗಿ ಶಾಲೆಯಲ್ಲಿ ಕಲಿಯುತ್ತಾರೆ. ತಮ್ಮ ಮಕ್ಕಳ ಮೇಲೆ ಇರುವಷ್ಟು ಕಾಳಜಿಯನ್ನು ತಮ್ಮ ಬಳಿ ಓದುವ ವಿದ್ಯಾರ್ಥಿಗಳ ಬಗ್ಗೆ ತೋರುವುದಿಲ್ಲ. ಇಂತಹ ನೂರೆಂಟು ದೂರುಗಳು ಶಿಕ್ಷಕರ ಮೇಲಿವೆ. ಶಿಕ್ಷಕರು ಇಂತಹ ದೂರುಗಳಿಂದ ತಪ್ಪಿಸಿಕೊಳ್ಳಬೇಕು. ತಮ್ಮ ವೃತ್ತಿಯ ಘನತೆಯನ್ನು ಪ್ರಾಮಾಣಿಕತೆಯಿಂದ ಕಾಪಾಡಬೇಕು.



ಹಾಗಾದರೆ ಎಲ್ಲ ಶಿಕ್ಷಕರೂ ಹೀಗೆಯೇ? ಖಂಡಿತ ಇಲ್ಲ. ಅನೇಕ ಶಿಕ್ಷಕರು ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿ ಹೊಂದಿದ್ದಾರೆ. ಮಗು ಬಯಸುವುದಕ್ಕಿಂತ ಹೆಚ್ಚಿನದನ್ನು ಕೊಡಲು ಹಗಲೂ ರಾತ್ರಿ ಶ್ರಮಿಸುತ್ತಿದ್ದಾರೆ. ತಮ್ಮ ಕೈಯಿಂದಲೇ ಹಣ ಖರ್ಚು ಮಾಡುತ್ತಿದ್ದಾರೆ. ಹೆಚ್ಚಿನ ತರಗತಿಗಳನ್ನು ತೆಗೆದುಕೊಂಡು ಕಲಿಸುತ್ತಿದ್ದಾರೆ. ಓದಿಕೊಂಡು ಹೋಗಿ ಮಕ್ಕಳ ಮುಂದೆ ನಿಲ್ಲುತ್ತಾರೆ. ಮಕ್ಕಳಿಂದ ಏನಾದರೂ ಹೊಸದನ್ನು ಹೊರತೆಗೆಯಲು ಪ್ರಯತ್ನಿಸುತ್ತಾರೆ. ತಮ್ಮ ಎಲ್ಲಾ ಶ್ರಮವನ್ನು ಮಕ್ಕಳಿಗಾಗಿ ಧಾರೆಯೆರೆಯುತ್ತಾರೆ. ಅಂತಹವರಿಂದಲೇ ಇಂದು ಕೆಲವು ಶಾಲೆಗಳು ಉಸಿರಾಡುತ್ತಿವೆ.

ಶಿಕ್ಷಣ ಇಲಾಖೆಯು ಪಾಠಕ್ಕೆ ಸಂಬಂಧಿಸದ ಅತಿ ಭಾರದ ಕಾರ್ಯಗಳನ್ನು ಶಿಕ್ಷಕರ ಮೇಲೆ ಹೇರುತ್ತಿದೆ. ಚುನಾವಣೆ ಉಸ್ತುವಾರಿ, ಜನಗಣತಿ, ಸರ್ಕಾರಿ ಯೋಜನೆಗಳ ಪ್ರಚಾರ ಉಸ್ತುವಾರಿ, ಗಣ್ಯರ ಸ್ವಾಗತಕ್ಕೆ ವಿದ್ಯಾರ್ಥಿಗಳನ್ನು ದಿನವಿಡೀ ನಿಲ್ಲಿಸುವುದು ಶಿಕ್ಷಕರ ಹೊಣೆಗಾರಿಕೆಯಾಗಿದೆ. ಸರ್ಕಾರ ಇದಕ್ಕೆ ಬೇರೆ ವ್ಯವಸ್ಥೆ ಮಾಡಿ, ಶಿಕ್ಷಕರು ಕಲಿಸುವ ಧ್ಯಾನದಲ್ಲಿಯೇ ತೊಡಗುವಂತೆ ಬದಲಾಗುವುದು ಕೂಡ ಅವಶ್ಯವಿದೆ.

ಮಕ್ಕಳೇ ಭವಿಷ್ಯದ ಸಂಪತ್ತು. ಅವರನ್ನು ಪರಿಪೂರ್ಣ ವ್ಯಕ್ತಿಗಳನ್ನಾಗಿ ಅರಳಿಸುವುದು ಮುಖ್ಯ. ಶಾಲೆ ಹೇಗೋ ನಡೆದರೆ ಮುಗಿಯಿತು ಅನ್ನುವ ಧೋರಣೆ ಬಹಳ ಅಪಾಯಕಾರಿ.

ಕೋವಿಡ್ ಹಿನ್ನೆಲೆಯಲ್ಲಿ 2020-21 ಮತ್ತು 21-22ನೇ ಸಾಲಿನಲ್ಲಿ ಬಹುತೇಕ ದಿನಗಳಲ್ಲಿ ಶಾಲೆಗಳು ಮುಚ್ಚಿದ್ದವು. ಮಕ್ಕಳಿಗೆ ಆನ್‌ಲೈನ್ ಮೂಲಕ ಕಲಿಸಲಾಗಿದೆಯಾದರೂ ತರಗತಿಯಲ್ಲಿ ಕಲಿಸಿದಷ್ಟು ಪರಿಣಾಮಕಾರಿಯಾಗಿಲ್ಲ. ಇದನ್ನೆಲ್ಲ ಗಮನದಲ್ಲಿ ಇಟ್ಟುಕೊಂಡು, ಸ್ವತಃ ಅಧ್ಯಯನಶೀಲರಾಗಿ ಮಕ್ಕಳನ್ನು ಸಜ್ಜುಗೊಳಿಸುವುದು ಶಿಕ್ಷಕರ ಹೊಣೆಗಾರಿಕೆಯಾಗಿದೆ.

ವಾಚಕರ ವಾಣಿ

ಲಂಚವಿಲ್ಲದೆ ಕೆಲಸ: ಬೇಕು ದೃಢಸಂಕಲ್ಪ

ಹಣ ನೀಡಿದರಷ್ಟೇ ಹುದ್ದೆ ಎನ್ನುವ ಪರಿಸ್ಥಿತಿ ತಂದಿಡಲಾಗಿದೆ ಎಂದು ರೇಖಾ ನಾಯಕ್ ಅವರು ಬರೆದಿರುವುದು (ವಾ.ವಾ., ಏ. 26) ಸರಿಯಷ್ಟೆ. ಇದಕ್ಕೆ ನಾವೇ ಕಾರಣ. ನಮ್ಮ ತಂದೆ ಎ.ಚಂದ್ರಶೇಖರ್ ಮುಖ್ಯ ಎಂಜಿನಿಯರ್ ಆಗಿದ್ದರೂ ನಮ್ಮನ್ನು ಅಷ್ಟೇನೂ ಶ್ರೀಮಂತಿಕೆಯಿಂದ ಸಾಕಲಿಲ್ಲ ಎಂಬುದು, ಎಷ್ಟೋ ಮುಖ್ಯ ಎಂಜಿನಿಯರುಗಳ ಮನೆ ಮೇಲೆ ಈಚೆಗೆ ನಡೆದ ಎಸಿಬಿ ದಾಳಿಗಳನ್ನು ನೋಡಿದಾಗ ಅರಿವಿಗೆ ಬಂತು. ಈಗ ನಮ್ಮ ತಂದೆ ನಮ್ಮ ನಡುವೆ ಇಲ್ಲ. ಆದರೆ ಅವರ ಆದರ್ಶಗಳು ನಮ್ಮೊಂದಿಗೆ ಸದಾ ಇರುತ್ತವೆ. ಇತ್ತೀಚೆಗೆ ನಮ್ಮ ಮನೆಯ ಖಾತಾವನ್ನು ತಾಯಿಯ ಹೆಸರಿಗೆ ಬದಲಾವಣೆ ಮಾಡಿಸುವ ಸಂದರ್ಭದಲ್ಲಿ, ಖಾತಾದಲ್ಲಿ ಇದ್ದ ನಾನಾ ತಪ್ಪುಗಳನ್ನು ಅಲ್ಲಿನ ಅಧಿಕಾರಿಗಳು ಎತ್ತಿ ಎತ್ತಿ ತೋರಿಸುತ್ತಿದ್ದರು. ನಾನು ತಕ್ಷಣ ಸಮೀಪದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಅದನ್ನು ಅರ್ಧ ಗಂಟೆಯಲ್ಲಿ ಸರಿ ಮಾಡಿಸಿಕೊಂಡು ಬಂದು ಅವರಿಗೆ ತೋರಿಸುತ್ತಿದ್ದೆ. ಇದರಿಂದ, ಏನು ಮಾಡಿದರೂ ನನ್ನಿಂದ ಲಂಚ ಪಡೆಯಲು ಅಲ್ಲಿದ್ದವರಿಗೆ ಸಾಧ್ಯವಾಗಲಿಲ್ಲ.

ಮನೆಗೆ ಬಂದೊಡನೆ ‘ಎಷ್ಟು ತೆತ್ತು ಬಂದೆ?’ ಎಂದು ನನ್ನ ಮಾವ ಕುಚೋದ್ಯ ಮಾಡಿದಾಗ, ‘ಕಡೆಯಲ್ಲಿ ಅಲ್ಲಿದ್ದ ಒಬ್ಬ ಮೇಡಂ ಕೈಗೆ ಒಂದು ಪ್ಯಾಕೆಟ್ ಮೈಸೂರ್‌ಪಾಕ್ ಮಾತ್ರ ಕೊಟ್ಟು ಬಂದೆ, ಅದೂ ನನ್ನ ಖುಷಿಯಿಂದ ಕೊಟ್ಟದ್ದು, ಲಂಚವಲ್ಲ’ ಎಂದಾಕ್ಷಣ, ಇಡೀ ಮನೆಮಂದಿ ದಂಗುಬಡಿದಂತಾದರು. ಹಾಗಾಗಿ, ಈ ರೀತಿ ಮಾಡಲು ಸಾಧ್ಯವಿದೆ ಎಂದಾಯಿತು. ಅದಕ್ಕೆ ದೃಢಸಂಕಲ್ಪ ಬೇಕಷ್ಟೆ.

ರವಿಕಿರಣ್ ಶೇಖರ್, ಬೆಂಗಳೂರು

ಬ್ಯಾಂಕಿಂಗ್ ಉದ್ಯಮ ಹೀಗೂ ವರ್ಧಿಸಲಿ...!

ನನ್ನ ಕಿರಿಯ ಪ್ರತಿಭಾವಂತ ಮಿತ್ರನೊಬ್ಬ ಕೆಇಟಿ ಪರೀಕ್ಷೆ ಬರೆದಿದ್ದಾನೆ. ಉತ್ತಮ ರ‍್ಯಾಂಕ್ ನಿರೀಕ್ಷೆಯಲ್ಲೂ ಇದ್ದಾನೆ. ಆದರೂ ಉಪನ್ಯಾಸಕ ಹುದ್ದೆಯ ಆಸೆ ದೂರವೇ ಎನ್ನುತ್ತಾನೆ! ಒಳ್ಳೆಯ ರ‍್ಯಾಂಕ್‌ಗೆ ನೀಡಬೇಕಾದ ಲಂಚ ₹ 30 ಲಕ್ಷವಂತೆ. ರ‍್ಯಾಂಕ್‌ನ ಅನುಪಾತ ಆಧರಿಸಿ ಲಂಚದ ಮೊತ್ತವೂ ಹೆಚ್ಚಾಗುವ ಒಳಸುಳಿವಿದೆಯಂತೆ.

ಈ ಸವಾಲನ್ನು ಬ್ಯಾಂಕಿಂಗ್ ಉದ್ಯಮ ಹೊಸ ವೆಂಚರ್ ಮಾಡಿಕೊಳ್ಳಬಾರದೇಕೆ? ಪ್ರತಿಯೊಂದು ಖಾಸಗಿ, ಸಹಕಾರಿ, ಸರ್ಕಾರಿ ಬ್ಯಾಂಕಿಗೂ ಇಂತಿಷ್ಟು ‘ಉದ್ಯೋಗ ಲಂಚದ ಸಾಲ’ ಎಂದು ಸರ್ಕಾರ ಗುರಿ ನಿಗದಿಗೊಳಿಸಿದರಾಯಿತು! ಅಭ್ಯರ್ಥಿಗಳು ಉದ್ಯೋಗವನ್ನು ಅಡ ಇಟ್ಟು ಸಾಲ ಪಡೆದುಕೊಳ್ಳುತ್ತಾರೆ. ಆ ಉದ್ಯೋಗಕ್ಕೆ, ಲಂಚದ ಮೊಬಲಗಿಗೆ ತಕ್ಕಂತೆ ಪ್ರೀಮಿಯಂ ನಿಗದಿಗೊಳಿಸಿ ವಿಮೆ ಕಡ್ಡಾಯ ಮಾಡಿದರೆ, ಬ್ಯಾಂಕಿಂಗ್ ವ್ಯವಹಾರ ಕುದುರುವುದರ ಜತೆಜತೆಗೇ ವಿಮೆ ಉದ್ಯಮ ಸಹ ಚಿಗಿತುಕೊಳ್ಳುತ್ತದೆ! ದೇಶದ ಆರ್ಥಿಕತೆ?... ಆಳುವವರು ಆ ಬಗ್ಗೆ ತಲೆ ಕೆಡಿಸಿಕೊಳ್ಳುವುದು ಬಿಟ್ಟು ದಶಕಗಳೇ ಆಗಿಹೋಗಿವೆಯಲ್ಲವೇ?!

ಆರ್.ಕೆ.ದಿವಾಕರ, ಬೆಂಗಳೂರು

ರೈತ ಸಂಘಕ್ಕೆ ಪಕ್ಷಗಳ ಮರ್ಜಿ ಬೇಡ

ರೈತ ಸಂಘವು ಆಮ್ ಆದ್ಮಿ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ಹೊರಟಿರುವುದರ ಬಗ್ಗೆ ನಟರಾಜ್ ಹುಳಿಯಾರ್ ತಮ್ಮ ಲೇಖನದಲ್ಲಿ (ಪ್ರ.ವಾ., ಏ. 25) ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಕರ್ನಾಟಕದಲ್ಲಿ ಹಿಂದೆ ಎಂ.ಡಿ. ನಂಜುಂಡಸ್ವಾಮಿ, ಸುಂದರೇಶ್, ರುದ್ರಪ್ಪ ಅವರ ಕಾಲದಲ್ಲಿ ರೈತ ಸಂಘದ ಸಂಘಟನೆ ಉಚ್ಛ್ರಾಯ ಸ್ಥಿತಿ ತಲುಪಿತ್ತು. ಸರ್ಕಾರಿ ಕಚೇರಿಗಳಲ್ಲಿ ನೌಕರರು ಹಸಿರು ಶಾಲು ಕಂಡೊಡನೆ ಬೆಚ್ಚಿ ಬೀಳುತ್ತಿದ್ದರು. ರೈತ ಸಂಘ ಯಾವುದೇ ಹೋರಾಟಕ್ಕೆ ಕರೆ ಕೊಟ್ಟಾಗ ಸರ್ಕಾರ ತಕ್ಷಣ ಸಕಾರಾತ್ಮಕವಾಗಿ ಸ್ಪಂದಿಸುತ್ತಿತ್ತು.

ರೈತ ಸಂಘ ಯಾವತ್ತು ಚುನಾವಣಾ ರಾಜಕೀಯಕ್ಕೆ ಧುಮುಕುವ ಆಸಕ್ತಿ ತೋರಿತೋ ಆಗಲೇ ಅದರ ಅವನತಿ ಶುರುವಾಯಿತು! ಈಗಲೂ ಅಷ್ಟೆ, ರೈತ ಸಂಘ ಯಾವುದೇ ಪಕ್ಷಗಳ ಮರ್ಜಿಗೂ ಒಳಗಾಗದೆ ಚುನಾವಣಾ ರಾಜಕೀಯದಿಂದ ದೂರ ಉಳಿದು, ರೈತರ ನಿಜವಾದ ಸಮಸ್ಯೆಗಳ ಬಗ್ಗೆ ಸ್ವತಂತ್ರವಾಗಿ ಪ್ರಾಮಾಣಿಕವಾದ ಹೋರಾಟ ಮಾಡಿದರೆ ಮಾತ್ರ ಯಶಸ್ಸು ಕಾಣಲು ಸಾಧ್ಯ. ಈ ಕಟು ಸತ್ಯವನ್ನು ರೈತ ಮುಖಂಡರು ಮನಗಾಣಬೇಕಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಎಎಪಿ ಮಾದರಿ ಆಸಕ್ತಿಕರ

ದೆಹಲಿಯಲ್ಲಿ ಈ ವರ್ಷ 4 ಲಕ್ಷ ವಿದ್ಯಾರ್ಥಿಗಳು ಖಾಸಗಿ ಶಾಲೆಗಳನ್ನು ತೊರೆದು ಸರ್ಕಾರಿ ಶಾಲೆಗಳಿಗೆ ಸೇರಿರುವುದಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಇತ್ತೀಚೆಗೆ ಹೇಳಿದ್ದಾರೆ (ಪ್ರ.ವಾ., ಏ. 22). ಸರ್ಕಾರಿ ಶಾಲೆಗಳನ್ನು ಉಳಿಸಲು ಹೆಣಗಾಡುತ್ತಿರುವ ಕರ್ನಾಟಕ ಸರ್ಕಾರವು ಎಎಪಿಯ ಈ ಮಾದರಿಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಅದರಿಂದೇನಾದರೂ ಸ್ಫೂರ್ತಿ, ಪ್ರೇರಣೆ ಪಡೆಯಬಹುದೇ ಎಂದು ಚಿಂತಿಸಬೇಕು. ಗುಣಕ್ಕೆ ನಾವು ಮತ್ಸರ ಪಡಬೇಕಾಗಿಲ್ಲ.

ಇತ್ತೀಚಿನ ದಶಕಗಳಲ್ಲಿ, ನಮ್ಮನ್ನಾಳುತ್ತ ಬಂದಿರುವ ಎಲ್ಲ ಪಕ್ಷಗಳ ನೇತೃತ್ವದ ಸರ್ಕಾರಗಳೂ ಶಿಕ್ಷಣ ಕ್ಷೇತ್ರವನ್ನು ಮಾಫಿಯಾಗಳ ಕೈಗೊಪ್ಪಿಸಿ, ತಮ್ಮ ಹೊಣೆಗಾರಿಕೆಯಿಂದ ಪಲಾಯನ ಮಾಡುತ್ತ ಬಂದಿವೆ. ಇದರಿಂದಾಗಿ, ಇಂದು ಶಿಕ್ಷಣವು ಮೇಲ್ಮಧ್ಯಮ ವರ್ಗದವರ ಕೈಗೂ ಎಟಕುತ್ತಿಲ್ಲ. ಹೀಗಾಗಿ ತಂದೆ-ತಾಯಿ ದುಡಿದಿದ್ದರಲ್ಲಿ ಬಹುಪಾಲನ್ನೆಲ್ಲ ಮಗುವಿನ ಸ್ಕೂಲ್ ಸೀಟನ್ನು ಗಿಟ್ಟಿಸಿಕೊಳ್ಳುವುದಕ್ಕೇ ಸುರಿಯಬೇಕಾಗಿದೆ. ಆದರೆ, ಲಕ್ಷಗಟ್ಟಲೆ ಹಣ ಕೊಟ್ಟು ಶಾಲೆಗೆ ಸೇರಿಸಿದರೂ ಹೆಚ್ಚಿನ ಶಾಲೆಗಳಲ್ಲಿ ಬೋಧನೆ, ಕಲಿಕೆಯ ಗುಣಮಟ್ಟ ಪಾತಾಳ ಕಂಡಿವೆ. ಇದರ ಜತೆಗೆ, ಪೂರಾ ವ್ಯಾವಹಾರಿಕ ಆಗಿರುವ ಇದೇ ಶಿಕ್ಷಣ ವ್ಯವಸ್ಥೆಯು ಸಮಾಜದಲ್ಲಿ ಕಂದಕಗಳನ್ನು ಸೃಷ್ಟಿಸುತ್ತಿದೆ. ಇದು, ತಂತ್ರಜ್ಞಾನ ಸೃಷ್ಟಿಸುತ್ತಿರುವ ‘ಡಿಜಿಟಲ್ ಡಿವೈಡ್’ಗಿಂತಲೂ ಹೆಚ್ಚು ಅಪಾಯಕಾರಿ! ಸರ್ಕಾರಿ ಶಾಲೆಗಳನ್ನು ಉಳಿಸದಿದ್ದರೆ ಆರೋಗ್ಯಪೂರ್ಣ ಸಮಾಜವಂತೂ ಕನಸಿನ ಮಾತೇ ಸರಿ. ಆದ್ದರಿಂದ, ರಾಜ್ಯ ಸರ್ಕಾರವು ‘ನವ ಕರ್ನಾಟಕ’ ನಿರ್ಮಾಣದ ಘೋಷಣೆಯನ್ನು ನನಸಾಗಿಸಲು ಮೊದಲು ಸರ್ಕಾರಿ ಶಾಲೆಗಳನ್ನು ಉಳಿಸಿ, ಏಕರೂಪದ ಶಿಕ್ಷಣ ವ್ಯವಸ್ಥೆಯನ್ನು ತರಬೇಕಾಗಿದೆ.

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಅನಿರ್ಬಂಧಿತ ಅಭಿವ್ಯಕ್ತಿ’ ಕಾರ್ಯಸಾಧುವೇ?

ಸಾಮಾಜಿಕ ಜಾಲತಾಣ ವೇದಿಕೆ ಟ್ವಿಟರ್ ಅನ್ನು ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿ ಇಲಾನ್ ಮಸ್ಕ್ ಖರೀದಿಸಿದ್ದಾರೆ. ಇದನ್ನು ಖಾಸಗಿ ಸಂಸ್ಥೆಯಾಗಿ ಉಳಿಸಿಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಕೋಟ್ಯಂತರ ಬಳಕೆದಾರರನ್ನು ಹೊಂದಿರುವ ಟ್ವಿಟರ್, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿಯೂ ಅತ್ಯಂತ ಪ್ರಭಾವಿಯಾಗಿ ಹೊರಹೊಮ್ಮಿದೆ. ಮಸ್ಕ್ ಅವರು ಟ್ವಿಟರ್ ಅನ್ನು ‘ಅನಿರ್ಬಂಧಿತ ಅಭಿವ್ಯಕ್ತಿ’ ತಾಣವಾಗಿ ಮಾಡುವ ಮಾತುಗಳನ್ನು ಆಡಿದ್ದಾರೆ. ಹಾಗಾದರೆ ಟ್ವಿಟರ್‌ನಲ್ಲಿ ನಿಂದನೆ, ಕಿರುಕುಳ ಹೆಚ್ಚಬಹುದು ಎಂಬ ಆತಂಕವೂ ಎದುರಾಗಿದೆ

‘ಅನಿರ್ಬಂಧಿತ ಅಭಿವ್ಯಕ್ತಿ ತಾಣ’ವಾಗಿ ಟ್ವಿಟರ್ ಅನ್ನು ರೂಪಿಸುವ ಭರವಸೆಯನ್ನು ಇಲಾನ್ ಮಸ್ಕ್ ನೀಡಿದ್ದಾರೆ. ಟ್ವಿಟರ್‌ನ ಮಟ್ಟಿಗೆ ಇದು ಹೊಸ ಭರವಸೆ ಏನಲ್ಲ. ದಶಕದ ಹಿಂದೆ ಟ್ವಿಟರ್ ಆರಂಭವಾದಾಗ ‘ಮುಕ್ತ ಮಾತಿನ ಘಟಕ’ ಎಂದು ಅದರ ಕಾರ್ಯನಿರ್ವಾಹಕರು ಬಣ್ಣಿಸಿದ್ದರು. ಆದರೆ, ನಂತರದ ದಿನಗಳಲ್ಲಿ ಇದು ಕಾರ್ಯರೂಪಕ್ಕೆ ಬರಲಿಲ್ಲ.

ಕೆಲವು ದೇಶಗಳ ‘ದಮನಕಾರಿ ಸರ್ಕಾರಗಳು’ ಟ್ವಿಟರ್ ಬಳಕೆದಾರರ ಮೇಲೆ ಮುಗಿಬಿದ್ದ ಉದಾಹರಣೆಗಳು ಇವೆ. ವಿಶೇಷವಾಗಿ, ‘ಅರಬ್ ವಸಂತ’ಕ್ಕಾಗಿ (2010ನೇ ದಶಕದ ಆರಂಭದಲ್ಲಿ ಅರಬ್ ಪ್ರದೇಶದಲ್ಲಿ ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆಗಳು, ಬಂಡಾಯ ಮತ್ತು ಸಶಸ್ತ್ರ ಹೋರಾಟವನ್ನು ಅರಬ್ ವಸಂತ ಎಂದು ಕರೆಯಲಾಗಿದೆ) ಕೆಲಸ ಮಾಡಿದ್ದ ಟ್ವಿಟರ್ ಬಳಕೆದಾರ ಕಾರ್ಯಕರ್ತರನ್ನು ಗುರಿ ಮಾಡಿಕೊಳ್ಳಲಾಗಿತ್ತು. ಟ್ವಿಟರ್ ಮತ್ತು ಸಾಮಾಜಿಕ ಜಾಲತಾಣಗಳ ಇತರ ವೇದಿಕೆಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ ಮಹಿಳೆಯರಿಗೆ ಅತ್ಯಂತ ತುಚ್ಛವಾದ ರೀತಿಯಲ್ಲಿ ನಿರಂತರವಾಗಿ ಕಿರುಕುಳ ನೀಡಲಾಗಿತ್ತು ಎಂಬುದರ ಬಗ್ಗೆ ಅಮೆರಿಕದ ಪತ್ರಕರ್ತೆ ಅಮಂಡಾ ಹೆಸ್ ಅವರು 2014ರಲ್ಲಿ ವಿವರವಾದ ವರದಿ ಪ್ರಕಟಿಸಿದ್ದರು.

ನಂತರದ ವರ್ಷಗಳಲ್ಲಿ ಟ್ವಿಟರ್ ಹಲವು ಪಾಠಗಳನ್ನು ಕಲಿತುಕೊಂಡಿದೆ. ಸಾಮಾಜಿಕ ಜಾಲತಾಣ ವೇದಿಕೆಗಳನ್ನು ಅನಿಯಂತ್ರಿತವಾಗಿ ಬಿಟ್ಟರೆ ಆಗುವ ಅಪಾಯಗಳೇನು ಎಂಬುದನ್ನು ಟ್ವಿಟರ್ ಅರಿತುಕೊಂಡಿದೆ. ಹಿಂಸಾತ್ಮಕ ಬೆದರಿಕೆಗಳು, ಕುಮ್ಮಕ್ಕಿಗೆ ಕಾರಣವಾಗುವ ದ್ವೇಷ ಭಾಷಣಗಳು, ಚುನಾವಣೆಯ ಕಾರಣಕ್ಕೆ ಅಥವಾ ಸಾರ್ವಜನಿಕ ಆರೋಗ್ಯವನ್ನು ನಿರ್ಲಕ್ಷಿಸುವ ತಪ್ಪು ಮಾಹಿತಿಯ ಟ್ವೀಟ್‌ಗಳ ಜತೆಯಲ್ಲಿ ತಮ್ಮ ಜಾಹೀರಾತು ಪ್ರಕಟವಾಗುವುದನ್ನು ಹಲವು ಮಹತ್ವದ ಕಂಪನಿಗಳು ಬಯಸುವುದಿಲ್ಲ ಎಂಬುದು ಇದರಲ್ಲಿ ಬಹಳ ಮುಖ್ಯವಾದ ಪಾಠ.

‘ಮಸ್ಕ್ ನೀಡಿರುವ ಮುಕ್ತ ಮಾತಿನ ಭರವಸೆಯು ಕೆಟ್ಟದ್ದೇ. ಸ್ವಯಂಚಾಲಿತ ವ್ಯವಸ್ಥೆ ಮತ್ತು ಮಾನವ ಪರಿಶೀಲನೆ ಇಲ್ಲದೆ ಟ್ವಿಟರ್‌ನಂತಹ ವೇದಿಕೆಯನ್ನು ಬಿಟ್ಟುಬಿಟ್ಟರೆ ಅದು ಕೊಚ್ಚೆಗುಂಡಿಯ ರೀತಿ ಆಗುವುದರಲ್ಲಿ ಯಾವುದೇ ಅನುಮಾನ ಇಲ್ಲ’ ಎಂಬುದು ನ್ಯೂಯಾರ್ಕ್ ವಿಶ್ವವಿದ್ಯಾಲಯದ ವ್ಯಾಪಾರ ಮತ್ತು ಮಾನವ ಹಕ್ಕುಗಳ ಕೇಂದ್ರದ ಉಪ ನಿರ್ದೇಶಕ ಪಾಲ್ ಬ್ಯಾರೆಟ್ ಅವರ ಅಭಿಪ್ರಾಯ.

ಭಯೋತ್ಪಾದಕರು ತಯಾರಿಸಿದ ವಿಡಿಯೊಗಳನ್ನು ಯೂಟ್ಯೂಬ್‌ನಲ್ಲಿ 2015ರಲ್ಲಿ ಪ್ರಸಾರ ಮಾಡಿದ ಬಳಿಕ ಟೊಯೊಟಾ ಮತ್ತು ಎನ್‌ಐಯುರ್ ಬಷ್‌ನಂತಹ ಕಂಪನಿಗಳು ತಮ್ಮ ಜಾಹೀರಾತುಗಳನ್ನು ಹಿಂದಕ್ಕೆ ಪಡೆದವು. ಇದರಿಂದ, ಗೂಗಲ್ ತಕ್ಷಣವೇ ಪಾಠ ಕಲಿಯಿತು ಎಂಬ ಅಂಶವನ್ನು ಬ್ಯಾರೆಟ್ ನೆನಪಿಸಿಕೊಂಡಿದ್ದಾರೆ.

ಟ್ವಿಟರ್‌ನ ಸ್ಥಾಪಕ ಮತ್ತು ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಾಕ್ ಡೋರ್ಸಿ ಅವರು, ಸಂಭಾಷಣೆಯು ಅನಾರೋಗ್ಯಕರ ಹಂತಕ್ಕೆ ತಲುಪಿದೆ ಎಂಬುದು ಮನವರಿಕೆ ಆದ ಬಳಿಕ ಸಂಭಾಷಣೆಯನ್ನು ಆರೋಗ್ಯಕರಗೊಳಿಸಲು ಕೆಲವು ವರ್ಷ ಕೆಲಸ ಮಾಡಿದ್ದರು.

‘ರಿಪೋರ್ಟ್ ಅಬ್ಯೂಸ್’ (ನಿಂದನೆ ವರದಿ) ವ್ಯವಸ್ಥೆಯನ್ನು ಜಾರಿಗೆ ತಂದ ಆರಂಭಿಕ ಸಾಮಾಜಿಕ ಜಾಲತಾಣ ವೇದಿಕೆಗಳಲ್ಲಿ ಟ್ವಿಟರ್ ಕೂಡ ಒಂದು. ಅತ್ಯಾಚಾರ ಎಸಗಿ ಹತ್ಯೆ ಮಾಡಲಾಗುವುದು ಎಂದು ಬ್ರಿಟನ್‌ನ ಸಂಸದೆ ಸ್ಟೆಲ್ಲಾ ಕ್ರೀಸಿ ಅವರಿಗೆ ಹತ್ತಾರು ಬೆದರಿಕೆ ಸಂದೇಶ ಬಂದ ಬಳಿಕ, ರಿಪೋರ್ಟ್ ಅಬ್ಯೂಸ್ ವ್ಯವಸ್ಥೆಯನ್ನು ಟ್ವಿಟರ್ ಚಾಲೂಗೊಳಿಸಿತ್ತು. ಸ್ತ್ರೀವಾದಿ ಪ್ರಚಾರಕಿ ಕ್ಯಾರೊಲಿನ್ ಕ್ರೈಡೊ ಪೆರೆಝ್ ಅವರ ಪರವಾಗಿ ಟ್ವೀಟ್ ಮಾಡಿದ್ದಕ್ಕೆ ಸ್ಟೆಲ್ಲಾ ಅವರಿಗೆ ಬೆದರಿಕೆ ಒಡ್ಡಲಾಗಿತ್ತು. ಸ್ಟೆಲ್ಲಾ ಅವರಿಗೆ ಕಿರುಕುಳ ನೀಡಿದ ವ್ಯಕ್ತಿಗೆ 18 ವಾರಗಳ ಜೈಲು ಶಿಕ್ಷೆಯೂ ಆಯಿತು.

ತನ್ನ ನೀತಿಯನ್ನು ಉಲ್ಲಂಘಿಸುವ ಹಿಂಸಾತ್ಮಕ ಬೆದರಿಕೆ, ಕಿರುಕುಳ ಮತ್ತು ಸುಳ್ಳು ಸುದ್ದಿ ಪ್ರಸಾರವನ್ನು ಪತ್ತೆ ಮಾಡಲು ಟ್ವಿಟರ್, ಹೊಸ ನಿಯಮಗಳನ್ನು ರೂಪಿಸಿತ್ತು, ಸಿಬ್ಬಂದಿಯ ಮೇಲೆ ಹೂಡಿಕೆ ಮಾಡಿತ್ತು ಮತ್ತು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿತ್ತು. 2016ರಲ್ಲಿ ಅಮೆರಿಕದಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಹಸ್ತಕ್ಷೇಪ ನಡೆಸಲು ರಷ್ಯಾವು ಸಾಮಾಜಿಕ ಜಾಲತಾಣ ವೇದಿಕೆಗಳನ್ನು ಬಳಸಿಕೊಂಡಿತ್ತು ಎಂಬುದು ಮನವರಿಕೆಯಾದ ಬಳಿಕ ರಾಜಕೀಯ ಸುಳ್ಳು ಸುದ್ದಿಯನ್ನು ತಡೆಯುವ ದಿಸೆಯಲ್ಲಿಯೂ ಪ್ರಯತ್ನ ಆರಂಭವಾಗಿದೆ.

‘ಅನಿರ್ಬಂಧಿತ ಅಭಿವ್ಯಕ್ತಿಯ ಪ್ರತಿಪಾದಕ’ ಎಂದು ತಮ್ಮನ್ನು ಬಣ್ಣಿಸಿಕೊಳ್ಳುವ ಮಸ್ಕ್ ಅವರು, ಈ ಎಲ್ಲ ನಿಯಂತ್ರಣ ಕ್ರಮಗಳನ್ನು ಕೈಬಿಡಲು ಬಯಸಿದಂತೆ ಕಾಣಿಸುತ್ತಿದೆ. ಹಾಗಾದರೆ, ಈಗ ಇರುವ ಬಳಕೆದಾರರು ಮತ್ತು ಜಾಹೀರಾತುದಾರರು ಟ್ವಿಟರ್‌ನಲ್ಲಿ ಮುಂದುವರಿಯಲ್ಲಿದ್ದಾರೆಯೇ ಎಂಬುದು ಸದ್ಯಕ್ಕೆ ಇರುವ ಬಹುದೊಡ್ಡ ಪ್ರಶ್ನೆ.

ಇತರ ಆನ್‌ಲೈನ್ ವೇದಿಕೆಗಳಿಗೆ ಹೋಲಿಸಿದರೆ ಸಾಮಾಜಿಕ ಜಾಲತಾಣ ವೇದಿಕೆಗಳಲ್ಲಿ ಕಿರುಕುಳಕ್ಕೆ ಒಳಗಾಗುವ ಅಪಾಯ ಹೆಚ್ಚು ಎಂಬುದು ಅಮೆರಿಕನ್ನರ ಭಾವನೆ. ಭಾರಿ ಪ್ರಮಾಣದಲ್ಲಿ ನಿಂದನೆಗೆ ಒಳಗಾಗುತ್ತಿದ್ದೇವೆ ಎಂದು ಮಹಿಳೆಯರು, ಬಿಳಿಯರಲ್ಲದ ಜನರು, ಲೈಂಗಿಕ ಅಲ್ಪಸಂಖ್ಯಾತರು ಹೇಳಿದ್ದಾರೆ. ಇಂತಹ ನಿಂದನೆ ತಡೆಯಲು, ಸಾಮಾಜಿಕ ಜಾಲತಾಣ ಕಂಪನಿಗಳು ಹೆಚ್ಚಿನದೇನನ್ನೂ ಮಾಡುತ್ತಿಲ್ಲ ಎಂದು ಜನರು ಹೇಳಿದ್ದಾರೆ ಎಂದು ಪ್ಯೂ ರಿಸರ್ಚ್ ಸೆಂಟರ್ ಅಮೆರಿಕದಲ್ಲಿ ಕಳೆದ ವರ್ಷ ನಡೆಸಿದ ಸಮೀಕ್ಷೆಯು ಹೇಳಿದೆ.

ಇಲಾನ್ ಮಸ್ಕ್ ಅವರು ಖರೀದಿಸಿದ ಬಳಿಕ ಟ್ವಿಟರ್ ಹೊಣೆಗಾರಿಕೆಯಿಂದಲೇ ಇರಬೇಕು ಎಂದು ಬ್ರಿಟನ್ ಹೇಳಿದೆ. ಐರೋಪ್ಯ ಒಕ್ಕೂಟವೂ ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದೆ.

ಆಧಾರ: ಎಪಿ, ರಾಯಿಟರ್ಸ್, ನ್ಯೂಯಾರ್ಕ್ ಟೈಮ್ಸ್

‘ಟ್ವಿಟರ್‌ನ ಬೆಲೆ ಎಷ್ಟು?’

‘ನಾನು ಟ್ವಿಟರ್ ಅನ್ನು ಪ್ರೀತಿಸುತ್ತೇನೆ’ ಎಂದು ಇಲಾನ್ ಮಸ್ಕ್ 2017ರಲ್ಲಿ ಟ್ವೀಟ್ ಮಾಡಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಟ್ವೀಟಿಗರೊಬ್ಬರು, ‘ಹಾಗಿದ್ದರೆ ನೀವು ಟ್ವಿಟರ್ ಅನ್ನು ಖರೀದಿಸಿಬಿಡಿ’ ಎಂದು ಸಲಹೆ ನೀಡಿದ್ದರು. ಈ ಸಲಹೆಗೆ ಪ್ರತಿಕ್ರಿಯೆ ನೀಡಿದ್ದ ಮಸ್ಕ್, ‘ಟ್ವಿಟರ್‌ನ ಬೆಲೆ ಎಷ್ಟು’ ಎಂದು ಪ್ರಶ್ನಿಸಿದ್ದರು. ಆ ಪ್ರಶ್ನೆಗೆ ಉತ್ತರಿಸುವ ಗೋಜಿಗೆ ಯಾರೂ ಹೋಗಿರಲಿಲ್ಲ.

ಆದರೆ, ಅಂದಾಜು ಐದು ವರ್ಷಗಳ ನಂತರ ಮಸ್ಕ್ ಅವರು ಟ್ವಿಟರ್ ಅನ್ನು ಖರೀದಿಸಿದ್ದಾರೆ. ಅದು ಏಕಾಏಕಿ ಆದ ಬೆಳವಣಿಗೆ ಅಲ್ಲ. ಟ್ವಿಟರ್‌ನ ಷೇರುಗಳಲ್ಲಿ ಶೇ 9.2ರಷ್ಟು ಷೇರುಗಳನ್ನು ಮಸ್ಕ್ ಅವರು ಈಚೆಗೆ ಖರೀದಿಸಿದ್ದರು. ‘ಟ್ವಿಟರ್‌ನಲ್ಲಿ ಏನೇನು ಬದಲಾವಣೆ ಬಯಸುತ್ತೀರಿ’ ಎಂದು ಮಸ್ಕ್ ಅವರು ಏಪ್ರಿಲ್ ಮೊದಲ ವಾರದಲ್ಲಿ ಟ್ವೀಟ್ ಮಾಡಿದ್ದರು. ಅವರು ಟ್ವಿಟರ್‌ನಲ್ಲಿ ಎರಡನೇ ಅತಿದೊಡ್ಡ ಪಾಲುದಾರ ಎಂದು ಗೊತ್ತಾಗಿದ್ದು ಆಗಲೇ. ಟ್ವಿಟರ್ ಆಡಳಿತ ಮಂಡಳಿಯ ಸದಸ್ಯನಾಗಲು ಮಸ್ಕ್ ಅವರಿಗೆ ಅಧಿಕೃತವಾಗಿ ಆಹ್ವಾನ ನೀಡಲಾಯಿತು. ಅದನ್ನು ಮಸ್ಕ್ ನಿರಾಕರಿಸಿದ್ದರು. ಬಹುಶಃ ಟ್ವಿಟರ್ ಅನ್ನು ಸಂಪೂರ್ಣವಾಗಿ ಖರೀದಿಸುವ ಯೋಚನೆ ಮಸ್ಕ್ ಅವರಲ್ಲಿ ಆಗಲೇ ಇದ್ದಿರಬೇಕು. ತಿಂಗಳು ಕಳೆಯುವ ಒಳಗೆ ಟ್ವಿಟರ್ ಅನ್ನು ಮಸ್ಕ್ ಖರೀದಿಸಿದ್ದಾರೆ.



ಲಾಭ ಕಾಣುವುದೇ ಟ್ವಿಟರ್?

ಸಾಮಾಜಿಕ ಜಾಲತಾಣಗಳ ಜಗತ್ತಿನಲ್ಲಿ ಟ್ವಿಟರ್ ಮುಂಚೂಣಿಯಲ್ಲಿ ಇದೆ. ಆದರೆ ಟ್ವಿಟರ್ ಮಾಡುತ್ತಿರುವ ಸದ್ದಿನಷ್ಟು, ಅದರ ಆದಾಯ ಇಲ್ಲ. ಟ್ವಿಟರ್ ತನ್ನ ವೇದಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳಿಂದ ಆದಾಯ ಗಳಿಸುತ್ತದೆ. ಆದರೆ ಈ ಆದಾಯವು ಲಾಭದ ಮೈಲುಗಲ್ಲು ಮುಟ್ಟಿದ್ದು ಎರಡು ಬಾರಿ ಮಾತ್ರ. ಇಂತಹ ಟ್ವಿಟರ್ ಅನ್ನು ಅದರ ಮಾರುಕಟ್ಟೆ ಮೌಲ್ಯಕ್ಕಿಂತ ಹೆಚ್ಚು ಹಣ ನೀಡಿ ಇಲಾನ್ ಮಸ್ಕ್ ಖರೀದಿಸಿದ್ದು ಕುತೂಹಲಕ್ಕೆ ಕಾರಣವಾಗಿದೆ.

ಇಲಾನ್ ಮಸ್ಕ್ ಒಬ್ಬ ಯಶಸ್ವಿ ಉದ್ಯಮಿ. ಸತತ ನಷ್ಟದಲ್ಲಿದ್ದ ತಮ್ಮ ಟೆಸ್ಲಾ ಕಂಪನಿಯನ್ನು ಭಾರಿ ಪ್ರಮಾಣದ ಲಾಭಕ್ಕೆ ತಂದು, ಅದೇ ಹಾದಿಯಲ್ಲಿ ಮುಂದುವರಿಸಿದ ಹೆಗ್ಗಳಿಕೆ ಅವರದ್ದು. ಮಸ್ಕ್ ಅವರ ಸ್ಪೇಸ್‌ಎಕ್ಸ್ ಕಂಪನಿ ಸಹ ಲಾಭದಲ್ಲಿಯೇ ಇದೆ. ಉಪಗ್ರಹದ ಮೂಲಕ ಇಂಟರ್ನೆಟ್ ಒದಗಿಸುವ ಸ್ಟಾರ್‌ಲಿಂಕ್ ಸಹ ಲಾಭದ ನಿರೀಕ್ಷೆಯಲ್ಲಿದೆ. ಹೀಗೆ ತಮ್ಮದೇ ಹಲವು ಕಂಪನಿಗಳನ್ನು ಲಾಭದತ್ತ ಒಯ್ದ ಮಸ್ಕ್ ಅವರು, ಟ್ವಿಟರ್ ಅನ್ನು ಸಹ ಲಾಭದತ್ತ ಕರೆದೊಯ್ಯುತ್ತಾರೆ ಎಂದು ನಿರೀಕ್ಷಿಸಲಾಗಿದೆ.

ಈ ನಿರೀಕ್ಷೆಗೆ ಅಪಸ್ವರಗಳೂ ಕೇಳಿಬಂದಿವೆ. ಟ್ವಿಟರ್ ಅನ್ನು 44 ಬಿಲಿಯನ್ ಡಾಲರ್ (₹3.37 ಲಕ್ಷ ಕೋಟಿ) ಮೊತ್ತಕ್ಕೆ ಮಸ್ಕ್ ಖರೀದಿಸಿದ್ದಾರೆ. ಈ ಮೊತ್ತದಲ್ಲಿ 25.5 ಬಿಲಿಯನ್ ಡಾಲರ್‌ನಷ್ಟು (₹1.95 ಲಕ್ಷ ಕೋಟಿ) ಮೊತ್ತವನ್ನು ಸಾಲದ ರೂಪದಲ್ಲಿ ಕ್ರೋಡೀಕರಿಸಲಾಗುತ್ತಿದೆ. ಟ್ವಿಟರ್ ಅನ್ನು ಲಾಭದ ಹಾದಿಗೆ ತರುವಲ್ಲಿ ತಮ್ಮ ಕಾರ್ಯತಂತ್ರಗಳೇನು ಎಂಬುದನ್ನು ಮಸ್ಕ್ ಎಲ್ಲಿಯೂ ಹೇಳಿಲ್ಲ. ಅದಕ್ಕಿಂತ ಮುಖ್ಯವಾಗಿ ಅವರು ಅಂತಹ ಉದ್ದೇಶವನ್ನು ಎಲ್ಲಿಯೂ ವ್ಯಕ್ತಪಡಿಸಿಲ್ಲ. ಹೀಗಿದ್ದಾಗ ಈಗಾಗಲೇ ಹಲವು ಭಾರಿ ನಷ್ಟ ಅನುಭವಿಸಿರುವ ಕಂಪನಿಯ ಮೇಲೆ 25.5 ಬಿಲಿಯನ್ ಡಾಲರ್‌ನಷ್ಟು ಸಾಲವನ್ನು ಹೊರಿಸುವುದು, ಭಾರಿ ಹೊರೆಯೇ ಸರಿ. ಆದಾಯ ಹೆಚ್ಚಿಸುವ ಹಾದಿಯಲ್ಲಿ ನಡೆಯದೇ ಇದ್ದರೆ, ಟ್ವಿಟರ್ ಲಾಭವನ್ನು ಕಾಣುವುದು ಸಾಧ್ಯವೇ ಇಲ್ಲ ಎಂದು ಮಾರುಕಟ್ಟೆ ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಪರ–ವಿರೋಧ ಚರ್ಚೆ

ಇಲಾನ್ ಮಸ್ಕ್ ಅವರು ಟ್ವಿಟರ್ ಅನ್ನು ಖರೀದಿಸುತ್ತಿದ್ದಂತೆಯೇ ಪರ–ವಿರೋಧದ ಚರ್ಚೆ ಆರಂಭವಾಗಿದೆ. ಕೆಲವು ಬಳಕೆದಾರರು ಟ್ವಿಟರ್ ವೇದಿಕೆಯನ್ನು ತೊರೆಯುವ ಮಾತನ್ನಾಡಿದ್ದಾರೆ. ‘ಲೀವಿಂಗ್ ಟ್ವಿಟರ್’, ‘ಕ್ವಿಟ್ ಟ್ವಿಟರ್’, ‘ಡಿಲೀಟ್ ಟ್ವಿಟರ್’ ಎಂಬ ಹ್ಯಾಷ್‌ಟ್ಯಾಗ್‌ಗಳು ಟ್ರೆಂಡ್ ಆಗಿವೆ. ಮಸ್ಕ್ ತೆಗೆದುಕೊಂಡಿರುವ ನಿರ್ಧಾರವನ್ನು ಕೆಲವರು ಬೆಂಬಲಿಸಿದ್ದಾರೆ

ನಮ್ಮ ಪ್ರಜಾಪ್ರಭುತ್ವಕ್ಕೆ ಈ ನಡೆ ಅಪಾಯಕಾರಿ. ಮಸ್ಕ್ ಅವರಂತಹ ಕೋಟ್ಯಧಿಪತಿಗಳು ಭಿನ್ನ ನಿಯಮಗಳನ್ನು ಜಾರಿಗೆ ತರುತ್ತಾರೆ. ತಮ್ಮ ಲಾಭಕ್ಕಾಗಿ ಅಧಿಕಾರವನ್ನು ಹಿಡಿಯುತ್ತಾರೆ. ತಂತ್ರಜ್ಞಾನ ಕ್ಷೇತ್ರದ ಬೃಹತ್ ಕಂಪನಿಗಳ ವ್ಯಕ್ತಿಗಳನ್ನು ಹೊಣೆಗಾರರನ್ನಾಗಿ ಮಾಡಲು ಭಾರಿ ಮೊತ್ತದ ತೆರಿಗೆ ಹೇರಬೇಕು ಮತ್ತು ಕಠಿಣ ನಿಯಮಗಳನ್ನು ಜಾರಿಗೆ ತರಬೇಕು

ಎಲಿಜಬೆತ್ ವಾರನ್, ಅಮೆರಿಕ ಸಂಸದೆ

ಮಸ್ಕ್ ಅವರು ಟ್ವಿಟರ್ ಖರೀದಿಸಿದರೆ ಟ್ವಿಟರ್ ತೊರೆಯುವುದಾಗಿ ಭಾರತದಲ್ಲಿ ಕೆಲವು ಜನರು ಹೇಳುತ್ತಿದ್ದಾರೆ. ಇದೇ ವ್ಯಕ್ತಿಗಳು ನರೇಂದ್ರ ಮೋದಿ ಅವರು ಪ್ರಧಾನಿಯಾದರೆ, ಭಾರತವನ್ನು ತೊರೆಯುವುದಾಗಿ ಹೇಳಿದ್ದರು. ಮೋದಿ ಅವರು ಎರಡು ಬಾರಿ ಪ್ರಧಾನಿಯಾದರು. ಆದರೆ ಆ ಜನರು ದೇಶ ತೊರೆಯಲಿಲ್ಲ

ಶೆಫಾಲಿ ವೈದ್ಯ

ಒಂದೊಮ್ಮೆ ನೀವು ಟ್ವಿಟರ್‌ನಿಂದ ಹೊರನಡೆಯಲು ನಿರ್ಧರಿಸಿದರೂ, ಇಲಾನ್ ಮಸ್ಕ್ ಅವರು ಜಗತ್ತಿನ ಶ್ರೀಮಂತ ವ್ಯಕ್ತಿಯಾಗಿಯೇ ಉಳಿಯುತ್ತಾರೆ

ದಿ ಬಯಾಸ್ಡ್

ಇಲಾನ್ ಮಸ್ಕ್ ಅವರಿಗೆ ನಾಗರಿಕ ಸಮಾಜದ ಬಗ್ಗೆ ಯಾವುದೇ ಕಾಳಜಿ ಇಲ್ಲ. ಸಾಮಾಜಿಕ ಮಾಧ್ಯಮದ ಎಲ್ಲ ಕೊಳಚೆ ಅನಿಯಂತ್ರಿತವಾಗಿ ಹರಿಯಲು ಅವರು ಅವಕಾಶ ಮಾಡಿಕೊಡಲಿದ್ದಾರೆ

ಜೆನ್ನಿಫರ್ ವ್ಯಾಲಿಯರ್ ಹಂಫ್ರೆ

2014ರಿಂದಲೂ ಎಡಪಂಥೀಯರು ಟ್ವಿಟರ್ ತೊರೆಯುವುದಾಗಿ ಹೇಳುತ್ತಿದ್ದಾರೆ. ಆದರೆ ಅವರು ಹಾಗೆ ಮಾಡಿಲ್ಲ

ಟೀಲವ್2021

‘ಲೀವಿಂಗ್ ಟ್ವಿಟರ್’ ಎಂಬುದು ಈಗ ಟ್ರೆಂಡ್ ಆಗಿದೆ. ಆದರೆ ನಿಮ್ಮ ನಿರ್ಗಮನವನ್ನು ಘೋಷಿಸಲು ಇದು ವಿಮಾನ ನಿಲ್ದಾಣವಲ್ಲ

ಪ್ಯೂರೆಸ್ಟ್‌ಜಿಂಕ್



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 105

ಅಭಿಷೇಕದ ಫಲಗಳು

ಲಕ್ಷಧಾನ್ಯಪೂಜೆಯ ಕ್ರಮವನ್ನು ಹೇಳಿದ ನಂತರ ಶಿವನ ಲಕ್ಷಪುಷ್ಪ ಪೂಜೆಯ ಕ್ರಮವನ್ನು ಹೇಳುತ್ತಾನೆ ಬ್ರಹ್ಮ. ಅದನ್ನು ಸೂತಮುನಿಯು ಋಷಿಗಳಿಗೆ ಹೇಳುವಾಗ ತನ್ನ ಗುರು ವ್ಯಾಸರು ‘ಒಂದು ಪ್ರಸ್ಥ ಶಂಖಪುಷ್ಪಗಳನ್ನು ಶಿವನಿಗೆ ಅರ್ಪಿಸಿದರೆ ಲಕ್ಷಪೂಜೆಯನ್ನು ಮಾಡಿದಂತಾಗುವುದು’ ಎಂದು ಸೂಕ್ಷ್ಮವಾದ ಅಳತೆಯನ್ನು ಮಾಡಿ ಪ್ರದರ್ಶಿಸಿದ್ದರು ಎನ್ನುತ್ತಾನೆ.

ಹನ್ನೊಂದು ಪ್ರಸ್ಥ ಜಾಜೀಹೂವುಗಳಿಂದ ಅರ್ಚಿದರೆ ಲಕ್ಷಜಾಜೀ ಪೂಜೆ ಆಗುವುದು. ಅದರಂತೆ ಯೂಥಿಕಾಪುಷ್ಪಗಳನ್ನೂ ಹನ್ನೊಂದು ಪ್ರಸ್ಥದಷ್ಟು ಅರ್ಚಿಸಬೇಕು. ಅರ್ಧ ಪ್ರಸ್ಥದಷ್ಟು ರಾಜಿಕಾಪುಷ್ಪಗಳನ್ನ ಅರ್ಚಿಸಬೇಕು. ಮಲ್ಲಿಗೆಹೂವುಗಳನ್ನು ಇಪ್ಪತ್ತು ಪ್ರಸ್ಥಗಳಷ್ಟು ಶಿವನಿಗೆ ಅರ್ಚಿಸಬೇಕು. ಹತ್ತೊಂಬತ್ತು ಪ್ರಸ್ಥಗಳಷ್ಟು ತಿಲಪುಷ್ಪಗಳನ್ನ ಅರ್ಚಿಸಬೇಕು. ಮೂವತ್ತೆಂಟು ಪ್ರಸ್ಥಗಳಷ್ಟು ಕರವೀರಪುಷ್ಪಗಳನ್ನೂ ನಿರ್ಗುಂಡೀಕುಸುಮಗಳನ್ನೂ ಅರ್ಪಿಸಬೇಕು.

ಮೂವತ್ತೆಂಟು ಪ್ರಸ್ಥಗಳಷ್ಟು ಕರ್ಣಿಕಾರಪುಷ್ಪಗಳನ್ನ ಅರ್ಚಿಸಬೇಕು. ಬಾಗೇಹೂವು ಮತ್ತು ದಾಸವಾಳಹೂವುಗಳನ್ನು ಹತ್ತು ಪ್ರಸ್ಥಗಳಷ್ಟು ಅರ್ಪಿಸಬೇಕು. ಹೀಗೆ ಹಿಂದೆ ಹೇಳಿದ ಪರಿಮಾಣದಿಂದ ಶಿವನಿಗೆ ಪುಷ್ಪಗಳನ್ನ ಅರ್ಚಿಸಬೇಕು. ಹಾಗೆ ಮಾಡಿದರೆ ಸಕಲೇಷ್ಟಸಿದ್ಧಿಯು ಆಗುವುದು. ಫಲಲೇಚ್ಛೆಯಿಲ್ಲದೆ ಮಾಡಿದರೆ ಮುಕ್ತಿಯು ಲಭಿಸುವುದು ಎಂದ ಬ್ರಹ್ಮ, ನಂತರ ಧಾರಾ (ಅಭಿಷೇಕ) ಪೂಜೆಯ ಫಲವನ್ನು ಹೇಳುತ್ತಾನೆ.

ಶಿವನಿಗೆ ವಿಧಿವತ್ತಾಗಿ ಪೂಜೆ ಮಾಡಿದ ಬಳಿಕ ಭಕ್ತಿಯಿಂದ ಜಲಾಭಿಷೇಕವನ್ನು ಮಾಡಬೇಕು. ಜ್ವರಬಾಧೆಯು ಹೋಗಲು ಏಕಾದಶವಾರ ರುದ್ರಾಭಿಷೇಕವನ್ನು ಶಿವನಿಗೆ ಮಾಡಿಸಿದರೆ ಜ್ವರಬಾಧೆಯು ನಾಶವಾಗುವುದು. ರುದ್ರಸೂಕ್ತ, ಪುರುಷಸೂಕ್ತ, ಮೃತ್ಯುಂಜಯ ಮಂತ್ರ, ಗಾಯತ್ರೀಮಂತ್ರ, ಆದಿ ಮತ್ತು ಕೊನೆಯಲ್ಲಿ ಓಂಕಾರವಿರುವ ಶಿವನಾಮಗಳು, ಅಥವಾ ಆಗಮದಲ್ಲಿ ಹೇಳಿರುವ ಮಂತ್ರಗಳಿಂದ ಶಿವನಿಗೆ ಜಲಾಭಿಷೇಕವನ್ನು ಮಾಡಿದರೆ ಸುಖವೃದ್ಧಿ, ಪ್ರಜಾವೃದ್ಧಿ ಆಗುವುದು.

ಶಿವಭಕ್ತನು ಭಸ್ಮವನ್ನು ಧರಿಸಿ ಅನೇಕ ಬಗೆಯಾದ ಮಂಗಳ ಮತ್ತು ದಿವ್ಯವಾದ ದ್ರವ್ಯಗಳಿಂದ ಧಾರಾಭಿಷೇಕವನ್ನು ಸಹಸ್ರನಾಮ ಮಂತ್ರಗಳಿಂದ ಮಾಡಿದರೆ ವಂಶವು ಅಭಿವೃದ್ಧಿಯಾಗುವುದು. ಬುದ್ಧಿಯು ಜಡವಾದರೆ ಸಕ್ಕರೆಯನ್ನು ಮಿಶ್ರಮಾಡಿದ ಹಾಲಿನಿಂದ ಅಭಿಷೇಕ ಮಾಡಿದರೆ ಬುದ್ಧಿಯು ಚುರುಕಾಗುವುದು. ಹತ್ತುಸಾವಿರ ಬಾರಿ ರುದ್ರಮಂತ್ರದಿಂದ ಕ್ಷೀರಾಭಿಷೇಕ ಮಾಡಿದರೆ, ಬೃಹಸ್ಪತಿಯಂತೆ ಬುದ್ಧಿಯು ಚುರುಕಾಗುವುದು. ಮಂತ್ರಗಳಿಂದ ಶಿವನನ್ನು ಪೂಜಿಸಿದ ನಂತರ ಒಂಬತ್ತು ಮಂದಿ ನಿರ್ಗತಿಕರಿಗೆ ಮೃಷ್ಟಾನ್ನ ಭೋಜನ ಮಾಡಿಸಬೇಕು.

ಅಕಸ್ಮಾತ್ತಾಗಿ ಕಾರಣವಿಲ್ಲದೆ, ಶರೀರದಲ್ಲಿ ಉಚ್ಚಾಟನೆ, ಚಂಚಲತೆ, ವಾಯುಪ್ರಕೋಪ, ಅಯುಕ್ತಸ್ಥಳದಲ್ಲಿ ಪ್ರೇಮ, ಹೆಚ್ಚಾಗಿ ದುಃಖ, ಮನೆಯಲ್ಲಿ ನಿತ್ಯವೂ ಕಲಹ, ಇತ್ಯಾದಿ ಸಮಸ್ಯೆಗಳು ಆಗುತ್ತಿದ್ದರೆ ದುಗ್ಧಾಭಿಷೇಕವನ್ನು ಮಾಡಿ ಶಿವನನ್ನರ್ಚಿಸಬೇಕು. ಶತ್ರುಗಳಿಗೆ ಕಷ್ಟವುಂಟಾಗುವುದಕ್ಕಾಗಿ ಶಿವನಿಗೆ ತೈಲಾಭಿಷೇಕವನ್ನು ಮಾಡಬೇಕು. ಸುವಾಸನೆಯುಳ್ಳ ತೈಲಾಭಿಷೇಕವನ್ನು ಮಾಡಿಸಿದರೆ ಹೆಚ್ಚಾದ ಸುಖಭೋಗವು ಲಭಿಸುವುದು. ಸಾರ್ಷಪತೈಲ(ಕುಸುಮೆ ಅಥವಾ ಸಾಸಿವೆಎಣ್ಣೆ)ದಿಂದ ಅಭಿಷೇಕ ಮಾಡಿಸಿದರೆ ಶತ್ರುಗಳು ನಾಶವಾಗುವರು. ಜೇನುತುಪ್ಪದಿಂದ ಅಭಿಷೇಕಮಾಡಿಸಿ ಶಿವನನ್ನ ಅರ್ಚಿಸಿದರೆ ಯಕ್ಷರಾಜ(ಕುಬೇರ)ನಾಗಿ ಶಿವನ ಸಾನ್ನಿಧ್ಯವನ್ನು ಪಡೆಯಬಹುದು. ಕಬ್ಬಿನ ಹಾಲಿನಿಂದ ಅಭಿಷೇಕಮಾಡಿಸಿದರೆ ಸಕಲ ಆನಂದವೂ ಲಭಿಸುವುದು. ಗಂಗಾಜಲದಿಂದ ಅಭಿಷೇಕಮಾಡಿಸಿದರೆ, ಭೋಗ-ಮುಕ್ತಿಗಳೆರಡೂ ಲಭಿಸುವುದು. ಈ ಎಲ್ಲಾ ಅಭಿಷೇಕಗಳನ್ನು ಹತ್ತುಸಾವಿರ ಬಾರಿ ಮೃತ್ಯುಂಜಯ ಮಂತ್ರದಿಂದ ಮಾಡಬೇಕು ಎಂದ ಬ್ರಹ್ಮ, ಷಣ್ಮುಖ–ಪಾರ್ವತಿಯೊಡನಿರುವ ಶಿವನನ್ನರ್ಚಿಸಿದರೆ, ಇಹಲೋಕದಲ್ಲಿ ಪುತ್ರ ಮತ್ತು ಪೌತ್ರರೊಡನೆ ಸಕಲ ಸೌಖ್ಯವನ್ನೂ ಪಡೆದು, ಕೊನೆಗೆ ಸಕಲ ಸುಖಗಳಿಗೆ ಆಶ್ರಯವಾದ ಶಿವಲೋಕವನ್ನು ಪಡೆಯುವರು ಎನ್ನುತ್ತಾನೆ.

ಹೀಗೆ ಭಕ್ತಿಯಿಂದ ಶಿವಾರ್ಚನೆಯನ್ನು ಮಾಡಿದ ಜನರು, ಕೋಟಿ ಸೂರ್ಯರಂತೆ ಪ್ರಕಾಶಮಾನವಾದ, ಎಲ್ಲಿಗೆಂದರೆ ಅಲ್ಲಿಗೆ ಹೋಗಲು ಸಾಮರ್ಥ್ಯವುಳ್ಳ, ದಿವ್ಯವಾದ ವಿಮಾನದಲ್ಲಿ ಸುರಸುಂದರಿಯರೊಡನೆ ಕುಳಿತು, ಸೊಗಸಾದ ಗಾನವನ್ನು ಕೇಳುತ್ತಾ ರುದ್ರಲೋಕಕ್ಕೆ ಹೋಗುವರು. ಅಲ್ಲಿ ಒಂದು ಕಲ್ಪಪರ್ಯಂತರದವರೆಗು ಬಗೆಬಗೆಯ ಸುಖಗಳನ್ನು ಅನುಭವಿಸಿ, ಕೊನೆಗೆ ಬ್ರಹ್ಮಜ್ಞಾನವನ್ನು ಪಡೆದು ಮುಕ್ತಿಯನ್ನು ಹೊಂದುವರು – ಎಂದು ಬ್ರಹ್ಮನು ನಾರದನಿಗೆ ಹೇಳುತ್ತಾನೆ. ಇದನ್ನು ಸೂತಮುನಿಯು ಪ್ರಯಾಗದ ಋಷಿಗಳಿಗೆ ಹೇಳುವುದರೊಂದಿಗೆ ಶ್ರೀಶಿವಮಹಾಪುರಾಣದಲ್ಲಿ ಎರಡನೆಯದಾದ ರುದ್ರಸಂಹಿತೆಯಲ್ಲಿ ಮೊದಲನೆಯ ಖಂಡವಾದ ಸೃಷ್ಟಿ ಉಪಾಖ್ಯಾನದಲ್ಲಿ ಶಿವಪೂಜಾವಿಧಾನ ವರ್ಣನ ಎಂಬ ಹದಿನಾಲ್ಕನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಉತ್ತರ ಪ್ರದೇಶದ ಅಲಹಾಬಾದ್ ವಿಶ್ವವಿದ್ಯಾಲಯವು ಈಗ ಭಯೋತ್ಪಾದನಾ ಚಟುವಟಿಕೆಗಳ ಹೊಸ ಕೇಂದ್ರ ಸ್ಥಾನವಾಗಿ ಬದಲಾಗಿದೆ. ವಿಶ್ವವಿದ್ಯಾಲಯದಲ್ಲಿ ಬಾಂಬ್ ತಯಾರಿಸುತ್ತಿದ್ದ ವೇಳೆ 25 ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ. ಯೋಗಿ ಆದಿತ್ಯನಾಥ ಅವರ ಸರ್ಕಾರ ಇದ್ದ ಕಾರಣಕ್ಕೆ ಈ ಬಂಧನ ಸಾಧ್ಯವಾಗಿದೆ. ಬಂಧಿತರೆಲ್ಲರೂ ಮುಸ್ಲಿಮರು. ಹೀಗಾಗಿ ಯಾವ ಮಾಧ್ಯಮವೂ ಈ ಸುದ್ದಿಯನ್ನು ಪ್ರಕಟಿಸುತ್ತಿಲ್ಲ’ ಎಂಬ ವಿವರ ಇರುವ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಇದರ ಜತೆಗೆ 23 ಜನರನ್ನು ಪೊಲೀಸರು ಬಂಧಿಸಿ, ಪೋಸು ನೀಡಿರುವ ಚಿತ್ರವೂ ವೈರಲ್ ಆಗಿದೆ.

‘ಇದು ಸುಳ್ಳು ಸುದ್ದಿ’ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘ಮಧ್ಯಪ್ರದೇಶದ ರತ್ಲಾಮ್ ಜಿಲ್ಲೆಯಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ 15 ಪುರುಷರು ಮತ್ತು 8 ಮಹಿಳೆಯರನ್ನು 2019ರ ಜುಲೈನಲ್ಲಿ ಪೊಲೀಸರು ಬಂಧಿಸಿದ್ದರು. ಬಂಧಿತರನ್ನು ಕೂರಿಸಿ, ತಾವು ನಿಂತುಕೊಂಡು ಪೊಲೀಸರು ತೆಗೆಸಿಕೊಂಡಿದ್ದ ಚಿತ್ರವನ್ನು ಪತ್ರಿಕೆಗಳು ಪ್ರಕಟಿಸಿದ್ದವು. ಪತ್ರಿಕಾ ಪ್ರಕಟಣೆಯ ಕ್ಲಿಪ್ಪಿಂಗ್ ಅನ್ನು ರತ್ಲಾಮ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟ್ವೀಟ್ ಮಾಡಿದ್ದರು. ಆ ಕ್ಲಿಪ್ಪಿಂಗ್‌ನ ಚಿತ್ರವನ್ನು ಬಳಸಿಕೊಂಡು, ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಬಾಂಬ್ ತಯಾರಿಸುತ್ತಿದ್ದ ವೇಳೆ 25 ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ ಎಂದು ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ ಎಂದು ದಿ ಲಾಜಿಕಲ್ ಇಂಡಿಯನ್ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಬಾಳೊಂದು ಕಡೆಗೋಲು

ಹಾಲ ಕಾಯಿಸಿ, ಹೆಪ್ಪನಿಕ್ಕಿ ಕಡೆದೊಡೆ, ಮೊದಲು |
ಮೇಲೆ ಕಾಣದ ಬೆಣ್ಣೆ ತೇಲಿ ಬರುವಂತೆ ||
ಬಾಳನೀ ಜಗದ ಮಂತುವು ಕಡೆಯಲೇಳುವುದು |
ಆಳದಿಂದಾತ್ಮಮತಿ – ಮಂಕುತಿಮ್ಮ || 615 ||

ಪದ-ಅರ್ಥ: ಹೆಪ್ಪನಿಕ್ಕಿ = ಹೆಪ್ಪನ್ನು + ಇಕ್ಕಿ(ಹಾಕಿ), ಮಂತು = ಕಡೆಗೋಲು, ಕಡೆಯಲೇಳುವುದು = ಕಡೆಯಲು + ಏಳುವುದು, ಆಳದಿಂದಾತ್ಮಮತಿ = ಆಳದಿಂದ + ಆತ್ಮಮತಿ(ಆತ್ಮಪ್ರಜ್ಞೆ).

ವಾಚ್ಯಾರ್ಥ: ಹಾಲನ್ನು ಕಾಯಿಸಿ, ಹೆಪ್ಪು ಹಾಕಿ, ಕಡೆದಾಗ, ಮೊದಲು ಕಾಣದೇ ಇದ್ದ ಬೆಣ್ಣೆ ತೇಲಿ ಬರುತ್ತದೆ. ಅದರಂತೆ ನಮ್ಮ ಬದುಕನ್ನು ಪ್ರಪಂಚದ ಕಡೆಗೋಲು ಕಡೆದಾಗ, ಆಳದಿಂದ ಆತ್ಮಪ್ರಜ್ಞೆ ಎದ್ದು ಬರುತ್ತದೆ.

ವಿವರಣೆ: ಬದುಕಿಗಿಂತ ದೊಡ್ಡ ವಿಶ್ವವಿದ್ಯಾಲಯವಿಲ್ಲ. ಪ್ರತಿಕ್ಷಣ, ಪ್ರತಿ ಸಂದರ್ಭ, ನಮ್ಮ ಜೀವನಕ್ಕೊಂದು ಪಾಠ ಕಲಿಸುತ್ತದೆ. ಹತ್ತಾರು ಸಾವಿರ ಕೋಟಿ ಹಣ ಸಂಪಾದಿಸಿದ ‘ರೇಮಂಡ್ಸ್’ ಕಂಪನಿಯ ಮಾಲಿಕ ಈಗ ಒಂದು ಕೋಣೆಯ ಬಾಡಿಗೆಯ ಮನೆಯಲ್ಲಿದ್ದು, ಜೀವನ ನಡೆಸಲೂ ಆಗದಷ್ಟು ಕಡಿಮೆ ಹಣದಲ್ಲಿ ಬದುಕಲು ಒದ್ದಾಡುತ್ತಿದ್ದಾನೆ ಎಂದು ವಾರ್ತೆ ಕೇಳಿದೆವು. ಇದಕ್ಕೆ ಕಾರಣ, ಅವನ ಮಗನೇ ಅವನ ಸಮಸ್ತ ಆಸ್ತಿಯನ್ನು ತೆಗೆದುಕೊಂಡು ಹೊರಗೆ ಹಾಕಿರುವುದು. ಗಟ್ಟಿಯಾದ ಸಂಬಂಧ, ರಕ್ತ ಸಂಬಂಧವೇ ಆಗಬೇಕೆಂದಿಲ್ಲ. ಹಣ ಮುಂದೆ ಬಂದಾಗ ಅಂತಃಕರಣ ಶಿಲೆಯಾಗಿ ಹೋಗುತ್ತದೆ ಎಂದು ಈ ವಾರ್ತೆ ಕಲಿಸುತ್ತದೆ. ಇತ್ತೀಚಿಗೆ ಐಎಎಸ್ ಅಧಿಕಾರಿಯೊಬ್ಬರು ಸಮಸ್ಯೆಗಳ ಒತ್ತಡವನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡರು. ಯಾಕೆ? ಅವರಿಗೆ ತರಬೇತಿ ದೊರೆತದ್ದೇ ಒತ್ತಡವನ್ನು ನಿಭಾಯಿಸಲು. ಅಂದರೆ ಎಷ್ಟೇ ತರಬೇತಿ ಸಿಕ್ಕರೂ ಅದು ಸ್ವಂತದ ವಿಷಯ ಬಂದಾಗ ಅರೆದು ಬಿಡುತ್ತದೆ.

ಎಷ್ಟು ಕಠೋರವಾದ ಗುರು ಈ ಬದುಕು! ಶಾಲೆಯಲ್ಲಿ ಗುರುಗಳು, ಕಲಿಯುವುದಿಲ್ಲವೆಂದು ವಿದ್ಯಾರ್ಥಿ ಹಟ ಮಾಡಿದರೆ, ಬಿಟ್ಟು ಬಿಡಬಹುದು. ಆದರೆ ಬದುಕಿನ ಗುರು ಬಿಡಲಾರ. ಹಿಡಿದು, ಎಳೆತಂದು ಪಾಠ ಕಲಿಸುತ್ತಾನೆ. ಶಿಕ್ಷಣದಲ್ಲಿ ಮೊದಲು ಕಲಿಸುತ್ತೇವೆ ಆಮೇಲೆ ಫಲಿತಾಂಶವನ್ನು ಕೊಡುತ್ತೇವೆ. ಆದರೆ ಬದುಕೆಂಬ ಶಿಕ್ಷಕ ಮೊದಲು ಪರಿಣಾಮ ತೋರಿಸಿ ಆಮೇಲೆ ಪಾಠ ಕಲಿಸುತ್ತಾನೆ. ಆತ ಅತ್ಯಂತ ಬೇಜಾರಿಲ್ಲದೆ ಕಲಿಸುತ್ತಾನೆ. ನಮ್ಮನ್ನು ಅಸಹಾಯಕರನ್ನಾಗಿ ಮಾಡಿ, ಮೂಗು ಹಿಡಿದು, ಬಾಯಿ ತೆರೆಸಿ, ತಲೆಗೊಂದು ಪೆಟ್ಟು ಕೊಟ್ಟು, ಕೆಲವೊಮ್ಮೆ ತಲೆ ಸವರಿ, ಮೃದು ಮಾತನ್ನಾಡಿ ಕಲಿಸುವ ಅವನ ಚಾಲಾಕಿತನ ಬೆರಗು ಹುಟ್ಟಿಸುತ್ತದೆ.

ಇವೆಲ್ಲ ಕಲಿಸಿದ ಪಾಠಗಳು, ವ್ಯಕ್ತಿ ಮಾಗುವ ಹೊತ್ತಿಗೆ, ಅವನಲ್ಲಿ ಒಂದಿಷ್ಟು ಮಾನವೀಯತೆ, ಒಂದು ಚೂರು ಪ್ರಬುದ್ಧತೆ, ಕರುಣೆಗಳನ್ನು ಉಕ್ಕಿಸುತ್ತವೆ. ಇನ್ನು ವಿಧೇಯ ವಿದ್ಯಾರ್ಥಿಗಳಿಗೆ ಅದು ಅವರನ್ನು ಅಂತರೀಕ್ಷಣೆ ಮಾಡುವಂತೆ ಹಚ್ಚಿ, ಅಧ್ಯಾತ್ಮಕತೆಯನ್ನು ಚಿಗುರಿಸುತ್ತದೆ, ಆತ್ಮಪ್ರಜ್ಞೆಯನ್ನು ಬೆಳೆಸುತ್ತದೆ. ಸದಾ ಅತೃಪ್ತಿ ಬೋಗಿಯಾಗಿದ್ದ ಯಯಾತಿ, ತನ್ನ ಮಗನಿಂದಲೇ ಯೌವನವನ್ನು ಪಡೆದರೂ ಸುಖಿಯಾಗದೆ, ಕೊನೆಗೆ, ಕಾಮದಿಂದ ಕಾಮವನ್ನು ಗೆಲ್ಲುವುದು ಸಾಧ್ಯವಿಲ್ಲ ಎಂದು ಎಲ್ಲವನ್ನು ತ್ಯಜಿಸಿ ಜ್ಞಾನ ಪಡೆದು, ಮುನಿಯಾದ. ದ್ವೇಷದ ದಳ್ಳುರಿಯಲ್ಲಿ ಬೆಂದ ಕೌಶಿಕ, ವಶಿಷ್ಠರ ಆಶ್ರಮವನ್ನು ಹಾಳು ಮಾಡಿ, ನೂರು ಮಕ್ಕಳನ್ನು ಕೊಂದು ವಿಜೃಂಭಿಸಿದರೂ, ಬದುಕು ನೀಡಿದ ಪಾಠದಿಂದ ತ್ರಿವಿಕ್ರಮನಾಗಿ ಬೆಳೆದು ಬ್ರಹ್ಮರ್ಷಿಯಾದ.

ಕಗ್ಗ ಅದನ್ನು ಚೆಂದನಾಗಿ ಹೇಳುತ್ತದೆ. ಜಗದ ಅನುಭವವೆಂಬ ಕಡೆಗೋಲು ನಮ್ಮ ಮನ, ಬುದ್ಧಿಗಳನ್ನು ಸತತವಾಗಿ ಕಡೆದು, ಆಳದಿಂದ ಆತ್ಮಪ್ರಜ್ಞೆ ಮೂಡುವಂತೆ ಮಾಡುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಏಪ್ರಿಲ್ 27, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ಚೈತ್ರ ಕೃಷ್ಣ ದ್ವಾದಶಿ ಗಂ. 24-24, ನಕ್ಷತ್ರ: ಪೂರ್ವಾಭಾದ್ರ ಗಂ. 17-05 ಯೋಗ: ಐಂದ್ರ ಗಂ. 17-36, ಕರಣ: ಕೌಲವ ಗಂ. 12-33, ಮೇಷ ಮಾಸದ 13 ನೇ ದಿನ. ರಾಹುಕಾಲ: ಮಧ್ಯಾಹ್ನ 12:00 –01:30 ಸೂರ್ಯೋದಯ : 06-15 ಸೂರ್ಯಾಸ್ತ : 06-42 ಮುಸ್ಲಿಂ ದಿನಾಂಕ : 25 ರಂಜಾನ್ ಅದೃಷ್ಟ ಸಂಖ್ಯೆ: 5, 7

ಮೇಷ: ಕೃಷಿಗೆ ಸಂಬಂಧಿಸಿದ ಕಾರ್ಯಗಳು ಬಿಡುವಿಲ್ಲದೆ ನಡೆಯಲಿವೆ. ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಎಣ್ಣೆ ಮತ್ತು ಬೇಳೆ ಕಾಳು ವ್ಯಾಪಾರದಲ್ಲಿ ಮಾರಾಟ ಹೆಚ್ಚಳ. ಬಂಧು ಮಿತ್ರರು ಮನೆಗೆ ಬರಲಿದ್ದಾರೆ.

ವೃಷಭ: ಕೇವಲ ದೇವತಾ ಕೃಪೆಯಿಂದ ನಿಮ್ಮ ಎಲ್ಲಾ ಕೆಲಸಗಳನ್ನೂ ಲಾಭಮಯವಾಗಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ, ಹಾಗಾಗಿ ಬುದ್ಧಿವಂತಿಕೆಯನ್ನೂ ಉಪಯೋಗಿಸಬೇಕಾಗುತ್ತದೆ. ಕಂಕಣ ಬಲ ಕೂಡಿ ಬರುವುದು.

ಮಿಥುನ: ಆರ್ಥಿಕವಾಗಿ ಬೆಳೆಯುವ ಸದಾವಕಾಶವನ್ನು ಪಡೆಯಲಿದ್ದೀರಿ. ವಿದೇಶಿ ಸಂಪರ್ಕಗಳಿಂದ ಉತ್ತಮವಾದ ಪ್ರಯೋಜನ ಆಗಲಿದೆ. ಶಿಸ್ತುಬದ್ಧವಾದ ನಿಯಮದ ಆಹಾರದಿಂದ ಆರೋಗ್ಯ ವೃದ್ಧಿಯಾಗುವುದು.

ಕರ್ಕಾಟಕ: ಸಂಗೀತದಲ್ಲಿ ಪರಿಣತಿ ಹೊಂದಿರುವವರಿಗೆ ಅವಕಾಶಗಳು ಅರಸಿ ಬರಲಿವೆ. ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟವು ಅತ್ಯಂತ ಲಾಭದಾಯಕವೆನಿಸುವುದು. ವಿದ್ಯಾರ್ಥಿಗಳಿಗೆ ಪರಿಶ್ರಮದಿಂದ ಉನ್ನತ ಶ್ರೇಣಿ ಲಭಿಸುವುದು.

ಸಿಂಹ: ಅಪರಿಚಿತ ವ್ಯಕ್ತಿಯಿಂದ ಮುಖ್ಯವಾದ ಸಲಹೆಯೊಂದನ್ನು ಪಡೆಯಲಿದ್ದೀರಿ, ಅದನ್ನು ಜೀವನದಲ್ಲಿ ರೂಢಿಸಿಕೊಳ್ಳಿ. ನಿಮ್ಮ ಮುಂದಿನ ಹಾದಿ ಏನೆಂಬುದು ನಿಮಗೆ ಈದಿನ ಸ್ಪಷ್ಟವಾಗಿರಲಿ.

ಕನ್ಯಾ: ಇತರರಿಗೆ ನೋವಾಗದಂತೆ ಹಾಗೂ ಅಸೂಯೆ ಉಂಟಾಗದಂತೆ ಕಾರ್ಯ ಸಾಧಿಸಿಕೊಳ್ಳುವುದು ಉತ್ತಮ. ಅತಿಯಾದ ಔದಾರ್ಯತನ ತೋರಬೇಕೆನಿಸಿದಲ್ಲಿ ನಿಮ್ಮ ಹಣಕಾಸಿನ ಸ್ಥಿತಿಯನ್ನು ಒಮ್ಮೆ ಗಮನಿಸಿಕೊಳ್ಳಿರಿ.

ತುಲಾ: ಭೂಮಿ ಖರೀದಿಯ ವಿಚಾರದಲ್ಲಿ ಮೋಸವಾಗುವ ಸಾಧ್ಯತೆಗಳಿದೆ, ಎಚ್ಚರವಹಿಸಿ. ಈ ದಿನ ನೀವು ಯಾರಿಗೂ ಜಾಮೀನುದಾರರಾಗುವುದು ಸರಿಯಲ್ಲ. ಶ್ರೀ ವಿಷ್ಣುಸಹಸ್ರನಾಮದ ಪಠನೆಯು ನೆಮ್ಮದಿ ತರುವುದು.

ವೃಶ್ಚಿಕ: ಸಂತಾನ ಪ್ರಾಪ್ತಿಯಾಗಲಿದ್ದು ಸಂಸಾರದಲ್ಲಿ ಸಂತೃಪ್ತ ಜೀವನ ನಡೆಸುವಂತಾಗುತ್ತದೆ. ತಾಳ್ಮೆಯಿಂದ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಎಚ್ಚರಿಕೆಯ ಮಾತುಗಳು ಹಿರಿಯರಿಂದ ಕೇಳಿ. ಅದೇ ರೀತಿಯಾಗಿ ನಡೆದುಕೊಳ್ಳಿ.

ಧನು: ಅಕ್ಕಪಕ್ಕದವರಲ್ಲಿ ಸಂಯಮದ ನಡವಳಿಕೆ ಅಗತ್ಯ. ನಾನಾ ರೀತಿಯಲ್ಲಿ ಹಣವು ನಿಮ್ಮ ಕೈ ಸೇರಲಿದೆ. ನಿಮ್ಮ ಅನಿವಾರ್ಯತೆಗೆ ಬಂಧು–ಮಿತ್ರರಿಂದ ಉತ್ತಮ ಸಹಕಾರ ಲಭ್ಯವಾಗುವುದು.

ಮಕರ: ಹಣ್ಣು, ತರಕಾರಿ ವ್ಯಾಪಾರಿಗಳಿಗೆ ಸರಕು ಸಾಗಾಣಿಕೆಯಲ್ಲಿ ತೊಂದರೆಗಳಾಗಬಹುದು. ವರ್ಗಾವಣೆಯಿಂದಾಗಿ ದೂರದೂರಿನಲ್ಲಿ ವಾಸಿಸುವ ಸಂದರ್ಭ ಬರಲಿದೆ. ಆರೋಗ್ಯದಲ್ಲಿ ಸಣ್ಣ-ಪುಟ್ಟ ಸಮಸ್ಯೆಗಳು ಎದುರಾಗಬಹುದು.

ಕುಂಭ: ಕೆಲಸಗಳು ಮಂದಗತಿಯಲ್ಲಿ ಸಾಗುವುದು. ಕೆಲವು ಮೂಲಭೂತ ಬದಲಾವಣೆಗಳಾಗುವ ಸಾಧ್ಯತೆ ಇದೆ. ಭವಿಷ್ಯದ ದೃಷ್ಟಿಯಿಂದ ದೊಡ್ಡದು ಸಣ್ಣದು ಎಂಬ ಬೇಧ ಮಾಡದೇ ತಕ್ಷಣ ಕಾರ್ಯೋನ್ಮುಖರಾಗುವುದು ಉತ್ತಮ.

ಮೀನ: ನಿಮ್ಮ ಗುಣ ಧರ್ಮ ನಿಮ್ಮ ಬೆಂಬಲಕ್ಕಿದೆ. ಏನನ್ನಾದರೂ ಸಾಧಿಸಲೇ ಬೇಕೆಂದಿರುವ ನಿಮಗೆ ಆತ್ಮವಿಶ್ವಾಸದ ಕೊರತೆ ಕಾಣಿಸದು. ಗಂಟಲ ಬೇನೆ ಎದುರಾಗಬಹುದು. ಈ ದಿನ ಸಿಹಿ-ಕಹಿಯ ಸಮ್ಮಿಶ್ರ ಫಲವನ್ನು ಕಾಣುವಿರಿ.

ಪದಬಂಧ 4940


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಾದ ಎಸಗಿದ ತಪ್ಪು! (3)
4.ಕೆಟ್ಟ ವಾಸನೆಯಿದು (4)
6.ಮಜದಲ್ಲಿರುವ ಮನ್ಮಥ ಕಾಣುವನೇ? (4)
8.ಕಣ್ಣಿನಿಂದ ಬರುತ್ತಿರುವ ಪಿಚ್ಚು (3)
11.ಮುದದಿಂದಿರುವ ಅಜ್ಜ (3)
13.ಇದಿನ್ನೂ ಎಳೆ ಮಗು (4)
17.ಗುಣಿಯಲ್ಲಿ ಬಿತ್ತಿರುವ ಅಲಸಂದೆ (4)
18.ಭಯಂಕರವಾದ ಕೊಲೆ (3)

ಮೇಲಿಂದ ಕೆಳಕ್ಕೆ

1.ರೇಖಾಗಣಿತದಲ್ಲಿ ಸಾಧನೀಯ ತತ್ವ (3)
2.ಬಾಜಿ ಕಟ್ಟಲು ಬಂದಿರುವ ಮೋಸಗಾರ (4)
3.ಆಲದ ಮರಕ್ಕೊರಗಿದ ಸೋಮಾರಿ (3)
5.ಪ್ರಿಯತಮನ ನೋಡುವಾಗ ಆವರಿಸಿದ ಕತ್ತಲು (2)
7.ಗತಿಸಿದ ಪುಣ್ಯ ಪುರುಷರ ಹುಟ್ಟುಹಬ್ಬ (3)
9.ಕೊಡ ತಕ್ಕ ಹಣ (3)
10.ಕೊನೆಗೆ ಕಾಯ ಕಂಡಾಗಲೇ ಈ ಅನುಮಾನ! (3)
12.ಲೆಕ್ಕ ಬರೆಯುವವನು ಕೈ ಮುಂದಿಟ್ಟಿದ್ದಾನಲ್ಲಾ? (4)
14.ದೇವಲೋಕದ ಹಸು (3)
15.ಹರಸುತಲಿದ್ದಾಗ ಕಾಣಿಸಿದ ಮಗ (2)
16.ಜೀಕುವ ಸಾಧನ! (3)



4939ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭ್ರಮನಿರಸನ 4.ಗುಣಾಕಾರ 5.ಚಾಣಾಕ್ಷ 7.ಉದ್ದಾಮ 9.ನಗದು 12.ಗಟಾರ 13.ಕನ್ನಡಕ 15.ವಿಗ್ರಹರಾಧನೆ

ಮೇಲಿಂದ ಕೆಳಕ್ಕೆ:
1.ಭ್ರಷ್ಟಾಚಾರ 2.ನಗು 3.ಮರವೆ 6.ಕ್ಷಮಾದಾನ 7.ಉಮೇದು 8.ಮದುಮಗ 10.ಅರಮನೆ 11.ತಾಕತ್ತು 14.ಕವಿ

ಸುಡೊಕು 5326

	4				1	8	2	
8		9						5
	6					3		7
	8			1			5	
9		3	5	2	8	4		6
	5			3			8	
5		4		8			7	
2	9		1		7	5		4
		6		4			9	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5325 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ಎಲ್‌ಐಸಿ ಐಪಿಒ: ಪ್ರತಿ ಷೇರಿನ ಬೆಲೆ ₹902–949ರಂತೆ ನಿಗದಿ

ಸಣ್ಣ ಹೂಡಿಕೆದಾರರಿಗೆ ರಿಯಾಯಿತಿ

ಮುಖ್ಯಾಂಶಗಳು

- ಪಾಲಿಸಿದಾರರಿಗೆ ರಿಯಾಯಿತಿ, ಮೀಸಲಾತಿ
- ಸಣ್ಣ ಹೂಡಿಕೆದಾರರಿಗೆ ಶೇಕಡ 35ರಷ್ಟು ಷೇರುಗಳು ಮೀಸಲು

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಆರಂಭಿಕ ಸಾರ್ವಜನಿಕ ಕೊಡುಗೆಗಾಗಿ (ಐಪಿಒ) ತನ್ನ ಷೇರುಗಳ ಬೆಲೆಯನ್ನು ₹ 902–949ಕ್ಕೆ ನಿಗದಿ ಮಾಡಿದೆ. ಐಪಿಒ ಮೇ 4ರಿಂದ ಮುಕ್ತವಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಐಪಿಒ ಮೂಲಕ ಕೇಂದ್ರ ಸರ್ಕಾರವು ₹ 21 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಗುರಿ ಹೊಂದಿದೆ. ಎಲ್‌ಐಸಿಯು ತನ್ನ ಪಾಲಿಸಿ ಹೊಂದಿರುವ ಹೂಡಿಕೆದಾರರಿಗೆ ಪ್ರತಿ ಷೇರಿಗೆ ₹ 60ರಷ್ಟು ರಿಯಾಯಿತಿ ನೀಡಲಿದೆ. ಸಣ್ಣ ಹೂಡಿಕೆದಾರರಿಗೆ ಮತ್ತು ತನ್ನ ನೌಕರರಿಗೆ ₹ 40ರಷ್ಟು ರಿಯಾಯಿತಿ ಕೊಡಲಿದೆ.

ಆರಂಭಿಕ ಹೂಡಿಕೆದಾರರು (ಆ್ಯಂಕರ್ ಇನ್‌ವೆಸ್ಟರ್) ಮೇ 2ರಿಂದ ಅರ್ಜಿ ಸಲ್ಲಿಸಬಹುದು. ಈ ಐಪಿಒ ಮೂಲಕ ಕೇಂದ್ರ ಸರ್ಕಾರವು ಎಲ್‌ಐಸಿಯಲ್ಲಿ ತಾನು ಹೊಂದಿರುವ ಷೇರುಗಳ ಪೈಕಿ ಶೇಕಡ 3.5ರಷ್ಟನ್ನು (22.13 ಕೋಟಿ ಷೇರುಗಳು) ಮಾರಾಟ ಮಾಡಲಿದೆ.

ಇಷ್ಟು ಷೇರುಗಳಲ್ಲಿ 2.21 ಕೋಟಿ ಷೇರುಗಳು ಎಲ್‌ಐಸಿ ಪಾಲಿಸಿ ಹೊಂದಿರುವವರಿಗಾಗಿ ಮೀಸಲಾಗಿವೆ. ನೌಕರರಿಗೆ 15 ಲಕ್ಷ ಷೇರುಗಳನ್ನು ಮೀಸಲು ಇರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಇನ್ನುಳಿದ ಷೇರುಗಳ ಪೈಕಿ ಶೇ 50ರಷ್ಟನ್ನು ಅರ್ಹ ಸಾಂಸ್ಥಿಕ ಹೂಡಿಕೆದಾರರಿಗೆ, ಶೇ 35ರಷ್ಟನ್ನು ಸಣ್ಣ ಹೂಡಿಕೆದಾರರಿಗೆ ಮತ್ತು ಶೇ 15ರಷ್ಟನ್ನು ಸಾಂಸ್ಥಿಕೇತರ ಹೂಡಿಕೆದಾರರಿಗೆ ಮೀಸಲಾಗಿ ಇರಿಸಲಾಗುತ್ತದೆ ಎಂದು ಗೊತ್ತಾಗಿದೆ.

ಕೇಂದ್ರ ಸರ್ಕಾರವು ಎಲ್‌ಐಸಿಯಲ್ಲಿನ 31.6 ಕೋಟಿ ಷೇರುಗಳನ್ನು (ಶೇ 5ರಷ್ಟು) ಮಾರಾಟ ಮಾಡುವ ಉದ್ದೇಶವನ್ನು ಫೆಬ್ರುವರಿಯಲ್ಲಿ ಹೊಂದಿತ್ತು. ಇದಕ್ಕೆ ಸಂಬಂಧಿಸಿದಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಕರಡು ದಾಖಲೆ ಪತ್ರಗಳನ್ನು ಸಲ್ಲಿಸಿತ್ತು. ಆದರೆ ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮವಾಗಿ ಷೇರು ಮಾರುಕಟ್ಟೆಯಲ್ಲಿ ಉಂಟಾದ ಅಸ್ಥಿರತೆಯಿಂದಾಗಿ ಐಪಿಒ ಯೋಜನೆಗೆ ಅಡ್ಡಿ ಆಯಿತು. ಷೇರು ವಿಕ್ರಯದ ಪ್ರಮಾಣವನ್ನು ಶೇ 3.5ಕ್ಕೆ ತಗ್ಗಿಸುವ ತೀರ್ಮಾನವನ್ನು ಕೇಂದ್ರವು ಹಿಂದಿನ ವಾರ ಕೈಗೊಂಡಿತು. ಸೆಬಿ ನಿಯಮಗಳ ಪ್ರಕಾರ ₹ 1 ಲಕ್ಷ ಕೋಟಿಗಿಂತ ಹೆಚ್ಚಿನ ಮೌಲ್ಯದ ಕಂಪನಿಗಳು ಐಪಿಒ ಮೂಲಕ ಕನಿಷ್ಠ ಶೇ 5ರಷ್ಟು ಷೇರುಗಳನ್ನು ಮಾರಾಟ ಮಾಡಬೇಕು. ಆದರೆ, ಈ ನಿಯಮದಿಂದ ತನಗೆ ವಿನಾಯಿತಿ ನೀಡುವಂತೆ ಕೇಂದ್ರವು ಸೆಬಿಗೆ ಮನವಿ ಮಾಡಿದೆ ಎಂದು ಗೊತ್ತಾಗಿದೆ. ಎಲ್‌ಐಸಿಯ ಮಾರುಕಟ್ಟೆ ಮೌಲ್ಯವು ₹ 6 ಲಕ್ಷ ಕೋಟಿ ಎಂದು ಅಂದಾಜು ಮಾಡಲಾಗಿದೆ.

ಪ್ರಶ್ನೋತ್ತರ


ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಚಂದ್ರಶೇಖರ ಬೆಳ್ಗಾಂವ್ಕರ್, ಬೆಳಗಾವಿ

- **ಪ್ರಶ್ನೆ: ಒಂದು ತಿಂಗಳ ಹಿಂದೆ ನಾನು ಕೆಲವು ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡಿದ್ದೆ. ಷೇರುಗಳು ಉತ್ತಮ ಕಂಪನಿಗಳದ್ದೇ ಆಗಿದ್ದವು. ಆದರೆ ಉಕ್ರೇನ್–ರಷ್ಯಾ ಯುದ್ಧದ ಪರಿಣಾಮವಾಗಿ ನಿಫ್ಟಿ ಸೂಚ್ಯಂಕ ಬಹಳ ಅಸ್ಥಿರವಾದುದನ್ನು ಕಂಡು ಸ್ನೇಹಿತರ ಸಲಹೆಯಂತೆ ಬಹಳ ನಷ್ಟದೊಂದಿಗೆ ಸ್ಟಾಪ್ ಲಾಸ್ ಥಿಯರಿಗೆ ಅನುಗುಣವಾಗಿ ಮಾರಾಟ ಮಾಡಿದೆ. ಸುಮಾರು ₹ 1 ಲಕ್ಷದಷ್ಟು ನಷ್ಟ ಕಂಡೆ. ಮುಂದೆ ಷೇರು ಮಾರುಕಟ್ಟೆ ಸಹವಾಸ ಬೇಡವೆನಿಸಿದೆ. ಸಂಭವಿಸಿದ ನಷ್ಟಕ್ಕೆ ಆದಾಯ ತೆರಿಗೆಯಲ್ಲಿ ನನ್ನ ವೇತನ ತೆರಿಗೆಯೊಡನೆ ಕಡಿತ ಸಿಗುತ್ತದೆಯೇ?**

ಉತ್ತರ: ಷೇರು ಮಾರುಕಟ್ಟೆ ಒಂದು ಬಗೆಯಲ್ಲಿ ಕಂಡಾಗ ಹಾವು–ಏಣಿ ಆಟ ಇದ್ದಂತೆ. ಹಾಗಂತ ಇದು ಹೂಡಿಕೆದಾರನ ನಸೀಬು ಪರೀಕ್ಷಿಸುವ ವೇದಿಕೆ ಅಲ್ಲ. ಎಷ್ಟೇ ವಿಶ್ಲೇಷಣೆ ಮಾಡಿ ಹೂಡಿಕೆ ಮಾಡಿದರೂ ಲಾಭ ಬರಬೇಕೆಂಬುದೂ ಇಲ್ಲ. ಅದು ಸದಾ ಚಂಚಲ ಹಾಗೂ ವಿಭಿನ್ನ ಗತಿಯ, ವಿವಿಧ ದೃಷ್ಟಿಕೋನಗಳ, ವಿವಿಧ ಧೋರಣೆಗಳ ಹೂಡಿಕೆದಾರರ ಒಟ್ಟು ಮನಃಸ್ಥಿತಿಯ ಪ್ರತಿಬಿಂಬ. ಹಿಂದಿಯಲ್ಲಿ ಒಂದು ಮಾತಿದೆ 'ಭಾವ್ ಭಗವಾನ್ ಹೈ' ಎಂದು. ಅಂದಿನ ಕ್ಷಣಕ್ಕೆ ಆ ಬೆಲೆ ಸರಿ, ಆ ಬೆಲೆ ಇಂದೂ ಸಿಗಬೇಕೆಂದಿಲ್ಲ ಎಂಬುದೇ ಇದರ ಅರ್ಥ. ಸಮುದ್ರದಲ್ಲಿ ಅಲೆಗಳಲ್ಲಿ ಸೃಷ್ಟಿಸಲು, ಅಲೆಗಳನ್ನು ನಿಲ್ಲಿಸಲು ನಮ್ಮಿಂದ ಅಸಾಧ್ಯ. ಅಲೆಯ ಗತಿ ನೋಡಿ ನಾವು ಈಜಾಡಬೇಕಷ್ಟೇ.

ಯಾವುದೇ ಹೂಡಿಕೆಗೆ ಮೊದಲು ನಾವು ಆ ಕ್ಷಣ ಆ ಮೌಲ್ಯ ಕೊಟ್ಟು ಏತಕ್ಕೆ ಕೊಳ್ಳಬೇಕು, ಹೂಡಿಕೆಗೆ ಅದು ಸರಿಯಾದ ಮಟ್ಟದಲ್ಲಿದೆಯೇ, ನಷ್ಟವಾದ ಸಂದರ್ಭದಲ್ಲಿ ಅದು ಯಾವ ಮಟ್ಟಕ್ಕೆ ಇಳಿಯಬಹುದು, ಮೇಲ್ಮುಖವಾಗಿ ಸಾಗಿದರೆ ಯಾವ ಹಂತದಲ್ಲಿ ಲಾಭದೊಂದಿಗೆ ಹೊರಬರಬಹುದು ಇತ್ಯಾದಿ ಮಾಹಿತಿಯೊಂದಿಗೆ ಹೂಡಿಕೆ ಮಾಡಿದರೆ ಈ ವಿಚಾರದಲ್ಲಾಗುವ ಅಚಾತುರ್ಯಗಳನ್ನು ಬಹಳಷ್ಟು ನಿವಾರಿಸಬಹುದು. ದೀರ್ಘಾವಧಿ ಹೂಡಿಕೆದಾರರು ತಮ್ಮ ಎಲ್ಲ ಹಣವನ್ನು ಒಂದೇ ಬಾರಿ ಮಾರುಕಟ್ಟೆಯಲ್ಲಿ ತೊಡಗಿಸುವುದು ಎಲ್ಲ ಕಾಲಕ್ಕೂ ಸರಿಯೆನಿಸಲಿಕ್ಕಿಲ್ಲ. ಆಯ್ದ ಕಂಪನಿಗಳ ಷೇರುಗಳು ಉತ್ತಮವಾಗಿವೆ ಎಂಬ ಕಾರಣಕ್ಕೆ ಅವುಗಳ ಬೆಲೆ ಸಮರ್ಪಕವಾಗಿರುತ್ತದೆ ಎಂದೇನೂ ಅಲ್ಲ.

ಯಾವತ್ತೂ ಹೂಡಿಕೆಗೆ ಮುನ್ನ, ಯಾವ ಕಂಪನಿಯ ಷೇರುಗಳಲ್ಲಿ ಯಾವ ಕಾರಣಕ್ಕೆ ಹೂಡಿಕೆ ಮಾಡುತ್ತಿರುವುದು ಎಂಬುದು ಸ್ಪಷ್ಟವಾಗಿರಲಿ. ಅದರ ಸಾಧಕ–ಬಾಧಕಗಳನ್ನೂ ತುಲನೆ ಮಾಡಿ. ನಿಮ್ಮ ಗುರಿಯೊಳಗೆ ಬೆಲೆ ಬಂದಾಗಲಷ್ಟೇ ಖರೀದಿಸಿ, ಮಾರಾಟ ಮಾಡಿ. ಗುಣಮಟ್ಟದ ಉತ್ಪನ್ನಗಳನ್ನು ಮಾರಾಟ ಮಾಡುವ ವ್ಯಾಪಾರಿ ಅವುಗಳನ್ನು ಒಂದು ರೂಪಾಯಿ ಕಡಿಮೆ ಬೆಲೆಗೆ ಮಾರಾಟ ಮಾಡುವುದನ್ನು ಕಂಡಿದ್ದೀರಾ? ಷೇರು ಮಾರುಕಟ್ಟೆ ಒಂದೇ ದಿನದಲ್ಲಿ ಗಗನಕ್ಕೇರುವುದೂ ಇಲ್ಲ, ಪತನವಾಗುವುದೂ ಇಲ್ಲ. ನಿಮಗಾದ ಅಲ್ಪಾವಧಿ ಬಂಡವಾಳ ನಷ್ಟವನ್ನು ನಿಮ್ಮ ಸಂಬಳದ ಆದಾಯದೊಡನೆ ವಜಾ ಮಾಡಲು ಆದಾಯ ತೆರಿಗೆ ನಿಯಮದ ಅಡಿ ಅವಕಾಶವಿಲ್ಲ. ಬಂಡವಾಳ ನಷ್ಟವನ್ನು ಅದೇ ಆದಾಯದೊಡನೆ ಮುಂದಿನ ಎಂಟು ವರ್ಷಗಳಲ್ಲಿ ಆಗಬಹುದಾದ ಲಾಭದೊಡನೆ ವಜಾ ಮಾಡುವ ಅವಕಾಶವಿದೆ.

ಮಧುಸೂದನ, ಊರುಬೇಡ


- **ಪ್ರಶ್ನೆ: ಪಿತ್ರಾರ್ಜಿತವಾಗಿ ನನಗೆ ಬಂದಿರುವ ಕೃಷಿ ಜಮೀನನ್ನು ಮಾರಾಟ ಮಾಡಿ ಪೇಟೆಯಲ್ಲಿ ನಿವೇಶನ ಕೊಂಡು ಮನೆ ಕಟ್ಟಿಸಬೇಕು ಎಂದಿದ್ದೇನೆ. ನನಗೆ ಯಾವುದಾದರೂ ತೆರಿಗೆ ಅನ್ವಯ ಆಗುತ್ತದೆಯೇ? ಜಮೀನು ಮಾರಿದರೆ ಅಂದಾಜು ₹ 60 ಲಕ್ಷ ಬರಬಹುದು.**

ಉತ್ತರ: ಯಾವುದೇ ಆಸ್ತಿಯ ಬಂಡವಾಳ ಲಾಭದ (ಕ್ಯಾಪಿಟಲ್ ಗೇನ್ಸ್) ಮೇಲೆ ತೆರಿಗೆ ಅನ್ವಯವಾಗಲು ಅಂತಹ ಆಸ್ತಿ 'ಬಂಡವಾಳ ಆಸ್ತಿ'ಯಾಗಿರಬೇಕು. ಆದಾಯ ತೆರಿಗೆ ನಿಯಮ 2(14)ರ ಪ್ರಕಾರ, ಗ್ರಾಮೀಣ ಕೃಷಿ ಭೂಮಿ ಮಾರಾಟ ಮಾಡಿದ ಸಂದರ್ಭದಲ್ಲಿ ಅದು ಮೇಲೆ ಉಲ್ಲೇಖಿಸಿದ ಬಂಡವಾಳ ಆಸ್ತಿಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅಂತಹ ಕೃಷಿ ಭೂಮಿಯ ಮಾರಾಟದ ಮೇಲೆ ಕ್ಯಾಪಿಟಲ್ ಗೇನ್ಸ್ ತೆರಿಗೆ ವಿಧಿಸಲಾಗುವುದಿಲ್ಲ. ವಹಿವಾಟಿನ ಮೌಲ್ಯ ಎಷ್ಟೇ ಆದರೂ ಈ ವಿನಾಯಿತಿ ಅನ್ವಯ. ಅದೇ ಕೃಷಿ ಭೂಮಿ ಆಯಾ ಪಟ್ಟಣದ ಮುನಿಸಿಪಲ್ ವ್ಯಾಪ್ತಿಯಿಂದ 8 ಕಿ.ಮೀ ಒಳಗಿದ್ದರೆ, ಅಂತಹ ಆಸ್ತಿಯನ್ನು ಇತರ ಆಸ್ತಿ ಮಾರಾಟದಂತೆಯೇ ಪರಿಗಣಿಸಲಾಗುತ್ತದೆ ಹಾಗೂ ಕೃಷಿ ಭೂಮಿಯಾಗಿದ್ದರೂ ಮಾರಾಟದ ಮೇಲೆ ಬಂಡವಾಳ ಲಾಭದ ತೆರಿಗೆ ಅನ್ವಯಿಸುತ್ತದೆ.

ಬಂಡವಾಳ ಆಸ್ತಿಯ ವರ್ಗಾವಣೆಯ ಮೇಲೆ ಉಂಟಾಗುವ ಬಂಡವಾಳ ಲಾಭಗಳಿಗೆ ಸಂಬಂಧಿಸಿದಂತೆ ಸೆಕ್ಷನ್ 54(ಎಫ್) ಅಡಿಯಲ್ಲಿ ವಿನಾಯಿತಿ ಪಡೆಯಬಹುದು. ಈ ಪ್ರಯೋಜನವು ಒಬ್ಬ ವ್ಯಕ್ತಿ ಅಥವಾ ಹಿಂದೂ ಅವಿಭಕ್ತ ಕುಟುಂಬಕ್ಕೆ ಮಾತ್ರ ಲಭ್ಯವಿರುತ್ತದೆ. ಈ ಸೆಕ್ಷನ್ ಅಡಿ ತೆರಿಗೆ ವಿನಾಯಿತಿ ಪಡೆಯಲು ಆಸ್ತಿ ಮಾರಾಟ ಮಾಡಿ ನೀವು ಮೂರು ವರ್ಷದೊಳಗೆ ಮನೆ ಕಟ್ಟಿಸಬೇಕು ಹಾಗೂ ಮಾರಾಟವಾದ ಆರು ತಿಂಗಳೊಳಗೆ ಬಂದ ನಿವ್ವಳ ಮಾರಾಟ ಮೊತ್ತವನ್ನು ಬಂಡವಾಳ ಲಾಭ ಉಳಿತಾಯ ಖಾತೆಯಲ್ಲಿ ಮೂರು ವರ್ಷದ ತನಕ ತೆರಿಗೆ ಪಾವತಿ ಮುಂದೂಡುವ ಉದ್ದೇಶದಿಂದ ಹೂಡಿಕೆಗೆ ಅವಕಾಶವಿದೆ. ಸಂಪೂರ್ಣ ಮೊತ್ತ ಹೊಸ ಮನೆಗೆ ಬಳಸಿಕೊಂಡರೆ ಸಂಪೂರ್ಣ ತೆರಿಗೆ ವಿನಾಯಿತಿ ಇದೆ. ತೆರಿಗೆ ಅನ್ವಯವಾಗುವ ಬಗ್ಗೆ ನಿರ್ಧರಿಸಲು ನಿಮ್ಮ ಕೃಷಿ ಭೂಮಿ ಇರುವ ಸ್ಥಳದ ನಿಖರ ಮಾಹಿತಿ ಅಗತ್ಯ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,953
ಇಂದಿನ ಅಂತ್ಯ	17,200
▲	246
ದಿನದ ಕನಿಷ್ಠ	17,223

ವಿನಿಮಯ ದರ

$ ಡಾಲರ್	76.56
£ ಪೌಂಡ್	97.59
€ ಯುರೊ	82.1
¥ ಯೆನ್ (100ಕ್ಕೆ)	60.25

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹375
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹375

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1650 (1660)
ಸೋಯಾ (ರಿಫೈನ್ಡ್)	₹1585 (1580)
ಸೂರ್ಯಕಾಂತಿ (ರಿಫೈನ್ಡ್)	₹1900 (1890)
ಪಾಮೋಲಿನ್	₹1517 (1512)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)	
ದಪ್ಪ	₹1000-1400
ಮಧ್ಯಮ	₹700-1000
ಸಣ್ಣ	₹400-700

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹10000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹163.50
ಆರ್‌ಎಸ್‌ಎಸ್-5	₹157.50
ಗುಡ್ ಲಾಟ್	₹153.50

ಹುಂಡೈ ಅಯಾನಿಕ್ ಕಾರು ಮಾರುಕಟ್ಟೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಚಾಲಿತ ವಾಹನಗಳ ಮಾರಾಟ ವಿಸ್ತರಿಸಲು ಮುಂದಡಿ ಇರಿಸಿರುವ ಹುಂಡೈ ಮೋಟರ್ ಇಂಡಿಯಾ ಕಂಪನಿಯು ತನ್ನ 'ಅಯಾನಿಕ್ 5' ಕಾರನ್ನು ಇದೇ ವರ್ಷದಲ್ಲಿ ಭಾರತದ ಮಾರುಕಟ್ಟೆಗೆ ಬಿಡುಗಡೆ ಮಾಡುವುದಾಗಿ ತಿಳಿಸಿದೆ.

ಈ ಕಾರು 2022ನೇ ಸಾಲಿನ 'ವಿಶ್ವದ ವರ್ಷದ ಕಾರು' ಪ್ರಶಸ್ತಿ ಪಡೆದಿದೆ ಎಂದು ಹುಂಡೈ ಹೇಳಿದೆ. '2028ರೊಳಗೆ ವಿದ್ಯುತ್ ಚಾಲಿತ ಕಾರುಗಳ ಆರು ಮಾದರಿಗಳನ್ನು ಭಾರತದ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು' ಎಂದು ಹುಂಡೈ ಮೋಟರ್ ಇಂಡಿಯಾ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಉನ್ಸೂ ಕಿಮ್ ಹೇಳಿದ್ದಾರೆ. ಈ ಕಾರು ಪ್ರತಿ ಗಂಟೆಗೆ 260 ಕಿ.ಮೀ. ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆ ಎಂದು ಕಂಪನಿ ತಿಳಿಸಿದೆ.



ಮುಂಬೈ ಧಾರಣೆ

ಶೇಂಗಾ	
26-4-2022	
ಜಾವಾ 70/80(ಹೊಸ)	10450-10500
ಜಾವಾ 80/90(ಹೊಸ)	9950-10000
ದಪ್ಪ ಮಧ್ಯಪ್ರದೇಶ(ಹೊಸ)	10950-11000
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1660 (1670)
ಒಂದು ವಾರದ ಡೆಲಿವರಿ	1655 (1665)
ಸೋಯಾ ಕಚ್ಚಾ	1565 (1565)
ಪಾಮ್ ವಾರದ ಡೆಲಿವರಿ	1515 (1510)
ಸೂರ್ಯಕಾಂತಿ ಎಣ್ಣೆ ಕಚ್ಚಾ	1850 (1850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
51,850 (51,750)
ಬೆಳ್ಳಿ ಕೆ.ಜಿ 65,600 (65,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹300-862
ದ್ವಿತಳಿ (ಬಿ.ವಿ)	₹ 411-688

ಕೊಬ್ಬರಿ ಧಾರಣೆ

ಪುತ್ತೂರು (ಇತರೆ)	₹4500-10500

ಏರಿದ ಸೂಚ್ಯಂಕ, ಹೆಚ್ಚಿದ ಸಂಪತ್ತು

ನವದೆಹಲಿ (ಪಿಟಿಐ): ದೇಶದ ಷೇರು ಪೇಟೆಗಳು ಮಂಗಳವಾರ ಏರಿಕೆಯ ಹಾದಿಗೆ ಮರಳಿದ ಕಾರಣದಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 4.11 ಲಕ್ಷ ಕೋಟಿಯಷ್ಟು ಹೆಚ್ಚಳವಾಗಿದೆ. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 776 ಅಂಶದಷ್ಟು, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 246 ಅಂಶ ಏರಿಕೆ ಕಂಡಿವೆ.

'ಕಚ್ಚಾ ತೈಲದ ಬೆಲೆಯು ಇಳಿಕೆ ಆಗಿದ್ದು ಹೂಡಿಕೆದಾರರ ಪಾಲಿಗೆ ಸಮಾಧಾನ ತಂದಿತು. ಆದರೆ ಚೀನಾದಲ್ಲಿನ ಕೋವಿಡ್ ಪ್ರಕರಣ, ಅಮೆರಿಕದಲ್ಲಿ ಬಡ್ಡಿ ದರ ಹೆಚ್ಚಳದ ಸಾಧ್ಯತೆ, ರಷ್ಯಾ–ಉಕ್ರೇನ್ ಯುದ್ಧ ಮಾರುಕಟ್ಟೆಯ ಮೇಲೆ ಕೆಟ್ಟ ಪರಿಣಾಮ ಬೀರಬಹುದು' ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ಸಂಶೋಧನೆ (ರಿಟೇಲ್) ವಿಭಾಗದ ಮುಖ್ಯಸ್ಥ ಶ್ರೀಕಾಂತ್ ಚವಾಣ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430- 450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250
ಕಾಳು ಮೆಣಸು-	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54000
ಭದ್ರಾವತಿ	
ರಾಶಿ	45109-48599
ಚನ್ನಗಿರಿ	
ರಾಶಿ	47259-48599
ಹೊಳಲ್ಕೆರೆ	
ರಾಶಿ	45700-48359
ಕಾರ್ಕಳ	
ಹೊಸತು	40000-45000
ಪುತ್ತೂರು	
ಕೋಕ	11000-26000
ಹೊಸತು	27500-45000
ಸಾಗರ	
ಬಿಳಿಗೋಟು	12349-29989
ಚಾಲಿ	34909-37669
ಕೋಕ	29299-33899
ಕೆಂಪುಗೋಟು	30899-32619
ರಾಶಿ	34199-47829
ಸಿಪ್ಪೆಗೋಟು	16250-21400
ಶಿವಮೊಗ್ಗ	
ಬೆಟ್ಟೆ	49000-54299
ಗೊರಬಲು	18500-36800
ರಾಶಿ	44000-48699
ಸರಕು	59009-78299
ಸಿದ್ದಾಪುರ	
ಬಿಳಿಗೋಟು	24699-32699
ಕೋಕ	20669-31339
ಹೊಸಚಾಲಿ	34899-40399
ಕೆಂಪುಗೋಟು	25619-33599
ರಾಶಿ	43399-48389
ತಟ್ಟಿಬೆಟ್ಟೆ	36399-44799
ಶಿರಸಿ	
ಬೆಟ್ಟೆ	34009-44799
ಬಿಳಿಗೋಟು	16009-32199
ಚಾಲಿ	33699-41299
ರಾಶಿ	38199-49899
ಯಲ್ಲಾಪುರ	
ಆಪಿ	54299-54679
ಬಿಳಿಗೋಟು	26999-33931
ಚಾಲಿ	36599-41099
ಕೋಕ	18899-30612
ಕೆಂಪುಗೋಟು	32899-35299
ರಾಶಿ	48689-53400
ತಟ್ಟಿಬೆಟ್ಟೆ	38899-47555

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	1600	15,850	15850	220.70 ಸೆಂಟ್ಸ್
ಎಸಿ	8540	8,300	8,500	
ಆರ್‌ಪಿ	9500	9,500	9,450	ಲಂಡನ್
ಆರ್‌ಸಿ	4205	4,050	4,275	2066 ಡಾಲರ್ಸ್

ಅಲ್ಪ ಕಾಲ ಮಾತ್ರ ತಾಳೆ ಎಣ್ಣೆ ರಫ್ತು ನಿಷೇಧ: ವರ್ತಕರ ವಿಶ್ವಾಸ

ಜಕಾರ್ತಾ/ಮುಂಬೈ (ರಾಯಿಟರ್ಸ್): ತಾಳೆ ಎಣ್ಣೆ ರಫ್ತಿಗೆ ಇಂಡೊನೇಷ್ಯಾ ಸರ್ಕಾರ ವಿಧಿಸಲಿರುವ ನಿಷೇಧವು ಒಂದು ತಿಂಗಳಿಗೂ ಹೆಚ್ಚು ಕಾಲ ಜಾರಿಯಲ್ಲಿರುವುದು ಅನುಮಾನ ಎಂದು ಉದ್ಯಮದ ಮೂಲಗಳು ಹೇಳಿವೆ.

ತಾಳೆ ಎಣ್ಣೆ ಸಂಗ್ರಹಿಸಿ ಇಡಲು ಇಂಡೊನೇಷ್ಯಾದಲ್ಲಿ ಸೌಲಭ್ಯ ಇಲ್ಲ. ಅಲ್ಲದೆ, ರಫ್ತು ಮುಂದುವರಿಸುವಂತೆ ವರ್ತಕರು ಒತ್ತಡ ಹೇರುತ್ತಿದ್ದಾರೆ. ನಿಷೇಧವು ಗುರುವಾರದಿಂದ ಜಾರಿಗೆ ಬರಲಿದೆ. ರಫ್ತು ನಿಷೇಧವು ರಿಫೈನ್ಡ್ ತಾಳೆ ಎಣ್ಣೆಗೆ ಮಾತ್ರ ಅನ್ವಯವಾಗುತ್ತದೆ, ಕಚ್ಚಾ ತಾಳೆ ಎಣ್ಣೆಗೆ ಅಲ್ಲ ಎಂದು ಇಂಡೊನೇಷ್ಯಾ ಅಧಿಕಾರಿಗಳು ಹೇಳಿದ್ದಾರೆ. ಆದರೆ, 'ರಿಫೈನ್ಡ್ ತಾಳೆ ಎಣ್ಣೆಗೆ ಕೊರತೆ ಎದುರಾದರೆ' ರಫ್ತು ನಿಷೇಧದ ವ್ಯಾಪ್ತಿಯನ್ನು ಹಿಗ್ಗಿಸಲಾಗುತ್ತದೆ ಎಂದು ಇಂಡೊನೇಷ್ಯಾ ಸರ್ಕಾರವು ಅಲ್ಲಿನ ಕಂಪನಿಗಳ ಬಳಿ ಹೇಳಿದೆ.

'ರಫ್ತಿಗೆ ಸಂಪೂರ್ಣ ನಿಷೇಧ ವಿಧಿಸಿದರೆ ತಿಂಗಳು ತುಂಬುವ ಮೊದಲೇ ಸಂಗ್ರಹಾಗಾರಗಳು ಭರ್ತಿಯಾಗುತ್ತವೆ' ಎಂದು ಇಂಡೊನೇಷ್ಯಾದ ತಾಳೆ ಎಣ್ಣೆ ವರ್ತಕರ ಸಂಘಟನೆಗಳು ಹೇಳಿವೆ. ಇಂಡೊನೇಷ್ಯಾದಲ್ಲಿ ಈಗಾಗಲೇ 50 ಲಕ್ಷ ಟನ್ ತಾಳೆ ಎಣ್ಣೆ ಸಂಗ್ರಹ ಇದೆ.

ಉಕ್ರೇನ್‌ಗೆ ಪಾಶ್ಚಾತ್ಯ ರಾಷ್ಟ್ರಗಳಿಂದ ಶಸ್ತ್ರಾಸ್ತ್ರ ಪೂರೈಕೆ; ನ್ಯಾಟೊದಿಂದ ಪರೋಕ್ಷ ಯುದ್ಧ

3ನೇ ವಿಶ್ವಸಮರ ಸಾಧ್ಯತೆ: ರಷ್ಯಾ ಎಚ್ಚರಿಕೆ

ಕೀವ್/ಮಾಸ್ಕೊ (ಎಪಿ/ಎಎಫ್‌ಪಿ): ಉಕ್ರೇನ್‌ಗೆ ಪಾಶ್ಚಾತ್ಯ ರಾಷ್ಟ್ರಗಳು ಶಸ್ತ್ರಾಸ್ತ್ರ ಪೂರೈಸುತ್ತಿರುವುದರಿಂದ ನಿಜವಾಗಿಯೂ ಮೂರನೇ ವಿಶ್ವಸಮರ ನಡೆಯುವ ಅಪಾಯವಿದೆ ಎಂದು ರಷ್ಯಾ ಗಂಭೀರ ಎಚ್ಚರಿಕೆಯನ್ನು ಮಂಗಳವಾರ ನೀಡಿದೆ.

'ಮೂರನೇ ವಿಶ್ವಸಮರಕ್ಕೆ ಪ್ರಚೋದಿಸಬೇಡಿ' ಎಂದು ಉಕ್ರೇನ್‌ಗೂ ತಾಕೀತು ಮಾಡಿರುವ ರಷ್ಯಾದ ಉನ್ನತ ರಾಜತಾಂತ್ರಿಕರು, 'ಅಣ್ವಸ್ತ್ರ ಸಂಘರ್ಷದ ಅಪಾಯವನ್ನೂ ಲಘುವಾಗಿ ಪರಿಗಣಿಸಬೇಡಿ' ಎಂದು ಎಚ್ಚರಿಸಿದ್ದಾರೆ.

ಅಮೆರಿಕ ಆಹ್ವಾನದ ಮೇರೆಗೆ 40 ದೇಶಗಳು ಜರ್ಮನಿಯಲ್ಲಿ ಭದ್ರತಾ ಶೃಂಗ ಸಭೆ ಸೇರುವುದಕ್ಕೂ ಮೊದಲು ರಷ್ಯಾ ಮತ್ತೊಮ್ಮೆ ಈ ಕಠಿಣ ಸಂದೇಶ ನೀಡಿದೆ.

ಸುದ್ದಿಸಂಸ್ಥೆಗಳೊಂದಿಗೆ ಮಾತನಾಡಿರುವ ರಷ್ಯಾದ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್, 'ಶಾಂತಿ ಚರ್ಚೆಯನ್ನು ಉಕ್ರೇನ್ ವಿಫಲಗೊಳಿಸುತ್ತಿದೆ. ಮೂರನೇ ಮಹಾಯುದ್ಧ ಆರಂಭದ ಅಪಾಯ ನಿರ್ಲಕ್ಷಿಸಲು ಸಾಧ್ಯವೇ ಇಲ್ಲ' ಎಂದರು.

'ಈ ಸಂಘರ್ಷದಲ್ಲಿ ಭಾಗಿಯಾಗುವಂತೆ ನ್ಯಾಟೊವನ್ನು ಕೇಳುವ ಮೂಲಕ ಉಕ್ರೇನ್, ರಷ್ಯಾವನ್ನು ಪ್ರಚೋದಿಸುತ್ತಿದೆ. ನ್ಯಾಟೊ ನಮ್ಮ ವಿರುದ್ಧ ಪರೋಕ್ಷ ಯುದ್ಧ ನಡೆಸುತ್ತಿದೆ. ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಸಿ ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಿವೆ. ಉಕ್ರೇನ್‌ಗೆ ಪೂರೈಕೆ ಆಗುತ್ತಿರುವ ಶಸ್ತ್ರಾಸ್ತ್ರಗಳ ನಾಶವೇ ನಮ್ಮ ಗುರಿ' ಎಂದು ಲಾವ್ರೊವ್ ಹೇಳಿದರು.



ಜರ್ಮನಿಯಲ್ಲಿ ಮಂಗಳವಾರ ನಡೆದ ಭದ್ರತಾ ಶೃಂಗಸಭೆಯಲ್ಲಿ ಅಮೆರಿಕ ನೇತೃತ್ವದಲ್ಲಿ 40ಕ್ಕೂ ಹೆಚ್ಚು ರಾಷ್ಟ್ರಗಳ ಪ್ರಮುಖರು ಪಾಲ್ಗೊಂಡಿದ್ದರು (ಅಮೆರಿಕ ರಕ್ಷಣಾ ಕಾರ್ಯದರ್ಶಿ ಟ್ವಿಟರ್‌ನಲ್ಲಿ ಬಿಡುಗಡೆ ಮಾಡಿರುವ ಚಿತ್ರ)

'ರಷ್ಯಾ ಸೇನೆ ದುರ್ಬಲಗೊಳಿಸುವುದು ನಮ್ಮ ನಿಲುವು' ಎಂದು ಅಮೆರಿಕ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರ ಹೇಳಿಕೆಗೆ ತಿರುಗೇಟು ನೀಡಿರುವ ಲಾವ್ರೊವ್, 'ಉಕ್ರೇನ್‌ನಲ್ಲಿ ಯುದ್ಧ ಮುಂದುವರಿಕೆ ಪಾಶ್ಚಾತ್ಯ ರಾಷ್ಟ್ರಗಳ ಬಯಕೆ. ರಷ್ಯಾ ಸೇನೆ ದಣಿದಿದೆ ಎಂದು ಅವು ಭಾವಿಸಿವೆ. ಇದು ಭ್ರಮೆ' ಎಂದಿದ್ದಾರೆ.



'ಉಕ್ರೇನ್‌ಗೆ ಸಿಕ್ಕಿರುವ ಜಗತ್ತಿನ ಬೆಂಬಲ ನೋಡಿ ರಷ್ಯಾ ತನ್ನ ಕೊನೆ ಭರವಸೆಯನ್ನೂ ಕಳೆದುಕೊಂಡಿದೆ. ಹಾಗಾಗಿ ಮೂರನೇ ವಿಶ್ವಸಮರದ ಬಗ್ಗೆ ಮಾತನಾಡುತ್ತಿದೆ. ಇದರರ್ಥ ರಷ್ಯಾ ಸೋಲು ಕಾಣಲಿದೆ' ಎಂದು ಉಕ್ರೇನ್ ವಿದೇಶಾಂಗ ಸಚಿವ ಡಿಮಿಟ್ರೊ ಕುಲೆಬಾ ಟ್ವೀಟ್ ಮಾಡಿದ್ದಾರೆ.

'ಉಕ್ರೇನ್‌ಗೆ ಭಾರಿ ಶಸ್ತ್ರಾಸ್ತ್ರಗಳ ನೆರವು'

ಉಕ್ರೇನ್‌ಗೆ ಭಾರಿ ಶಸ್ತ್ರಾಸ್ತ್ರಗಳ ಹೊಸ ಪ್ಯಾಕೇಜ್ ನೀಡಲು ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳು ಮಂಗಳವಾರ ಜರ್ಮನಿಯ ರಾಮ್‌ಸ್ಟೈನ್ ವಾಯುನೆಲೆಯಲ್ಲಿ ನಡೆದ ಭದ್ರತಾ ಶೃಂಗಸಭೆಯಲ್ಲಿ ವಾಗ್ದಾನ ಮಾಡಿದವು.

ಉಕ್ರೇನ್ ಬೆಂಬಲಿಸಿದರೆ ಅಣ್ವಸ್ತ್ರ ಯುದ್ಧಕ್ಕೆ ದಾರಿಯಾಗಲಿದೆ ಎಂಬ ರಷ್ಯಾದ ಬೆದರಿಕೆಯನ್ನು ತಳ್ಳಿಹಾಕಿವೆ.

'ರಷ್ಯಾದ ಆಕ್ರಮಣದ ವಿರುದ್ಧ ಗೆಲುವು ಸಾಧಿಸಲು ಉಕ್ರೇನ್‌ಗೆ ಎಲ್ಲ ನೆರವು ನೀಡಲು 40ಕ್ಕೂ ಹೆಚ್ಚು ದೇಶಗಳು ಐತಿಹಾಸಿಕ ಸಭೆ ಸೇರಿವೆ' ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಜೆ. ಆಸ್ಟಿನ್ ತಿಳಿಸಿದರು.

'ಉಕ್ರೇನ್‌ನ ಅಲ್ಪಾವಧಿ ಮತ್ತು ದೀರ್ಘಾವಧಿ ಭದ್ರತಾ ಅಗತ್ಯ ಖಾತ್ರಿಪಡಿಸುವ ಸಮಾನ, ಪಾರದರ್ಶಕ ಒಪ್ಪಂದಕ್ಕೆ ಬರುವುದು ಈ ಸಭೆಯ ಗುರಿ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಅಣು ಸ್ಥಾವರದ ಮೇಲೆ ಹಾರಿದ ಕ್ಷಿಪಣಿ

ಝಪೊರಿಝಿಯಾ (ರಾಯಿಟರ್ಸ್/ಎಎಫ್‌ಪಿ): ಉಕ್ರೇನಿನ ಝಪೊರಿಝಿಯಾದಲ್ಲಿರುವ ಯುರೋಪಿನ ಅತ್ಯಂತ ದೊಡ್ಡ ಅಣು ವಿದ್ಯುತ್ ಸ್ಥಾವರದ ಮೇಲೆ ರಷ್ಯಾ ಕ್ಷಿಪಣಿಗಳು ಕಡಿಮೆ ಎತ್ತರದಲ್ಲಿ ಹಾರಿ ಹೋಗಿವೆ ಎಂದು ಉಕ್ರೇನಿನ ಅಣುಶಕ್ತಿ ಕಂಪನಿ ಎನರ್ಗೋಅಟಮ್ ಮುಖ್ಯಸ್ಥ ಪೆಟ್ರೊ ಕೊಟಿನ್ ಮಂಗಳವಾರ ತಿಳಿಸಿದ್ದಾರೆ.

'ಈ ಸ್ಥಾವರದಲ್ಲಿರುವ ಏಳು ಘಟಕಗಳಲ್ಲಿ ಒಂದು ಅಥವಾ ಹೆಚ್ಚಿನ ಘಟಕಗಳಿಗೆ ಕ್ಷಿಪಣಿ ನೇರವಾಗಿ ಅಪ್ಪಳಿಸಿದರೆ, ಮತ್ತೊಂದು ದೊಡ್ಡ ಅಣು ದುರಂತ ಸಂಭವಿಸುತ್ತಿತ್ತು' ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಅಮೆರಿಕ, ಯೂರೋಪ್‌ಗೆ ಭಾರತ ತಿರುಗೇಟು

ನವದೆಹಲಿ: ಉಕ್ರೇನ್ ಮೇಲೆ ರಷ್ಯಾದ ಆಕ್ರಮಣವನ್ನು ಖಂಡಿಸಿಲ್ಲ ಎಂದು ಭಾರತದ ನಿಲುವನ್ನು ಟೀಕಿಸಿದ್ದ ಐರೋಪ್ಯ ದೇಶಗಳು ಮತ್ತು ಅಮೆರಿಕಕ್ಕೆ ಭಾರತವು ತಿರುಗೇಟು ನೀಡಿದೆ. 'ಏಷ್ಯಾದಲ್ಲಿ ಚೀನಾದ ಯುದ್ಧ ಸ್ವರೂಪದ ನಡೆಗಳನ್ನು ಯೂರೋಪ್ ಕಡೆಗಣಿಸಿದೆ. ಅಫ್ಗಾನಿಸ್ತಾನದ ಎಲ್ಲಾ ನಾಗರಿಕರನ್ನು ಸಂಕಷ್ಟಕ್ಕೆ ಸಿಲುಕಿಸಲಾಗಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ಇಲ್ಲಿ ನಡೆಯುತ್ತಿರುವ ರೈಸಿನಾ ಮಾತುಕತೆಯಲ್ಲಿ ಮಂಗಳವಾರ ಮಾತನಾಡಿದ ಅವರು ಈ ಮಾತು ಹೇಳಿದ್ದಾರೆ. ಅದಕ್ಕೂ ಮುನ್ನ ಸಭೆಯಲ್ಲಿ ಮಾತನಾಡಿದ್ದ ನಾರ್ವೆ ವಿದೇಶಾಂಗ ಸಚಿವರು ರಷ್ಯಾ ಅತಿಕ್ರಮಣದ ವಿರುದ್ಧ ಭಾರತದ ನಿಲುವನ್ನು ಪ್ರಶ್ನಿಸಿದರು. ಸೋಮವಾರ ಸಭೆಯ ಆರಂಭದ ವೇಳೆ ಮಾತನಾಡಿದ್ದ ಐರೋಪ್ಯ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೆಯೆನ್ ಅವರು ಭಾರತವು ರಷ್ಯಾದ ಬಗೆಗಿನ ನಿಲುವನ್ನು ಬದಲಿಸಬೇಕು ಎಂದು ಒತ್ತಾಯಿಸಿದ್ದರು.

ಈ ಎರಡೂ ಪ್ರಶ್ನೆಗಳಿಗೆ ಜೈಶಂಕರ್ ಅವರು ಪ್ರತಿಕ್ರಿಯೆ ನೀಡಿದ್ದಾರೆ. 'ನೀವು ಉಕ್ರೇನ್ ಬಗ್ಗೆ ಮಾತನಾಡುತ್ತಿದ್ದೀರಿ. ಒಂದು ವರ್ಷದ ಹಿಂದೆ ಅಫ್ಗಾನಿಸ್ತಾನದಲ್ಲಿ ಏನಾಯಿತು ಎಂಬುದು ನನಗೆ ನೆನಪಿದೆ. ಈ ಜಗತ್ತು ಅಫ್ಗಾನಿಸ್ತಾನದ ಇಡೀ ನಾಗರಿಕರನ್ನು ಸಂಕಷ್ಟಕ್ಕೆ ದೂಡಿತ್ತು' ಎಂದು ಹೇಳಿದ್ದಾರೆ. ಅಫ್ಗಾನಿಸ್ತಾನದಿಂದ ಅಮೆರಿಕ ಮತ್ತು ನ್ಯಾಟೊ ಸೈನಿಕರನ್ನು ವಾಪಸ್ ಕರೆಸಿಕೊಂಡು ತಾಲಿಬಾನ್ ಆಡಳಿತಕ್ಕೆ ಅವಕಾಶ ಮಾಡಿಕೊಟ್ಟ ಒಪ್ಪಂದದ ಬಗ್ಗೆ ಅವರು ಹೀಗೆ ಹೇಳಿದ್ದಾರೆ.

ಜತೆಗೆ, 'ಏಷ್ಯಾದಲ್ಲಿ 10 ವರ್ಷಗಳಿಗೂ ಹೆಚ್ಚುಕಾಲದಿಂದ ಒಪ್ಪಿತ ನಿಯಮಗಳಿಗೆ ಸವಾಲು ಎಸೆಯಲಾಗುತ್ತಿದೆ (ಚೀನಾದ ಅತಿಕ್ರಮಣ). ಆದರೆ ಅವರೊಂದಿಗೆ (ಚೀನಾ ಜತೆ) ವ್ಯಾಪಾರ ವೃದ್ಧಿಸುವಂತೆ ಯೂರೋಪ್ ಸಲಹೆ ನೀಡಿತ್ತು' ಎಂದು ಅವರು ಟೀಕಿಸಿದ್ದಾರೆ.

> 10 ವರ್ಷಗಳಿಂದ ಏಷ್ಯಾದಲ್ಲಿ ಏನಾಗುತ್ತಿದೆ ಎಂಬುದನ್ನು ಯೂರೋಪ್ ಗಮನಿಸಿಯೇ ಇಲ್ಲ. ಈಗಲಾದರೂ ಇಲ್ಲಿ ಏನಾಗುತ್ತಿದೆ ಎಂದು ಯೂರೋಪ್ ಗಮನಿಸಲಿ
> **ಎಸ್.ಜೈಶಂಕರ್**
> ವಿದೇಶಾಂಗ ವ್ಯವಹಾರಗಳ ಸಚಿವ

ಉನ್ನತಾಧಿಕಾರ ಕಾರ್ಯಪಡೆಯ ಭಾಗವಾಗಲು ನಿರಾಕರಣೆ

ಕಾಂಗ್ರೆಸ್ ಸೇರದ ಪ್ರಶಾಂತ್

ಪ್ರಜಾವಾಣಿ ವಾರ್ತೆ

ನವದೆಹಲಿ: ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರು ಕಾಂಗ್ರೆಸ್ ಪಕ್ಷವನ್ನು ಸೇರುವ ಮತ್ತೊಂದು ಯತ್ನ ವಿಫಲವಾಗಿದೆ. ಪಕ್ಷವನ್ನು ಸೇರುವಂತೆ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ನೀಡಿದ್ದ ಆಹ್ವಾನವನ್ನು ಪ್ರಶಾಂತ್ ಕಿಶೋರ್ ತಿರಸ್ಕರಿಸಿದ್ದಾರೆ ಎಂದು ಪಕ್ಷ ಮಂಗಳವಾರ ಪ್ರಕಟಿಸಿತು.

ಕಿಶೋರ್ ಸೇರ್ಪಡೆ ಕುರಿತಂತೆ ಸೋನಿಯಾ ನಿವಾಸದಲ್ಲಿ ಹಲವು ದಿನಗಳಿಂದ ನಡೆಯುತ್ತಿದ್ದ ಸುದೀರ್ಘ ಮಾತುಕತೆಗೆ ಈ ಪ್ರಕಟಣೆ ಮೂಲಕ ತೆರೆಬಿದ್ದಿದೆ. ಪ್ರಶಾಂತ್ ಅವರು ಪಕ್ಷದೊಳಗಿದ್ದುಕೊಂಡು ಕೆಲಸ ಮಾಡಬೇಕೇ ಅಥವಾ ಅವರು ಹೊರಗಡೆಯಿಂದ ಸಲಹೆಗಾರರಾಗಿ ಕೆಲಸ ಮಾಡಬೇಕೇ ಎಂಬುದರ ಬಗ್ಗೆ ಕಾಂಗ್ರೆಸ್‌ನ ಹಿರಿಯ ಮುಖಂಡರು ಸಾಕಷ್ಟು ಚರ್ಚೆ ನಡೆಸಿದರು. ಪ್ರಶಾಂತ್ ಮುಂದಿಟ್ಟಿದ್ದ ಸಲಹೆಗಳು ಹಾಗೂ ಪಕ್ಷದಲ್ಲಿ ಅವರು ನಿರ್ವಹಿಸಲಿರುವ ಪಾತ್ರದ ಬಗ್ಗೆ ವಿಸ್ತೃತ ಚರ್ಚೆ ನಡೆದಿತ್ತು. ಈ ಬಳಿಕ ಅವರಿಗೆ ಆಹ್ವಾನ ನೀಡಲಾಗಿತ್ತು. ಪ್ರಶಾಂತ್ ಸೇರ್ಪಡೆ ಬಗ್ಗೆ ಪಕ್ಷದೊಳಗೆ ಭಿನ್ನ ಅಭಿಪ್ರಾಯಗಳೂ ವ್ಯಕ್ತವಾಗಿದ್ದವು.

ಟ್ವೀಟ್ ಮಾಡಿರುವ ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ, 'ಪ್ರಶಾಂತ್ ಕಿಶೋರ್ ಅವರ ಜತೆಗಿನ ಚರ್ಚೆಯ ಬಳಿಕ ಕಾಂಗ್ರೆಸ್ ಅಧ್ಯಕ್ಷರು 'ಉನ್ನತಾಧಿಕಾರ ಕಾರ್ಯಪಡೆ 2024' ಅನ್ನು ರಚಿಸಿದ್ದರು. ಅದರ ಭಾಗವಾಗಿ ಇರುವಂತೆ ಕಿಶೋರ್ ಅವರನ್ನು ಕೇಳಿಕೊಳ್ಳಲಾಗಿತ್ತು. ಆದರೆ ಅದನ್ನು ಅವರು ಒಪ್ಪಲಿಲ್ಲ. ಪಕ್ಷಕ್ಕೆ ಅವರು ನೀಡಿದ ಸಲಹೆ ಹಾಗೂ ಪ್ರಯತ್ನಗಳನ್ನು ಪಕ್ಷ ಶ್ಲಾಘಿಸುತ್ತದೆ' ಎಂದು ಉಲ್ಲೇಖಿಸಿದ್ದಾರೆ.

'ಉನ್ನತಾಧಿಕಾರ ಕಾರ್ಯಪಡೆಯ ಭಾಗವಾಗಿ ಪಕ್ಷವನ್ನು ಸೇರುವಂತೆ ಹಾಗೂ ಚುನಾವಣೆಯ ಜವಾಬ್ದಾರಿ ವಹಿಸಿಕೊಳ್ಳುವಂತೆ ಕಾಂಗ್ರೆಸ್ ನೀಡಿದ್ದ ಆಹ್ವಾನವನ್ನು ತಿರಸ್ಕರಿಸಿದ್ದೇನೆ. ಪಕ್ಷದ ಮೂಲ ಸಂಘಟನಾತ್ಮಕ ಸಮಸ್ಯೆಗಳಿಗೆ ಪರಿಹಾರ ಸಿಗಬೇಕಾದರೆ, ಪಕ್ಷಕ್ಕೆ ನಾಯಕತ್ವ ಹಾಗೂ ಸಾಮೂಹಿಕ ಇಚ್ಛಾಶಕ್ತಿ ಅಗತ್ಯ' ಎಂದು ಪ್ರಶಾಂತ್ ಅಭಿಪ್ರಾಯಪಟ್ಟಿದ್ದಾರೆ.

ಪಕ್ಷ ಸೇರುವ ಕಿಶೋರ್ ಅವರ ಯತ್ನ ಕಳೆದ ಜುಲೈನಲ್ಲಿ ಸಫಲವಾಗಿರಲಿಲ್ಲ. ಚುನಾವಣಾ ಉಸ್ತುವಾರಿಯ ಜೊತೆಗೆ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಇಟ್ಟಿದ್ದ ಬೇಡಿಕೆಯನ್ನು ಪಕ್ಷ ತಿರಸ್ಕರಿಸಿತ್ತು.

5 ವರ್ಷ ಮೇಲ್ಪಟ್ಟ ಮಕ್ಕಳಿಗೆ ಲಸಿಕೆ

ನವದೆಹಲಿ (ಪಿಟಿಐ): ಬಯೊಲಾಜಿಕಲ್ ಇ ಕಂಪನಿಯ ಕೊರ್ಬೆವ್ಯಾಕ್ಸ್ ಕೋವಿಡ್ ಲಸಿಕೆಯನ್ನು 5ರಿಂದ 12 ವರ್ಷದ ಮಕ್ಕಳಿಗೆ ಮತ್ತು ಭಾರತ್ ಬಯೊಟೆಕ್‌ನ ಕೋವ್ಯಾಕ್ಸಿನ್ ಲಸಿಕೆಯನ್ನು 6ರಿಂದ 12 ವರ್ಷದ ಮಕ್ಕಳಿಗೆ ತುರ್ತು ಬಳಕೆ ಅಡಿಯಲ್ಲಿ ನೀಡಲು ಭಾರತದ ಔಷಧ ಮಹಾನಿಯಂತ್ರಕರು (ಡಿಸಿಜಿಐ) ಮಂಗಳವಾರ ಒಪ್ಪಿಗೆ ನೀಡಿದ್ದಾರೆ.

ಜೈಡಸ್ ಕ್ಯಾಡಿಲಾ ಕಂಪನಿಯ ಝೈಕೋವ್-ಡಿ ಲಸಿಕೆಯನ್ನು 12 ವರ್ಷ ಮೇಲ್ಪಟ್ಟ ಮಕ್ಕಳಿಗೆ ಹಾಕಲು ಡಿಸಿಜಿಐ ಒಪ್ಪಿಗೆ ನೀಡಿದ್ದಾರೆ. ದೇಶದಲ್ಲಿ ಹಲವೆಡೆ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಈ ಬಗ್ಗೆ ದೇಶದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜತೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಸಭೆ ನಡೆಸಲಿದ್ದಾರೆ. ಈ ಸಭೆಗೂ ಮುನ್ನಾದಿನ ಡಿಸಿಜಿಐ ಈ ನಿರ್ಧಾರ ಪ್ರಕಟಿಸಿದೆ.

ಕೊರ್ಬೆವ್ಯಾಕ್ಸ್ ಲಸಿಕೆಯನ್ನು 5–12 ವರ್ಷದ ಮಕ್ಕಳಿಗೆ ಮತ್ತು ಕೋವ್ಯಾಕ್ಸಿನ್ ಲಸಿಕೆಯನ್ನು 6–12 ವರ್ಷದ ಮಕ್ಕಳಿಗೆ ತುರ್ತು ಸಂದರ್ಭದಲ್ಲಿ ನೀಡಬಹುದು ಎಂದು ಆಯಾ ಕಂಪನಿಗಳು ಸಲ್ಲಿಸಿದ್ದ ಅರ್ಜಿಯನ್ನು ವಿಷಯ ತಜ್ಞರ ಸಮಿತಿಯು ಪರಿಶೀಲಿಸಿತ್ತು. ಈ ಲಸಿಕೆಗಳ ತುರ್ತು ಬಳಕೆಗೆ ಅನುಮತಿ ನೀಡಬಹುದು ಎಂದು ಸಮಿತಿ ಶಿಫಾರಸು ಮಾಡಿತ್ತು.

3ನೇ ಅಲೆ: 'ಬೂಸ್ಟರ್ ಡೋಸ್ ಶ್ರೀರಕ್ಷೆ'

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್ ಪಡೆದವರ ಪೈಕಿ ಶೇ 70ರಷ್ಟು ಮಂದಿಗೆ ಕೋವಿಡ್ ಮೂರನೇ ಅಲೆಯ ಸಂದರ್ಭದಲ್ಲಿ ಸೋಂಕು ತಗುಲಿಲ್ಲ ಎಂದು ಹೊಸ ಅಧ್ಯಯನ ತಿಳಿಸಿದೆ.

ಕೊರೊನಾ ವೈರಸ್ ಕುರಿತು ಭಾರತೀಯ ವೈದ್ಯಕೀಯ ಸಂಘದ ರಾಷ್ಟ್ರೀಯ ಕಾರ್ಯಪಡೆಯ ಸಹ ಅಧ್ಯಕ್ಷ ಡಾ.ರಾಜೀವ್ ಜಯದೇವನ್ ನೇತೃತ್ವದ ಅಧ್ಯಯನವು ಇದನ್ನು ದೃಢಪಡಿಸಿದೆ.

ದೇಶದಲ್ಲಿ 2,483 ಪ್ರಕರಣ ಪತ್ತೆ: ದೇಶದಲ್ಲಿ 2,483 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಸೋಮವಾರಕ್ಕೆ ಹೋಲಿಸಿದರೆ ಹೊಸ ಪ್ರಕರಣಗಳಲ್ಲಿ ಕೊಂಚ ಇಳಿಕೆಯಾಗಿದೆ.ಸೋಮವಾರ 2,541 ಪ್ರಕರಣಗಳು ದೃಢಪಟ್ಟಿದ್ದವು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಶಾಂಘೈನಲ್ಲಿ ಸಾರ್ವತ್ರಿಕ ಪರೀಕ್ಷೆ: ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ಕೋವಿಡ್‌ನ ಓಮೈಕ್ರಾನ್ ಸೋಂಕು ಪ್ರಕರಣಗಳ ಏರಿಕೆ ಹಿನ್ನೆಲೆಯಲ್ಲಿ ವಿವಿಧ ನಗರಗಳಲ್ಲಿ ಸುಮಾರು 2.1 ಕೋಟಿ ಜನರನ್ನು ಸಾರ್ವತ್ರಿಕವಾಗಿ ಪರೀಕ್ಷೆಗೆ ಒಳಪಡಿಸಲು ಸರ್ಕಾರ ಆದೇಶಿಸಿದೆ.

ಜಾಖಡ್, ಥಾಮಸ್ ವಿರುದ್ಧ ಕ್ರಮ?

ಪಂಜಾಬ್ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ಸುನಿಲ್ ಜಾಖಡ್ ಅವರನ್ನು ಪಕ್ಷದಿಂದ ಎರಡು ವರ್ಷ ಅಮಾನತು ಮಾಡಲು ಕಾಂಗ್ರೆಸ್‌ನ ಶಿಸ್ತು ಸಮಿತಿಯು ಮಂಗಳವಾರ ಶಿಫಾರಸು ಮಾಡಿದೆ. ಹಾಗೆಯೇ, ಕೇರಳದ ಮುಖಂಡ ಕೆ.ವಿ. ಥಾಮಸ್ ಅವರನ್ನು ಪಕ್ಷದ ಎಲ್ಲ ಹುದ್ದೆಗಳಿಂದ ವಜಾ ಮಾಡಲು ಹಾಗೂ ಮೇಘಾಲಯದ ಐವರು ಶಾಸಕರನ್ನು ಪಕ್ಷದಿಂದ ಅಮಾನತು ಮಾಡಲು ಶಿಫಾರಸು ಮಾಡಲಾಗಿದೆ.


ಎ.ಕೆ. ಆ್ಯಂಟನಿ ನೇತೃತ್ವದ ಐವರು ಸದಸ್ಯರ ಸಮಿತಿಯು ಮಂಗಳವಾರ ಸಭೆ ಸೇರಿ ಮುಖಂಡರ ವಿರುದ್ಧ ಶಿಸ್ತುಕ್ರಮಕ್ಕೆ ಶಿಫಾರಸು ಮಾಡಿತು. ಸೋನಿಯಾ ಗಾಂಧಿ ಅವರು ಈ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದಾರೆ.

ಮೇಘಾಲಯ, ಪಂಜಾಬ್ ಹಾಗೂ ಕೇರಳ ರಾಜ್ಯಗಳಿಂದ ಸಲ್ಲಿಕೆಯಾದ ದೂರುಗಳನ್ನು ಸಮಿತಿ ಚರ್ಚಿಸಿತು ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಶಿಸ್ತು ಸಮಿತಿ ಸದಸ್ಯ ತಾರಿಕ್ ಅನ್ವರ್ ಹೇಳಿದ್ದಾರೆ. ಮುಖಂಡರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಸಮಿತಿ ಸರ್ವಾನುಮತದ ನಿರ್ಣಯ ತೆಗೆದುಕೊಂಡಿತು ಎಂದು ಅವರು ತಿಳಿಸಿದ್ದಾರೆ.

ಸಮಿತಿ ಶಿಫಾರಸಿನ ಬಗ್ಗೆ ಪ್ರತಿಕ್ರಿಯಿಸಿರುವ ಜಾಖಡ್, 'ಪಕ್ಷಕ್ಕೆ ಒಳ್ಳೆಯದಾಗಲಿ ಎಂದು ನಾನು ಹಾರೈಸುತ್ತೇನೆ' ಎಂದಿದ್ದಾರೆ.

ವಿರಾಜ್ ಮುನ್ನಡೆ

ಬೆಂಗಳೂರು (ಪಿಟಿಐ): ವಿರಾಜ್ ಮಾದಪ್ಪ ಮತ್ತು ವೀರ್ ಅಹ್ಲಾವತ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್ ಗಾಲ್ಫ್ ಟೂರ್ನಿಯಲ್ಲಿ ಮುನ್ನಡೆ ಹಂಚಿಕೊಂಡಿದ್ದಾರೆ.



ವಿರಾಜ್

ಮೊದಲ ಸುತ್ತಿನ ಪಂದ್ಯಗಳ ಬಳಿಕ ಈ ಇಬ್ಬರು ಯುವ ಆಟಗಾರರು, ಯುವರಾಜ್ ಸಿಂಗ್ ಸಂಧು, ರಶೀದ್ ಖಾನ್ ಮತ್ತು ಮಿಲಿಂದ್ ಸೋನಿ ಅವರಿಗಿಂತ ಮುಂದಿದ್ದರು.

ರಾಜ್ಯ ಅಥ್ಲೆಟಿಕ್ ಕೂಟ ಮೇ 7ರಿಂದ

ಬೆಂಗಳೂರು: ರಾಜ್ಯ ಸೀನಿಯರ್ ಮತ್ತು ಜೂನಿಯರ್ ಅಥ್ಲೆಟಿಕ್ ಕೂಟ ಮೇ 7 ಮತ್ತು 8ರಂದು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ. ಪುರುಷ ಮತ್ತು ಮಹಿಳಾ ವಿಭಾಗ, 20 ವರ್ಷದೊಳಗಿನ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ.

ಕರ್ನಾಟಕ ರಾಜ್ಯ ಅಥ್ಲೆಟಿಕ್ ಸಂಸ್ಥೆಯ (ಕೆಎಎ) ಆಶ್ರಯದಲ್ಲಿ ನಡೆಯಲಿರುವ ಕೂಟದಲ್ಲಿ ಜೂನ್ ತಿಂಗಳಲ್ಲಿ ಚೆನ್ನೈಯಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಆಯ್ಕೆ ಕೂಡ ನಡೆಯಲಿದೆ. ಗರಿಷ್ಠ ಒಂದು ವಿಭಾಗದ ಎರಡು ಸ್ಪರ್ಧೆಗಳಲ್ಲಿ ಮಾತ್ರ ಪಾಲ್ಗೊಳ್ಳಲು ಅಥ್ಲೀಟ್‌ಗಳಿಗೆ ಅವಕಾಶವಿದೆ. ಆನ್‌ಲೈನ್ ಮೂಲಕ ಮೇ ಮೂರರ ಒಳಗೆ ಪ್ರವೇಶಪತ್ರಗಳನ್ನು ಕಳುಹಿಸಬೇಕು. ಪಾಲ್ಗೊಳ್ಳುವವರು ಕೋವಿಡ್‌–ನೆಗೆಟಿವ್ ಪ್ರಮಾಣಪತ್ರವನ್ನು ಹೊಂದಿರಬೇಕು. ಲಸಿಕೆ ಹಾಕಿಸಿಕೊಂಡವರು ಕೂಡ 72 ತಾಸುಗಳ ಒಳಗೆ ಪಡೆದಿರುವ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಹೊಂದಿರಬೇಕು. ಕೋವಿಡ್–19ರ ಹಿನ್ನೆಲೆಯಲ್ಲಿ ವಸತಿ ಸೌಲಭ್ಯ ಒದಗಿಸಲಾಗುವುದಿಲ್ಲ. ಮಾಹಿತಿಗೆ

ಮಾಹಿತಿಗೆ ಕೆಎಎ ಕಾರ್ಯದರ್ಶಿ ಎ.ರಾಜವೇಲು (9448438276) ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಲಾಗಿದೆ.

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	499
ರಾಹುಲ್	ಲಖನೌ	368
ಶಿಖರ್ ಧವನ್	ಪಂಜಾಬ್	302

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	18
ನಟರಾಜನ್	ಹೈದರಾಬಾದ್	15
ಡ್ವೇನ್ ಬ್ರಾವೊ	ಚೆನ್ನೈ	14

ರಿಯಾನ್ ಪರಾಗ್ ಅರ್ಧಶತಕ; ಕುಲದೀಪ್ ಸೇನ್‌ಗೆ ನಾಲ್ಕು ವಿಕೆಟ್

ರಾಜಸ್ಥಾನಕ್ಕೆ ಮಣಿದ ಚಾಲೆಂಜರ್ಸ್



ಪುಣೆ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟರ್‌ಗಳು ಮತ್ತೊಮ್ಮೆ ವೈಫಲ್ಯ ಅನುಭವಿಸಿದರು. ಇದರಿಂದಾಗಿ ಬೌಲರ್‌ಗಳ ಅಮೋಘ ಆಟವು ವ್ಯರ್ಥವಾಯಿತು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಬೆಂಗಳೂರು ತಂಡವು 29 ರನ್‌ಗಳಿಂದ ರಾಜಸ್ಥಾನ ರಾಯಲ್ಸ್ ವಿರುದ್ಧ ಸೋತಿತು. ಸತತ ಎರಡು ಪಂದ್ಯಗಳಲ್ಲಿ ಸೋತಿರುವ ತಂಡವು ಪಾಯಿಂಟ್ ಪಟ್ಟಿಯಲ್ಲಿ ಐದನೇ ಸ್ಥಾನಕ್ಕಿಳಿಯಿತು.

ಟಾಸ್ ಗೆದ್ದ ಆರ್‌ಸಿಬಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಸ್ಸಾಂ ಹುಡುಗ ಪರಾಗ್ (ಔಟಾಗದೆ 56; 31ಎ) ಅರ್ಧಶತಕದ ಬಲದಿಂದ ರಾಯಲ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 144 ರನ್ ಗಳಿಸಿತು. ಈ ಸಾಧಾರಣ ಗುರಿಯನ್ನು ಬೆನ್ನಟ್ಟಿದ ಬೆಂಗಳೂರು ತಂಡಕ್ಕೆ ರಾಯಲ್ಸ್ ವೇಗಿ ಕುಲದೀಪ್ ಸೇನ್ (20ಕ್ಕೆ4), ಅನುಭವಿ ಸ್ಪಿನ್ನರ್ ಅಶ್ವಿನ್ (17ಕ್ಕೆ3) ಮತ್ತು ಕನ್ನಡಿಗ ಪ್ರಸಿದ್ಧ ಕೃಷ್ಣ (23ಕ್ಕೆ2) ತಡೆಯೊಡ್ಡಿದರು. ಪ್ರಮುಖ ಪ್ರಮುಖ ಬ್ಯಾಟರ್‌ಗಳ ವೈಫಲ್ಯದಿಂದಾಗಿ 19.3 ಓವರ್‌ಗಳಲ್ಲಿ 115 ರನ್ ಗಳಿಸಿ ಆಲೌಟ್ ಆಯಿತು.

ಪ್ರಸಿದ್ಧಗೆ ವಿರಾಟ್ ವಿಕೆಟ್: ಕಳೆದೆರಡು ಪಂದ್ಯಗಳಲ್ಲಿ ಸೊನ್ನೆ ಸುತ್ತಿದ್ದ ವಿರಾಟ್ ಈ ಪಂದ್ಯದಲ್ಲಿ ಫಫ್ ಡುಪ್ಲೆಸಿ ಜೊತೆಗೆ ಇನಿಂಗ್ಸ್ ಆರಂಭಿಸಿದರು. ಆದರೆ ಅದೃಷ್ಟ ಮತ್ತೊಮ್ಮೆ ಅವರಿಗೆ ಕೈಕೊಟ್ಟಿತು. 10 ಎಸೆತಗಳನ್ನು ಎದುರಿಸಿ 9 ರನ್ ಗಳಿಸಿದರು. ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿಯೇ ಬೆಂಗಳೂರಿನ ಪ್ರಸಿದ್ಧ ಹಾಕಿದ ಎಸೆತದಲ್ಲಿ ಫೀಲ್ಡರ್ ರಿಯಾನ್‌ಗೆ ಸುಲಭ ಕ್ಯಾಚ್ ಆದರು. ತುಸು ಹೋರಾಟ ತೋರಿದ ಫಫ್ (23) ಅವರನ್ನು ಏಳನೇ ಓವರ್‌ನಲ್ಲಿ ಕುಲದೀಪ್ ಸೇನ್ ಬೌಲಿಂಗ್‌ನಲ್ಲಿ ಬಟ್ಲರ್‌ಗೆ ಕ್ಯಾಚಿತ್ತರು. ನಂತರದ ಎಸೆತದಲ್ಲಿಯೇ ಗ್ಲೆನ್ ಮ್ಯಾಕ್ಸ್‌ವೆಲ್ ಔಟಾದರು.

ಇದಾದ ಮೇಲೆ ಬಂದ ಬ್ಯಾಟರ್‌ಗಳಲ್ಲಿ ಶಾಬಾಜ್ ಅಹಮದ್ (17) ಮತ್ತು ವಣಿಂದು ಹಸರಂಗಾ (18) ಅವರಿಬ್ಬರನ್ನು ಬಿಟ್ಟರೆ ಉಳಿದವರು, ಉಳಿದವರು ಎರಡಂಕಿ ಮೊತ್ತ ತಲುಪಲಿಲ್ಲ.

ಗೌರವ ಕಾಪಾಡಿದ ಪರಾಗ್: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮೊಹಮ್ಮದ್ ಸಿರಾಜ್ ಮತ್ತು ಜೋಶ್ ಹ್ಯಾಜಲ್‌ವುಡ್ ಅವರ ಸ್ವಿಂಗ್ ದಾಳಿಗೆ ಕುಸಿಯಬೇಕಿದ್ದ ರಾಜಸ್ಥಾನ ರಾಯಲ್ಸ್ ತಂಡದ ಗೌರವವನ್ನು ರಿಯಾನ್ ಪರಾಗ್ ಕಾಪಾಡಿದರು. ಆರಂಭಿಕ ದೇವದತ್ತ ಪಡಿಕ್ಕಲ್ ಮತ್ತು ಈ ಸಲದ ಟೂರ್ನಿಯಲ್ಲಿ ಮೂರು ಶತಕ ಬಾರಿಸಿರುವ ಜೋಸ್ ಬಟ್ಲರ್ (8 ರನ್) ಇಲ್ಲಿ ಮಿಂಚಲಿಲ್ಲ.

ತಂಡವು ಕೇವಲ 68 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು.

ರಿಯಾನ್ ಪರಾಗ್ ಒಬ್ಬರೇ ಬೌಲರ್‌ಗಳಿಗೆ ದಿಟ್ಟ ಉತ್ತರ ಕೊಟ್ಟರು. ಅವರ ಆಟದಲ್ಲಿ 4 ಸಿಕ್ಸರ್ ಮತ್ತು 3 ಬೌಂಡರಿಗಳು ದಾಖಲಾದವು. 16ನೇ ಓವರ್‌ನಲ್ಲಿ ಡೆರಿಲ್ ವಿಕೆಟ್ ಕಬಳಿಸಿದ ಹ್ಯಾಜಲ್‌ವುಡ್ ಜೊತೆಯಾಟ ಮುರಿದರು. ಇದರ ನಂತರ ಒಂದು ಕಡೆ ಬ್ಯಾಟರ್‌ಗಳು ಔಟಾಗುತ್ತಿದ್ದರೂ, ರಿಯಾನ್ ಮಾತ್ರ ದಿಟ್ಟತನದಿಂದ ಬ್ಯಾಟ್ ಬೀಸಿದರು. 19ನೇ ಓವರ್‌ನಲ್ಲಿ ರಿಯಾನ್ ಕ್ಯಾಚ್ ಕೈಚೆಲ್ಲಿದ ಹಸರಂಗಾ ಜೀವದಾನ ನೀಡಿದರು.



ರಿಯಾನ್ ಪರಾಗ್

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್ 8ಕ್ಕೆ 144 (20 ಓವರ್)

ಬಟ್ಲರ್ ಸಿ ಸಿರಾಜ್ ಬಿ ಹ್ಯಾಜಲ್‌ವುಡ್ 8 (9 ಎ, 4x1), ದೇವದತ್ತ ಎಲ್‌ಬಿಡಬ್ಲ್ಯು ಬಿ ಸಿರಾಜ್ 7 (7 ಎ, 6x1), ಅಶ್ವಿನ್ ಸಿ ಮತ್ತು ಬಿ ಸಿರಾಜ್ 17 (9 ಎ, 4x4), ಸಂಜು ಬಿ ಹಸರಂಗ 27 (21 ಎ, 4x1, 6x3), ಮಿಚೆಲ್ ಸಿ ಮ್ಯಾಕ್ಸ್‌ವೆಲ್ ಬಿ ಹ್ಯಾಜಲ್‌ವುಡ್ 16 (24 ಎ), ರಿಯಾನ್ ಔಟಾಗದೆ 56 (31 ಎ, 4x3, 6x4), ಹೆಟ್ಮೆಯರ್ ಸಿ ಪ್ರಭುದೇಸಾಯಿ ಬಿ ಹಸರಂಗ 3 (7 ಎ), ಬೌಲ್ಟ್ ಸಿ ಕೊಹ್ಲಿ ಬಿ ಹರ್ಷಲ್ 5 (7 ಎ), ಪ್ರಸಿದ್ಧ ರನ್ ಔಟ್ (ಸುಯಶ್) 2 (5 ಎ), ಚಾಹಲ್ ಔಟಾಗದೆ 0 (0 ಎ)

ಇತರೆ (ವೈಡ್ 3) 3

ವಿಕೆಟ್ ಪತನ: 1-11 (ದೇವದತ್ತ ಪಡಿಕ್ಕಲ್, 1.4), 2-33 (ರವಿಚಂದ್ರನ್ ಅಶ್ವಿನ್, 3.6), 3-33 (ಜೋಸ್ ಬಟ್ಲರ್, 4.1), 4-68 (ಸಂಜು ಸ್ಯಾಮ್ಸನ್, 9.3), 5-99 (ಡ್ಯಾರಿಲ್ ಮಿಚೆಲ್, 14.2), 6-102 (ಶಿಮ್ರೊನ್ ಹೆಟ್ಮೆಯರ್, 15.3), 7-110 (ಟ್ರೆಂಟ್ ಬೌಲ್ಟ್, 17.1), 8-121 (ಪ್ರಸಿದ್ಧ ಕೃಷ್ಣ, 18.4)

ಬೌಲಿಂಗ್: ಶಹಬಾಜ್ ಅಹಮ್ಮದ್ 3–0–35–0, ಮೊಹಮ್ಮದ್ ಸಿರಾಜ್ 4–0–30–2, ಜೋಶ್ ಹ್ಯಾಜಲ್‌ವುಡ್ 4–1–19–2, ವನಿಂದು ಹಸರಂಗ 4–0–23–2, ಹರ್ಷಲ್ ಪಟೇಲ್ 4–0–33–1, ಗ್ಲೆನ್ ಮ್ಯಾಕ್ಸ್‌ವೆಲ್ 1–0–4–0

ರಾಯಲ್ ಚಾಲೆಂಜರ್ಸ್ ಬೆಂಗಳೂರು 115 (19.3 ಓವರ್)

ವಿರಾಟ್ ಸಿ ಪರಾಗ್ ಬಿ ಪ್ರಸಿದ್ಧ 9 (10ಎ, 4X2), ಡುಪ್ಲೆಸಿ ಸಿ ಬಟ್ಲರ್ ಬಿ ಸೇನ್ 23 (21ಎ, 4X3, 6X1), ರಜತ್ ಬಿ ಅಶ್ವಿನ್ 16 (16ಎ, 6X1), ಮ್ಯಾಕ್ಸ್‌ವೆಲ್ ಸಿ ಪಡಿಕ್ಕಲ್ ಬಿ ಸೇನ್ 0 (1ಎ), ಶಹಬಾಜ್ ಸಿ ಪರಾಗ್ ಬಿ ಅಶ್ವಿನ್ 17 (27ಎ, 4X1), ಸುಯಶ್ ಸಿ ಪರಾಗ್ ಬಿ ಅಶ್ವಿನ್ 2 (7ಎ), ದಿನೇಶ್ ರನೌಟ್ (ಪ್ರಸಿದ್ಧ/ಚಾಹಲ್) 6 (4ಎ, 4X1), ಹಸರಂಗ ಸಿ ಮತ್ತು ಬಿ ಸೇನ್ 18 (13ಎ, 4X2), ಹರ್ಷಲ್ ಸಿ ಪರಾಗ್ ಬಿ ಸೇನ್ 8 (11ಎ, 6X1), ಸಿರಾಜ್ ಸಿ ಸೇನ್ ಬಿ ಪ್ರಸಿದ್ಧ 5 (5ಎ, 4X1), ಹ್ಯಾಜಲ್‌ವುಡ್ ಔಟಾಗದೆ 0 (2ಎ)

ಇತರೆ (ಬೈ 1, ಲೆಗ್‌ಬೈ 4, ವೈಡ್ 6) 11

ವಿಕೆಟ್ ಪತನ: 1-10 (ವಿರಾಟ್ ಕೊಹ್ಲಿ, 1.4), 2-37 (ಫಫ್ ಡುಪ್ಲೆಸಿ, 6.2), 3-37 (ಗ್ಲೆನ್ ಮ್ಯಾಕ್ಸ್‌ವೆಲ್, 6.3), 4-58 (ರಜತ್ ಪಾಟಿದಾರ್, 9.6), 5-66 (ಸುಯಶ್ ಪ್ರಭುದೇಸಾಯಿ, 11.4), 6-72 (ದಿನೇಶ್ ಕಾರ್ತಿಕ್, 12.4), 7-92 (ಶಹಬಾಜ್ ಅಹಮದ್, 15.4), 8-102 (ವನಿಂದು ಹಸರಂಗ, 16.4), 9-107 (ಮೊಹಮ್ಮದ್ ಸಿರಾಜ್, 17.4), 10-115 (ಹರ್ಷಲ್, 19.3)

ಬೌಲಿಂಗ್: ಟ್ರೆಂಟ್ ಬೌಲ್ಟ್ 3–0–20–0, ಪ್ರಸಿದ್ಧ ಕೃಷ್ಣ 4–0–23–2, ರವಿಚಂದ್ರನ್ ಅಶ್ವಿನ್ 4–0–17–3, ಕುಲದೀಪ್ ಸೇನ್ 3.3–0–20–4, ಡ್ಯಾರಿಲ್ ಮಿಚೆಲ್ 1–0–7–0, ಯಜುವೇಂದ್ರ ಚಾಹಲ್ 4–0–23–0

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 29 ರನ್‌ಗಳ ಜಯ

ಇಂದಿನ ಪಂದ್ಯ


ಗುಜರಾತ್ ಟೈಟನ್ಸ್–ಸನ್‌ರೈಸರ್ಸ್ ಹೈದರಾಬಾದ್

ಸ್ಥಳ: ವಾಂಖೆಡೆ ಕ್ರೀಡಾಂಗಣ

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

‘ನನ್ನ ವಿರುದ್ಧ ಹೊಟ್ಟೆಕಿಚ್ಚುಪಡುವ ಗುಂಪು ಭಾರತದಲ್ಲಿದೆ’



ರವಿ ಶಾಸ್ತ್ರಿ

ಲಂಡನ್ (ಪಿಟಿಐ): ‘ಭಾರತದಲ್ಲಿ ನನ್ನ ಮೇಲೆ ಸದಾ ಹೊಟ್ಟೆಕಿಚ್ಚುಪಡುವ ಜನರ ಒಂದು ಗುಂಪು ಇದೆ. ನನ್ನ ಎಲ್ಲ ವೈಫಲ್ಯವನ್ನೇ ಅವರೆಲ್ಲರೂ ಬಯಸುತ್ತಿದ್ದರು. ಅಂತಹವರೆದುರು ನನ್ನ ಚರ್ಮವನ್ನು ದಪ್ಪವಾಗಿಸಿಕೊಂಡೆ’ ಎಂದು ಕ್ರಿಕೆಟ್ ವೀಕ್ಷಕ ವಿವರಣೆಗಾರ ರವಿಶಾಸ್ತ್ರಿ ಹೇಳಿದ್ದಾರೆ.

ಇಂಗ್ಲೆಂಡ್ ಪುರುಷರ ಕ್ರಿಕೆಟ್ ತಂಡದ ನಿರ್ದೇಶಕರಾಗಿ ನೇಮಕವಾದ ಮಾಜಿ ಕ್ರಿಕೆಟಿಗ ರಾಬ್ ಕೀ ಅವರ ಕುರಿತು ರವಿ ‘ದ ಗಾರ್ಡಿಯನ್’ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ತಾವು 2014 ರಿಂದ 2021ರ ಅವಧಿಯಲ್ಲಿ ಭಾರತ ತಂಡಕ್ಕೆ ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸಿದ ಉದಾಹರಣೆ ನೀಡಿದರು.

‘ನನಗೆ ಕೋಚಿಂಗ್ ಪ್ರಮಾಣಪತ್ರಗಳು ಅಥವಾ ಲೆವೆಲ್ ಒನ್, ಲೆವೆಲ್ ಟುನಂತಹ ಅರ್ಹತೆಗಳು ಇರಲಿಲ್ಲ. ಆದರೂ ನಾನು ಸಾಧಿಸಿದ ಯಶಸ್ಸಿನಿಂದ ಮತ್ಸರ ತೋರುವ ಜನರು ಭಾರತದಲ್ಲಿದ್ದರು. ಆದರೆ ಡ್ಯುಕ್ ಬಾಲ್‌ಗೆ ಇರುವ ತೊಗಲಿಗಿಂತಲೂ ಹೆಚ್ಚು ನನ್ನ ಚರ್ಮ ದಪ್ಪ ಮಾಡಿಕೊಂಡೆ. ಅವರೆಲ್ಲರನ್ನೂ ಉದಾಸೀನ ಮಾಡಿದೆ. ರಾಬ್ ಕೂಡ ಅದೇ ರೀತಿಯಾಗಬೇಕು’ ಎಂದು ಸಲಹೆ ನೀಡಿದರು..

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ರಾಜಸ್ಥಾನ	8	6	2	0	0	12	0.561
ಗುಜರಾತ್	7	6	1	0	0	12	0.396
ಹೈದರಾಬಾದ್	7	5	2	0	0	10	0.691
ಲಖನೌ	8	5	3	0	0	10	0.334
ಬೆಂಗಳೂರು	9	5	4	0	0	10	-0.572
ಪಂಜಾಬ್	8	4	4	0	0	8	-0.419
ಡೆಲ್ಲಿ	7	3	4	0	0	6	0.715
ಕೋಲ್ಕತ್ತ	8	3	5	0	0	6	0.080
ಚೆನ್ನೈ	8	2	6	0	0	4	-0.538
ಮುಂಬೈ	8	0	8	0	0	0	-1.000

*ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

‘ಫುಟ್‌ಬಾಲ್: ಲಿವರ್‌ಪೂಲ್ ತಂಡಕ್ಕೆ ಸಲಾ ಮೇಲೆ ನಿರೀಕ್ಷೆ’



ಬೆಂಗಳೂರು: ಮಿಡ್ ಫೀಲ್ಡರ್ ಮೊಹಮ್ಮದ್ ಸಲಾ ಮೇಲೆ ಲಿವರ್‌ಪೂಲ್ ಎಫ್‌ಸಿ ಹೆಚ್ಚು ನಿರೀಕ್ಷೆ ಇಟ್ಟುಕೊಂಡಿದ್ದು, ವಿಲ್ಲಾರಿಯಲ್ ಎದುರಿನ ಪಂದ್ಯದಲ್ಲಿ ಅವರು ಮಿಂಚುವ ಸಾಧ್ಯತೆಯಿದೆ ಎಂದು ಇಂಗ್ಲೆಂಡ್ ತಂಡದ ಮಾಜಿ ಆಟಗಾರ ಡೇವಿಡ್ ಜೇಮ್ಸ್ ಹೇಳಿದ್ದಾರೆ.

ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಮಂಗಳವಾರ ವರ್ಚುವಲ್ ಆಗಿ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಅವರು ಮಾತನಾಡಿದರು.

ಲಿವರ್‌ಪೂಲ್ ತಂಡವು ಯುಇಎಫ್‌ಎ ಚಾಂಪಿಯನ್ಸ್ ಲೀಗ್‌ನ ಸೆಮಿಫೈನಲ್‌ನ ಮೊದಲ ಲೆಗ್‌ನಲ್ಲಿ ವಿಲ್ಲಾರಿಯಲ್ ತಂಡವನ್ನು ಎದುರಿಸಲಿದೆ. ಲಿವರ್‌ಪೂಲ್‌ನ ಆ್ಯನ್‌ಫೀಲ್ಡ್ ಕ್ರೀಡಾಂಗಣದಲ್ಲಿ ಈ ಪಂದ್ಯ ನಿಗದಿಯಾಗಿದೆ.

‘ಮೊಹಮ್ಮದ್ ಸಲಾ ಲಿವರ್‌ಪೂಲ್‌ನ ಆಸ್ತಿ. ಟೂರ್ನಿಯುದ್ದಕ್ಕೂ ಉತ್ತಮ ಸಾಮರ್ಥ್ಯ ತೋರುತ್ತ ಬಂದಿದ್ದಾರೆ. ಸಹಜವಾಗಿಯೇ ಅವರು ತಂಡವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ಭರವಸೆ ಹೆಚ್ಚಿದೆ’ ಎಂದು ಡೇವಿಡ್ ಹೇಳಿದರು.

ಗೋಲ್‌ಕೀಪರ್ ಆಗಿದ್ದ ಡೇವಿಡ್ ಲಿವರ್‌ಪೂಲ್ ಮತ್ತು ಮ್ಯಾಂಚೆಸ್ಟರ್ ಸಿಟಿ ಕ್ಲಬ್‌ಗಳ ಪರವೂ ಆಡಿದ್ದಾರೆ.

ಅಕ್ಟೋಬರ್‌ನಲ್ಲಿ ಕಣಕ್ಕೆ ಫೆಡರರ್

ಪ್ಯಾರಿಸ್ (ಎಎಫ್‌ಪಿ): ಕಳೆದ ಎರಡು ವರ್ಷಗಳಿಂದ ಮೊಣಕಾಲು ನೋವಿನಿಂದ ಬಳಲುತ್ತಿರುವ ರೋಜರ್ ಫೆಡರರ್ ಮತ್ತೆ ಟೆನಿಸ್‌ಗೆ ಮರಳಲಿದ್ದಾರೆ.

ಅಕ್ಟೋಬರ್‌ನಲ್ಲಿ ನಡೆಯುವ ಬಾಸೆಲ್ ಎಟಿಪಿ ಒಳಾಂಗಣ ಟೂರ್ನಿಯಲ್ಲಿ ಅವರು ಆಡಲಿದ್ದಾರೆ ಎಂದು ಟೂರ್ನಿಯ ಆಯೋಜಕರು ತಿಳಿಸಿದ್ದಾರೆ.

ಸಾತ್ವಿಕ್– ಚಿರಾಗ್ ಜಯದ ಆರಂಭ

ಮನಿಲಾ (ಪಿಟಿಐ): ಎದುರಾಳಿಗಳನ್ನು ಸುಲಭವಾಗಿ ಮಣಿಸಿದ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಸುತ್ತು ತಲುಪಿದ್ದಾರೆ.

ಮಂಗಳವಾರ ಇಲ್ಲಿ ಆರಂಭವಾದ ಚಾಂಪಿಯನ್‌ಷಿಪ್‌ನ ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತದ ಆಟಗಾರರು 21–13, 21–9ರಿಂದ ಥಾಯ್ಲೆಂಡ್‌ನ ಎಪಿಲುಕ್ ಗೇಟರ್‌ಹಾಂಗ್ ಮತ್ತು ನಾಚನನ್ ತುಲಮೊಕ್ ಅವರನ್ನು ಪರಾಭವಗೊಳಿಸಿದರು. ಕೇವಲ 27 ನಿಮಿಷಗಳಲ್ಲಿ ಪಂದ್ಯ ಮುಗಿಯಿತು.

ಸಾತ್ವಿಕ್– ಚಿರಾಗ್, ಮುಂದಿನ ಸುತ್ತಿನಲ್ಲಿ ಜಪಾನ್‌ನ ಅಕಿರೊ ಕೊಗಾ ಮತ್ತು ತೈಚಿ ಸೈಟೊ ಅವರನ್ನು ಎದುರಿಸುವರು.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಇಶಾನ್ ಭಟ್ನಾಗರ್ ಮತ್ತು ತನಿಶಾ ಕ್ರಾಸ್ಟೊ ಜೋಡಿಯು ಶುಭಾರಂಭ ಮಾಡಿತು. ಮೊದಲ ಸುತ್ತಿನಲ್ಲಿ ಈ ಜೋಡಿಯು 21-15, 21-17ರಿಂದ ಹಾಂಗ್‌ಕಾಂಗ್‌ನ ಲಾ ಚೆಕ್ ಹಿಮ್ ಮತ್ತು ಯೆಂಗ್ ಗಾ ಟಿಂಗ್ ಸವಾಲು ಮೀರಿದರು. ಪುರುಷರ ಡಬಲ್ಸ್‌ನಲ್ಲಿ ಕೃಷ್ಣಪ್ರಸಾದ್ ಗರಗ- ವಿಷ್ಣುವರ್ಧನ್ ಗೌಡ್ ಅಭಿಯಾನ ಅಂತ್ಯವಾಯಿತು.

ಭಾರತದ ಆಟಗಾರರು 10-21, 21-19, 16-21ರಿಂದ ದಕ್ಷಿಣ ಕೊರಿಯಾದ ಕಾಂಗ್ ಮಿನ್‌ಹ್ಯುಕ್ ಮತ್ತು ಕಿಮ್ ವೊನ್ಹೊ ಎದುರು ಸೋತರು.

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕೋವಿಡ್ ನಾಲ್ಕನೇ ಅಲೆ ಸಾಧ್ಯತೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮಾಸ್ಕ್ ಧರಿಸುವುದನ್ನು ಕಡ್ಡಾಯ ಮಾಡಿರುವ ಕ್ರಮ ಸರಿಯೇ?

ಜನಾಭಿಪ್ರಾಯ:

ಹೌದು	ಇಲ್ಲ
75%	25%

ಮಹಿಳಾ ಹಾಕಿ ರಾಯಭಾರಿ ಎಲ್ವಿರಾ ಬ್ರಿಟ್ಟೊ ನಿಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರವತ್ತರ ದಶಕದ ಮಹಿಳಾ ಹಾಕಿಯ ಚಾಂಪಿಯನ್ ಆಟಗಾರ್ತಿ ಮತ್ತು ಆಡಳಿತಗಾರ್ತಿ ಎಲ್ವಿರಾ ಬ್ರಿಟ್ಟೊ (81) ಮಂಗಳವಾರ ಬೆಳಿಗ್ಗೆ ನಿಧನರಾದರು.

ಅವರು ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

1960ರ ಜಪಾನ್, ಆಸ್ಟ್ರೇಲಿಯಾ ಮತ್ತು ಶ್ರೀಲಂಕಾದಲ್ಲಿ ಆಡಿದ್ದ ಭಾರತ ಮಹಿಳಾ ಹಾಕಿ ತಂಡದ ನಾಯಕಿ ಯಾಗಿದ್ದರು. ಅವರಿಗೆ ಇಬ್ಬರು ಸಹೋದರಿಯರಾದ ರೀಟಾ ಮತ್ತು ಮೇ ಕೂಡ ಆಟಗಾರ್ತಿಯಾಗಿದ್ದಾರೆ. ’ಬ್ರಿಟ್ಟೊ ಸಹೋದರಿಯರು’ ಎಂದೇ ಮೂವರೂ ಹಾಕಿ ಲೋಕದಲ್ಲಿ ಚಿರಪರಿಚಿತರಾಗಿದ್ದರು.



ಎಲ್ವಿರಾ ಬ್ರಿಟ್ಟೊ

ಆಗಿನ ಮೈಸೂರು ರಾಜ್ಯ ತಂಡವು 1960ರಿಂದ 67ರ ಅವಧಿಯಲ್ಲಿ 8 ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಲು ಇವರ ಆಟವೇ ಪ್ರಮುಖವಾಗಿತ್ತು. ಆಟದಿಂದ ನಿವೃತ್ತರಾದ ನಂತರವೂ ಹಾಕಿಯ ನಂಟು ಉಳಿಸಿಕೊಂಡಿದ್ದರು. ಕರ್ನಾಟಕ ರಾಜ್ಯ ಮಹಿಳಾ ಹಾಕಿ ಸಂಸ್ಥೆಗೆ ಎಂಟು ವರ್ಷ ಅಧ್ಯಕ್ಷೆಯಾಗಿದ್ದರು. ರಾಷ್ಟ್ರೀಯ ಆಯ್ಕೆ ಸಮಿತಿಯಲ್ಲಿ 12 ವರ್ಷಗಳ ಕಾಲ ಸರ್ಕಾರದಿಂದ ನಾಮನಿರ್ದೇಶಿತ ಸದಸ್ಯೆ ಯಾಗಿಯೂ ಕಾರ್ಯನಿರ್ವಹಿಸಿದ್ದರು.

ಆಂಗ್ಲೊ ಇಂಡಿಯನ್ ಕುಟುಂಬದ ಎಲ್ವಿರಾ ಬಾಲ್ಯದಲ್ಲಿ ಹಾಕಿ, ಕ್ರಿಕೆಟ್ ಮತ್ತು ಫುಟ್‌ಬಾಲ್ ಆಡುತ್ತಿದ್ದರು. ಆದರೆ, ಕೊನೆಗೆ ಆಯ್ಕೆ ಮಾಡಿಕೊಂಡಿದ್ದು ಹಾಕಿ ಆಟವನ್ನು. 1970ರವರೆಗೂ ಛಾಪು ಮೂಡಿಸಿದರು.

‘ಸುಮಾರು 50 ವರ್ಷಗಳ ಹಿಂದೆ ನಾವು ಜೊತೆಯಾಗಿ ಆಡಿದ್ದೆವು. ಆ ನೆನಪುಗಳನ್ನು ಮರೆಯಲು ಸಾಧ್ಯವೇ ಇಲ್ಲ. ಪಂದ್ಯಗಳಲ್ಲಿ ಆಡಲು ಪರಊರುಗಳಿಗೆ ರೈಲಿನ ಮೂರನೇ ದರ್ಜೆಯ ಬೋಗಿಗಳಲ್ಲಿ ಪ್ರಯಾಣಿಸಿದ್ದೆವೆ. ನಮ್ಮ ಸಮವಸ್ತ್ರಗಳನ್ನು ನಾವೇ ಹೊಲಿದುಕೊಳ್ಳುತ್ತಿದ್ದೆವು. ಊಟ, ತಿಂಡಿಯನ್ನೂ ನಾವೇ ಮಾಡಿಕೊಳ್ಳುತ್ತಿದ್ದೆವು’ ಎಂದು ಎಲ್ವಿರಾ ಅವರ ತಂಗಿ ಮೇ ನೆನಪಿಸಿಕೊಂಡರು.

‘ಈಚೆಗೆ ಈಸ್ಟರ್ ಹಬ್ಬದಂದು ಅವರನ್ನು ಭೇಟಿಯಾಗಿದ್ದೆ. ಅವರು ಅಸ್ವಸ್ಥರಿದ್ದರೂ ಕೂಡ ಹಾಕಿ ಆಟದ ಕುರಿತು ಮಾತನಾಡಿದಾಗ ಹುರುಪುಗೊಂಡು ಹಳೆಯ ನೆನಪುಗಳನ್ನು ಹಂಚಿಕೊಂಡಿದ್ದರು’ ಎಂದು ಮಾಜಿ ಹಾಕಿಪಟು ಜೂಡ್ ಫೆಲಿಕ್ಸ್ ಹೇಳಿದರು.

ಬುಧವಾರ ಬೆಳಿಗ್ಗೆ 9ಕ್ಕೆ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ಎಲ್ವಿರಾ ಅವರಿಗೆ ಅಂತಿಮ ನಮನ ಸಲ್ಲಿಸಲಾಗುವುದು. ನಂತರ ಹೊಸೂರು ಸಿಮೆಟ್ರಿಯಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಹಾಕಿ ಕರ್ನಾಟಕ ತಿಳಿಸಿದೆ.

ಜೈನ್ ನಾಗಾಲೋಟ; ಮುಂಬೈ ಮುನ್ನಡೆ

ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟ: ಈಜಿನಲ್ಲಿ 8 ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರನೇ ದಿನವೂ ಈಜುಕೊಳದಲ್ಲಿ ಪದಕಗಳ ಬೇಟೆಯಾಡಿದ ಆತಿಥೇಯ ಜೈನ್ ವಿವಿ ಇಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದಲ್ಲಿ ಪಾರಮ್ಯ ಮುಂದುವರಿಸಿದೆ. ಜೈನ್‌ಗೆ ಭಾರಿ ಪೈಪೋಟಿ ಒಡ್ಡಿರುವ ಮುಂಬೈ ವಿಶ್ವವಿದ್ಯಾಲಯ ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

7 ಚಿನ್ನದೊಂದಿಗೆ ಜೈನ್ ವಿವಿ ಒಟ್ಟು 10 ಪದಕಗಳನ್ನು ಕಲೆ ಹಾಕಿದೆ. ಮುಂಬೈ ವಿವಿ ಖಾತೆಯಲ್ಲೂ 10 ಪದಕಗಳು ಇವೆ. ಆದರೆ ಆ ತಂಡ ಗೆದ್ದಿರುವ ಚಿನ್ನದ ಪದಕ ಐದು ಮಾತ್ರ. ಮಹಾರಾಷ್ಟ್ರದ ಸಾವಿತ್ರಿಬಾಯಿ ಫುಲೆ ವಿವಿ 4 ಚಿನ್ನದೊಂದಿಗೆ 15 ಪದಕ ಗಳಿಸಿ ಮೂರನೇ ಸ್ಥಾನದಲ್ಲಿದೆ. ಮೊದಲ ಆವೃತ್ತಿಯ ಚಾಂಪಿಯನ್ ಪಂಜಾಬ್ ವಿವಿ 4 ಚಿನ್ನದೊಂದಿಗೆ ನಾಲ್ಕನೇ ಸ್ಥಾನ ಗಳಿಸಿದೆ. ತಮಿಳುನಾಡಿನ ಅಣ್ಣಾ ಮತ್ತು ಮಹಾರಾಷ್ಟ್ರದ ಶಿವಾಜಿ ವಿವಿಗಳು ಕೂಡ 4 ಚಿನ್ನದ ಪದಕಗಳನ್ನು ಗೆದ್ದುಕೊಂಡಿವೆ. ಕರ್ನಾಟಕದ ಒಟ್ಟು 7 ವಿವಿಗಳು ಕನಿಷ್ಠ ಒಂದು ಪದಕವನ್ನಾದರೂ ಗೆದ್ದುಕೊಂಡಿವೆ. ಮಂಗಳವಾರ ಈಜು ಸ್ಪರ್ಧೆಯ ಒಟ್ಟು 10 ಫೈನಲ್‌ಗಳಲ್ಲಿ 4 ಚಿನ್ನದ ಪದಕಗಳು ಜೈನ್ ವಿವಿ ಪಾಲಾದವು. ಎಂಟು ದಾಖಲೆಗಳು ಮುರಿದುಬಿದ್ದವು.

ಮೂರನೇ ದಿನದ ಫಲಿತಾಂಶಗಳು: ಪುರುಷರ ಈಜು: 50 ಮೀ ಬ್ರೆಸ್ಟ್‌ಸ್ಟ್ರೋಕ್: ಧನುಷ್ (ಅಣ್ಣಾ)–1. ಕಾಲ: 28.90 (ಕೂಟ ದಾಖಲೆ. ಹಳೆಯದು: 29.57,ಅಂಶ್ ಅರೋರ), ಜಯ್ ಏಕಬೋಟೆ (ಮುಂಬೈ)–2, ಯಾದೇಶ್ ಬಾಬು (ಅಣ್ಣಾ)–3; 50 ಮೀ ಬಟರ್‌ಫ್ಲೈ: ಆದಿತ್ಯ ದಿನೇಶ್ (ಅಣ್ಣಾ)–1. ಕಾಲ: 25.49, ಬೆನೆಡಿಕ್ಟನ್ ರೋಹಿತ್ (ಅಣ್ಣಾ)–2, ಸ್ವಪ್ನಿಲ್ ಚಕ್ರವರ್ತಿ (ಪಶ್ಚಿಮ ಬಂಗಾಳ ವಿವಿ)–3; 200 ಮೀ ಬಟರ್‌ಫ್ಲೈ: ಆರ್ಯನ್ ಪಾಂಚಾಲ್ (ಗುಜರಾತ್ ವಿವಿ)–1. ಕಾಲ: 2:04.72 (ಕೂಟ ದಾಖಲೆ. ಹಳೆಯದು: 2:09.88, ವಿನಾಯಕ್ ಪರಿಹಾರ್); ರಾಜ್ ರೆಲೇಕರ್ (ಜೈನ್)–2, ವಿಕಾಸ್ ಪ್ರಭಾಕರ್ (ಎಸ್‌ಆರ್‌ಎಂ)–3; 200 ಬ್ಯಾಕ್‌ಸ್ಟ್ರೋಕ್: ಶಿವ ಶ್ರೀಧರ್ (ಜೈನ್)–1. ಕಾಲ: 2:06.29 (ಕೂಟ ದಾಖಲೆ. ಹಳೆಯದು: 2:08.82, ಅನುರಾಗ್ ದಾಗರ್), ಸಿದ್ಧಾರ್ಥ್ ಸೇಜ್ವಾಲ್–2, ಅನುರಾಗ್ ದಾಗಾರ್ (ಇಬ್ಬರೂ ಪಂಜಾಬ್ ವಿವಿ)–3; 1500 ಮೀ ಫ್ರೀಸ್ಟೈಲ್: ಶುಭಂ ದೈಗುಡೆ (ಸಾವಿತ್ರಿಬಾಯಿ ಫುಲೆ)–1. ಕಾಲ: 16:21.96 (ಕೂಟ ದಾಖಲೆ. ಹಳೆಯದು: 17:55.16, ಶೌನಕ್ ಪ್ರಸಾದ್), ಅಹಮ್ಮದ್ ಹಬೀಬುಲ್ಲ (ಮದ್ರಾಸ್)–2, ಮೋಹಿತ್ ವೆಂಕಟೇಶ್ (ಪಿಇಎಸ್); 4x100 ಮೀ ಫ್ರೀಸ್ಟೈಲ್: ಜೈನ್ ವಿವಿ (ಶಿವ ಶ್ರೀಧರ್, ಸಂಜಯ್, ರೆಲೇಕರ್ ಶ್ರೀಹರಿ)–1. ಕಾಲ: 3:34.86 (ಕೂಟ ದಾಖಲೆ. ಹಳೆಯದು: 3:46.14, ಪಂಜಾಬ್ ವಿವಿ); ಅಣ್ಣಾ ವಿವಿ–2, ಪಂಜಾಬ್ ವಿವಿ–3. ಮಹಿಳೆಯರ 50 ಮೀ ಬ್ರೆಸ್ಟ್ ಸ್ಟ್ರೋಕ್: ಆರತಿ ಪಾಟೀಲ್ (ಮುಂಬೈ)–1. ಕಾಲ: 34.95 (ಕೂಟ ದಾಖಲೆ. ಹಳೆಯದು: 36.28, ಆರತಿ ಪಾಟೀಲ್); ಜ್ಯೋತಿ ಪಾಟೀಲ್ (ಮುಂಬೈ)–2, ರೀತಾ ವರ್ಮಾ (ಪಂಜಾಬ್); 50 ಮೀ ಬಟರ್‌ಫ್ಲೈ: ಋತುಜಾ ಖಾಡೆ (ಶಿವಾಜಿ)–1. ಕಾಲ: 29.16 (ಕೂಟ ದಾಖಲೆ. ಹಳೆಯದು: 29.74, ಆರ್ಯ ರಾಜಗುರು); ಸೃಷ್ಟಿ ಉಪಾಧ್ಯಾಯ (ಜಾಧವಪುರ್)–2, ಸಾಧ್ವಿ ಧುರಿ (ಸಾವಿತ್ರಿಬಾಯಿ ಫುಲೆ)–3; 200 ಮೀ ಬ್ಯಾಕ್‌ಸ್ಟ್ರೋಕ್: ಶೃಂಗಿ ಬಾಂದೇಕರ್ (ಜೈನ್)–1. ಕಾಲ: 2:27.27 (ಕೂಟ ದಾಖಲೆ. ಹಳೆಯದು: 2:36.32, ದಾಮಿನಿ ಗೌಡ), ಮಧುಮಿತಾ (ಮದ್ರಾಸ್)–2, ದಾಮಿನಿ ಗೌಡ (ರಾಜೀವ್‌ಗಾಂಧಿ)–3; 400 ಮೀ ವೈಯಕ್ತಿಕ ಮೆಡ್ಲೆ: ಕಲ್ಯಾಣಿ ಸಕ್ಸೇನ (ವೀರ್ ನರ್ಮದ್)–1.ಕಾಲ 5:24.40 (ಕೂಟ ದಾಖಲೆ. ಹಳೆಯದು: 5:24.78, ಕಲ್ಯಾಣಿ ಸಕ್ಸೇನ), ಶೃಂಗಿ ಬಾಂದೇಕರ್ (ಜೈನ್)–2, ಪ್ರೀತಾ (ಬೆಂಗಳೂರು ವಿವಿ)–3.

ಪುರುಷರ ವೇಟ್‌ಲಿಫ್ಟಿಂಗ್: 96ಕೆಜಿ: ವೈಷ್ಣವ್ ಠಾಕೂರ್ (ಸಾವಿತ್ರಿಬಾಯಿ ಫುಲೆ)–1. ಭಾರ: 135, ಗುರುಪ್ರೀತ್ (ಸಂತ್ ಬಾಬಾ ಭಾಗ್)–2, ಪುನೀತ್ ಚಂದ್ರ (ಕೆಐಐಟಿ)–3; 102 ಕೆಜಿ: ಚರಾಗ್ (ಸಾವಿತ್ರಿಬಾಯಿ ಫುಲೆ)–1. ಭಾರ: 139 ಕೆಜಿ, ಸಿದ್ಧಾಂತ್ ಚೌಧರಿ (ಮಹಾತ್ಮ ಜ್ಯೋತಿಬಾ ಫುಲೆ)–2, ಜಸ್ವೀರ್ ಸಿಂಗ್ (ಪಂಜಾಬ್); 109 ಕೆಜಿ: ವಿಘ್ನೇಶ್ (ಅಣ್ಣಾ)–1. ಭಾರ: 124 ಕೆಜಿ, ಸುನಿಲ್ ಪ್ರಶಾಂತ್ (ನಾಗಪುರ್)–2, ಪ್ರಿನ್ಸ್ (ಲವ್ಲಿ)–3. ಮಹಿಳೆಯರ 76 ಕೆಜಿ: ಸ್ವಾತಿ ಕಿಶೋರ್ (ಕ್ಯಾಲಿಕಟ್)–1. ಭಾರ: 188ಕೆಜಿ, ಧಾತ್ರಿ (ಆದಿಕವಿ ನಾಣಯ್ಯ)–2, ನಿಸಿಮೋಳ್ ಥಾಮಸ್ (ಕ್ಯಾಲಿಕಟ್)–3; 81 ಕೆಜಿ: ರಾಖಿ (ಪಂಜಾಬ್)–1. ಭಾರ: 194 ಕೆಜಿ, ಅಂಜಲಿ ಜೋಶಿ (ಲವ್ಲಿ)–2, ಯೋಗಿತಾ (ಸಾವಿತ್ರಿಬಾಯಿ ಫುಲೆ)–3; 87 ಕೆಜಿ: ಅಕ್ಷತಾ (ಲವ್ಲಿ)–1. ಭಾರ: 197ಕೆಜಿ; ಡಿಂಪಿ (ಚಂಡೀಗಢ್)–2, ಬಿಶ್ನಾ ವರ್ಗೀಸ್ (ಕ್ಯಾಲಿಕಟ್)–3.



ಬೆಂಗಳೂರು ವಿವಿಯ ಪವನ್ ಮಡಿವಾಳರ್ (ನೀಲಿ ಪೋಷಾಕು) ಹಾಗೂ ಗುರುನಾನಕ್ ದೇವ್ ವಿವಿಯ ಜರ್ಮನ್‌ಜೀತ್ ಸಿಂಗ್ ಅವರು ಹಾಕಿ ಪಂದ್ಯದಲ್ಲಿ ಚೆಂಡಿಗಾಗಿ ಪೈಪೋಟಿ ನಡೆಸಿದರು– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಪದಕ ಪಟ್ಟಿಯಲ್ಲಿ ಕರ್ನಾಟಕದ ವಿಶ್ವವಿದ್ಯಾಲಯಗಳು

ವಿಶ್ವವಿದ್ಯಾಲಯ	ಚಿನ್ನ	ಬೆಳ್ಳಿ	ಕಂಚು	ಒಟ್ಟು	ಸ್ಥಾನ
ಜೈನ್	7	2	1	10	1
ಬೆಂಗಳೂರು	-	1	1	2	29
ರಾಜೀವ್‌ಗಾಂಧಿ	-	-	2	2	42
ಕ್ರೈಸ್ಟ್	-	-	1	1	45
ರಾಮಯ್ಯ	-	-	1	1	48
ಮಂಗಳೂರು	-	-	1	1	50
ಪಿಇಎಸ್	-	-	1	1	51